ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 12

ಮಾರ್ಚ್ 20, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com





ಹಳಿ ಇಲ್ಲದೇ ಓಡಿದ 'ಮಮತಾ' ರೈಲು

ರೇಷ್ಮೆ ಬೆಳೆಗಾರನಿಗೆ ಸುಂಕನೀತಿಯ ಉರುಳು





ಮಹಿಳಾ ವಿಮೋಚನೆ : ದಾರಿ ಯಾವುದು ?

ಚುನಾವಣಾ ಸುಧಾರಣೆ : ಗೊರಟೆ ಸುತ್ತ ಗಿರಕಿ

ವಿಶ್ವ ಕನ್ನಡ ಸಮ್ಮೇಳನವೋ ವಿಶ್ವ ಹೂಡಿಕೆದಾರರ ಸಮಾವೇಶವೋ ?

ಮಂಡ್ಯ : ಬಡತನದ ಬೇಗೆಯಲಿ ಬಲಿಯಾಯ್ತು ಹಸುಗೂಸು

ಬಂಡವಾಳಶಾಹಿ ರಾಷ್ಟ್ರಗಳ ಮಾಲೀಕರು ಕಾರ್ಮಿಕರಿಗೆ ಕೆಲವು ಸೌಲಭ್ಯಗಳನ್ನು ನೀಡುವಂತೆ ಮಾಡಿದ್ದ ಬಲಿಷ್ಠ ಸಮಾಜವಾದಿ ಬಣವು ಇಂದು ಇಲ್ಲದಿರುವ ಕಾರಣ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಮಾಲೀಕರು ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸಿದ್ದಾರೆ. ರಾಷ್ಟ್ರಗಳ ಒಳಗೆ ಮತ್ತು ನಡುವೆ ಅಸಮಾನತೆಯೂ ಹೆಚ್ಚುತ್ತಿದೆ. ಅಸಮಾನತೆಯನ್ನು ಮುಂದುವರೆಸುವ ಜಾಗತೀಕರಣದ ನವಉದಾರವಾದಿ ನೀತಿಗಳು ಜಾರಿಯಲ್ಲಿ ಇರುವವರೆಗೆ ಮಹಿಳಾ ಸಮಾನತೆಯನ್ನು ಸಾಧಿಸಲು ಸಾಧ್ಯವಿಲ್ಲ. ಶೋಷಣೆ ಮತ್ತು ಅಸಮಾನತೆಗಳು ಅಂತರ್ಗತವಾಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಸೋಲಿಸುವವರೆಗೆ ಮಹಿಳೆಯರ ನಿಜವಾದ ಸಮಾನತೆ ಸಾಧ್ಯವಿಲ್ಲ. ಅಂತರಾಷ್ಟ್ರೀಯ ಮಹಿಳಾ ದಿನದ 101ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭ ಕಾರ್ಮಿಕ ವರ್ಗದ ಐಕ್ಯತೆಯನ್ನು ಬಲಪಡಿಸಲು ಪಣ ತೊಡುವ ಸಂದರ್ಭವಾಗಿದೆ. ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡ ಸಮಸ್ತ ಕಾರ್ಮಿಕರ ಐಕ್ಯತೆ ಸಾಧಿಸಿ ಮಹಿಳೆಯರ ನಿಜವಾದ ವಿಮೋಚನೆಗೆ ದಾರಿ ಮಾಡಿಕೊಡಲು ಶೋಷಕ ವ್ಯವಸ್ಥೆಯನ್ನು ಸೋಲಿಸಲು ಹೋರಾಡಲು ಕಟಿಬದ್ಧರಾಗಬೇಕಾಗಿದೆ.




ಮಹಿಳಾ ವಿಮೋಚನೆಗೆ ದಾರಿ ಯಾವುದು?

ಡಾ. ಹೇಮಲತಾ

ಹಿನ್ನೆಲೆ

100 ವರ್ಷಗಳ ಹಿಂದೆ ದುಡಿಯುವ ಮಹಿಳೆಯರು ಎತ್ತಿದ್ದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಆಗಿರುವ ಪ್ರಗತಿಯ ಕುರಿತು ಪರಿಶೀಲಿಸುವ ಸಂದರ್ಭ ಇದಾಗಿದೆ. ಮಹಿಳೆಯರ ಸ್ಥಿತಿಗತಿಗಳು ಸ್ವಲ್ಪ ಉತ್ತಮಗೊಂಡಿವೆ ಎಂಬುದರಲ್ಲಿ ಅನುಮಾನವಿಲ್ಲ. ವಿಶ್ವದಾದ್ಯಂತ ಇಂದು ಹೆಚ್ಚು ಮಹಿಳೆಯರು ಶಿಕ್ಷಿತರಾಗಿದ್ದಾರೆ. ಮನೆಯಿಂದ ಹೊರಗೆ ದುಡಿಯುತ್ತಿದ್ದಾರೆ. ವಿಭಿನ್ನ ರಂಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರಗಳನ್ನು ಮತ್ತು ಬೃಹತ್ ಸಂಸ್ಥೆಗಳನ್ನು ಮುನ್ನಡೆಸುತ್ತಿದ್ದಾರೆ. ಅವರ ಕಠಿಣ ಶ್ರಮ ಮತ್ತು ದೃಢ ನಿಲುಮೆಗಳಿಂದ ಎಲ್ಲಾ ಸವಾಲುಗಳನ್ನು ಎದುರಿಸಿ ನಾವೂ ಸಹ ಗಂಡಸರಷ್ಟೇ ಸಮಾನರು ಮಾತ್ರವಲ್ಲದೆ ಕೆಲವೊಮ್ಮೆ ಅದಕ್ಕಿಂತ ಹೆಚ್ಚು ಸಾಮರ್ಥ್ಯ ಉಳ್ಳವರು ಎಂಬುದನ್ನು ಸಾಬೀತುಪಡಿಸಿದ್ದಾರೆ.

ಆದರೆ ದುಡಿಯುವ ಮಹಿಳೆಯರು ಎತ್ತಿದ್ದ ಬೇಡಿಕೆಗಳ ಕುರಿತು ಪರಿಶೀಲಿಸಿದಲ್ಲಿ ಇಂದು ಸಹ ದುಡಿಯುವ ಮಹಿಳೆಯರ ವಿಶಾಲ ವಿಭಾಗದ ಪರಿಸ್ಥಿತಿ, ಶತಮಾನದ ಹಿಂದೆ ಇದ್ದಂತೆ ಇರುವುದು ಕಣ್ಣಿಗೆ ರಾಚುತ್ತದೆ. 1910ರಲ್ಲಿ ನಡೆದ ಸಮಾಜವಾದಿ ಮಹಿಳೆಯರ 2ನೇ ಅಂತರ್ರಾಷ್ಟ್ರೀಯ ಸಮ್ಮೇಳನವು ಕ್ಲಾರಾ ಜೆಟ್‌ಕಿನ್ ಮುತುವರ್ಜಿ ಮೇರೆಗೆ ಮಹಿಳೆಯರ ಬೇಡಿಕೆಗಳನ್ನು ಕೇಂದ್ರೀಕರಿಸಿ ಜಗತ್ತಿನಾದ್ಯಂತ 1 ದಿನವನ್ನು ಪ್ರತಿ ವರ್ಷ ಆಚರಿಸಲು ಕರೆ ನೀಡಿತ್ತು. ಸಮ್ಮೇಳನವು ದುಡಿಯುವ ಮಹಿಳೆಯರಿಗೆ ಹೆರಿಗೆ ಸೌಲಭ್ಯ ಮತ್ತು ಮಹಿಳೆಯರಿಗೆ ಮತದಾನದ ಹಕ್ಕನ್ನು ಒತ್ತಾಯಿಸಿತ್ತು ಹಾಗೂ ರಾತ್ರಿ ಪಾಳಿ ಕೆಲಸವನ್ನು ವಿರೋಧಿಸಿತ್ತು.



ಕ್ಲಾರ ಜೆಟ್‌ಕಿನ್

1857ರ ಮಾರ್ಚ್ 8ರಂದು ನ್ಯೂಯಾರ್ಕ್‌ನಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಎತ್ತಿದ್ದ ಬೇಡಿಕೆಗಳ ಆಧಾರದಲ್ಲಿ ರೂಪುಗೊಂಡ ಮಹಿಳೆಯರ ಹೋರಾಟದಿಂದ ಅಂತರ್ರಾಷ್ಟ್ರೀಯ ಮಹಿಳಾ ದಿನವು ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ. ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಕೆಲಸದ ವೇಳೆಯ ಕಡಿತ ಪ್ರಮುಖ ಬೇಡಿಕೆಗಳಾಗಿದ್ದವು.

ಒಂದೂವರೆ ಶತಮಾನದ ನಂತರವೂ ಇಂದು ಸಹಾ ದುಡಿಯುವ ಮಹಿಳೆಯರು ಇದೇ ಬೇಡಿಕೆಗಳಿಗಾಗಿ ಒತ್ತಾಯಿಸುತ್ತಿದ್ದಾರೆ.

19ನೇ ಶತಮಾನದಲ್ಲಿ ನ್ಯೂಯಾರ್ಕ್‌ನ ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಕಾರ್ಮಿಕರ ಪರಿಸ್ಥಿತಿ ಮತ್ತು ಇಂದಿನ ವಿಶೇಷ ಆರ್ಥಿಕ ವಲಯಗಳಲ್ಲಿನ ಮಹಿಳಾ ಕಾರ್ಮಿಕರ ಪರಿಸ್ಥಿತಿಗಳಲ್ಲಿ ಯಾವ ಭಿನ್ನತೆಯನ್ನು ಕಾಣಲು ಸಾಧ್ಯವಾಗದು. ಉದಾಹರಣೆಗೆ ಅಂದು 15 ವರ್ಷದ ವಯಸ್ಸಿನ ಕಾರ್ಮಿಕರು ಉತ್ತಮ ಬೆಳಕಿಲ್ಲದ ಪರಿಸ್ಥಿತಿಯಲ್ಲಿ, ಕಿವಿಯನ್ನು ಕಿವುಡಾಗಿಸುವಂತಹ ಮಿಷನರಿಗಳ ಶಬ್ದದಲ್ಲಿ, ಸುತ್ತಲ ಪರಿಸರದಲ್ಲಿನ ಹತ್ತಿಯ ಧೂಳಿನಲ್ಲಿ ಕೆಲಸ ಮಾಡಬೇಕಿತ್ತು. ಅಗ್ನಿ ಅಪಘಾತಗಳು ನಿರಂತರವಾಗಿ ಸಂಭವಿಸಿ ಹಲವರನ್ನು ಬಲಿ ತೆಗೆದುಕೊಳ್ಳುತ್ತಿದ್ದವು. ಪ್ರತಿಯೊಂದಕ್ಕೂ ಮಹಿಳಾ ಕಾರ್ಮಿಕರಿಗೆ ದಂಡ ವಿಧಿಸಲಾಗುತ್ತಿತ್ತು. ಮಾತನಾಡುವುದು, ನಗುವುದು, ಹಾಡುವುದು, ಮುಂತಾದವಕ್ಕೆಲ್ಲಾ ಅಥವಾ ಬಟ್ಟೆಗಳ ಮೇಲೆ ಮಿಷನ್ ಆಯಿಲ್‌ಗಳ ಕಲೆ ಉಂಟಾದರೆ, ಹೊಲಿಗೆಗಳು ದೊಡ್ಡದಾಗಿದ್ದರೆ. ಅಥವಾ ಸಣ್ಣದಾಗಿದ್ದರೆ ಎಲ್ಲದಕ್ಕೂ ದಂಡ ವಿಧಿಸಲಾಗುತ್ತಿತ್ತು. ಹೆಚ್ಚುವರಿ ಸಮಯ ದುಡಿಯುವಂತೆ ಮಾಡಲಾಗುತ್ತಿತ್ತು. ಆದರೆ ಹೆಚ್ಚುವರಿ ಗಂಟೆಗಳ ದುಡಿಮೆಗೆ ಯಾವುದೇ ವೇತನವಿರುತ್ತಿರಲಿಲ್ಲ. ಶೌಚಾಲಯಗಳ ಬಳಕೆಗೆ ಮಹಿಳೆಯರು ಕಟ್ಟಡಗಳಿಂದ ಹೊರ ಹೋಗಬೇಕಿದ್ದ ಕಾರಣ ಆಡಳಿತ ಮಂಡಳಿಗಳು ಹೊರ ಹೋಗುವ ಬಾಗಿಲುಗಳಿಗೆ ಬೀಗ ಹಾಕಿ ಫೋರ್‌ಮೆನ್‌ಗಳ ಕೈಯಲ್ಲಿ ಕೀಲಿ ಕೊಟ್ಟು ಕೆಲಸದಲ್ಲಿನ ಅಡಚಣೆಗಳನ್ನು ನಿರ್ಬಂಧಿಸಲು ಯತ್ನಿಸುತ್ತಿದ್ದರು.

ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಮಹಿಳೆಯರು ಮತದಾನದ ಹಕ್ಕನ್ನು ಗಳಿಸಿದ್ದರೂ ಸಹಾ ನಮ್ಮ ದೇಶವನ್ನು ಒಳಗೊಂಡಂತೆ ಎಲ್ಲೆಡೆಯೂ ಚುನಾಯಿತ ಸಂಸ್ಥೆಗಳಲ್ಲಿ ಅವರ ಸಂಖ್ಯೆ ಅತಿ ಕಡಿಮೆಯಾಗಿದೆ.

ಸಮಾನತೆಗಾಗಿ ಹೋರಾಟ

ಎಲ್ಲಾ ರಾಜಕೀಯ ಪಕ್ಷಗಳ ಬಹಿರಂಗ ಬೆಂಬಲದ ನಡುವೆಯು ಮಹಿಳಾ ಮೀಸಲಾತಿ ಮಸೂದೆಯು ಲೋಕಸಭೆಯಲ್ಲಿ ಇನ್ನೂ ಅಂಗೀಕಾರವಾಗಬೇಕಿದೆ. ಅಂತರಾಷ್ಟ್ರೀಯ ಮಹಿಳಾ ದಿನ ಆಚರಣೆಯ ಕರೆಗೆ ಸಿಕ್ಕ ವ್ಯಾಪಕ ಬೆಂಬಲ, ಸಮಾನ ಹಕ್ಕುಗಳಿಗಾಗಿನ ಮಹಿಳೆಯರ ಹೋರಾಟಗಳು, ರಷ್ಯಾ ಮತ್ತಿತರ ಹಲವಾರು ದೇಶಗಳಲ್ಲಿ ಸಮಾಜವಾದದ ಸ್ಥಾಪನೆ ಅಲ್ಲಿನ ಮಹಿಳೆಯರಿಗೆ ಸಮಾನ ಹಕ್ಕುಗಳ ನೀಡಿಕೆ ಜಗತ್ತಿನಾದ್ಯಂತ ವಿವಿಧ ಸರ್ಕಾರಗಳನ್ನು ಮತ್ತು ವಿಶ್ವ ಸಂಸ್ಥೆಯನ್ನು ಲಿಂಗ ಸಮಾನತೆಯ ವಿಷಯಕ್ಕೆ ಗಮನ ನೀಡುವಂತೆ ಮಾಡಿದೆ.

ಮಹಿಳೆಯರ 4 ವಿಶ್ವ ಸಮ್ಮೇಳನಗಳು, ವಿಶ್ವ ಸಂಸ್ಥೆಯ ನಿರ್ಣಯಗಳು, 1975ರಲ್ಲಿ ಮಹಿಳೆಯರ ಅಂತರಾಷ್ಟ್ರೀಯ ವರ್ಷಾಚರಣೆ ಮತ್ತು 1976-85ರವರೆಗೆ ವಿಶ್ವ ಸಂಸ್ಥೆಯ ಕರೆಯಂತೆ ಮಹಿಳೆಯರ ದಶಕ ಆಚರಣೆ ಎಲ್ಲವೂ ಸೇರಿ ಸರ್ಕಾರಗಳ ಮತ್ತು ಜನತೆಯ ಗಮನವನ್ನು ಮಹಿಳೆಯರ ಹಕ್ಕುಗಳ ವಿಚಾರಗಳೆಡೆಗೆ ಸೆಳೆದವು. ಮಹಿಳಾ ಚಳುವಳಿಗಳ ಮತ್ತು ಕಾರ್ಮಿಕ ಸಂಘಗಳ ಹೋರಾಟಗಳು ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ ಮಹಿಳೆಯರನ್ನು ತೊಡಗಿಸಲು ಸರ್ಕಾರಗಳ ಮೇಲೆ ಒತ್ತಡ ತಂದು ಕೆಲವು ಕ್ರಮಗಳನ್ನು ವಹಿಸುವಂತೆ ಮಾಡಿದೆ.

ಲಿಂಗಾಧಾರಿತ ತಾರತಮ್ಯ ಇರಬಾರದೆಂಬುದು ಇಂದು ಸರ್ವ ಸಾಮಾನ್ಯವಾಗಿ ಒಪ್ಪಿಗೆ ಪಡೆದ ಅಂಶವಾಗಿದೆ. ಇಂದು ಜಗತ್ತಿನ ಬಹುತೇಕ ದೇಶಗಳಲ್ಲಿ ಮಹಿಳೆಯರಿಗೆ ಶಾಸನಬದ್ಧವಾಗಿ ಸಮಾನ ಹಕ್ಕುಗಳನ್ನು ನೀಡಲಾಗಿದೆ. ಆದರೂ, ಪ್ರಾಯೋಗಿಕವಾಗಿ ಜಗತ್ತಿನಾದ್ಯಂತ ಮುಂದುವರೆದ ಬಂಡವಾಳಶಾಹಿ ದೇಶಗಳನ್ನು ಒಳಗೊಂಡಂತೆ ದೈನಂದಿನ ಜೀವನದಲ್ಲಿ ದುಡಿಯುವ ಸ್ಥಳವನ್ನು ಒಳಗೊಂಡಂತೆ ಎಲ್ಲೆಡೆ ಮಹಿಳೆಯರಿಗೆ ತಾರತಮ್ಯ ಮಾಡಲಾಗುತ್ತಿದೆ.

ಕಡಿಮೆ ಸ್ಥಾನಮಾನಕ್ಕೆ ಇರುವ ನೈಜ ಕಾರಣಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದಲ್ಲಿ ಮಹಿಳೆಯರ ಮೇಲೆ ಮುಂದುವರೆದಿರುವ ತಾರತಮ್ಯ ಮತ್ತು ದಮನವನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯವಾಗುವುದಿಲ್ಲ.

ಪುರುಷರು ಮತ್ತು ಮಹಿಳೆಯರ ನಡುವೆ ಹಾಗೂ ಶ್ರೀಮಂತರು ಮತ್ತು ಬಡವರ ನಡುವಿನ ಅಸಮಾನತೆಯು ಸದಾ ಇರುವಂತದ್ದು. ಅದು ಹಾಗೆಯೇ ಮುಂದುವರೆಯುತ್ತದೆ ಎಂದು ತಿಳುವಳಿಕೆ ಇಲ್ಲದೆಯೋ ಅಥವಾ ಅಪ್ರಮಾಣಿಕತೆ ಯಿಂದಲೊ ಸಾಮಾನ್ಯವಾಗಿ ಪ್ರತಿಪಾದಿಸಲಾಗುತ್ತದೆ. ಅಂತಹ ಪ್ರತಿಪಾದನೆಗಳು ಶುದ್ಧ ಸುಳ್ಳು, ತೋರಿಕೆಗೆ ಇರುವಂತವು, ಪ್ರತಿಯೊಂದು ನಿಟ್ಟಿನಲ್ಲೂ ಸತ್ಯಕ್ಕೆ ಭಿನ್ನವಾದವು ಎಂದು ಸಾಬೀತಾಗಿದೆ.

ಮಹಿಳೆಯರಲ್ಲಿ ಕೆಲವು ಅಂತರ್ಗತವಾದ ಮತ್ತು ಬದಲಾಯಿಸಲಾಗದ ಗುಣಗಳು ಇರುತ್ತದೆ. ಈ ಗುಣಗಳಿಂದಾಗಿ ಮಹಿಳೆಯರ ಕುರಿತಂತೆ ಇರುವ ಸಾಮಾಜಿಕ ದೃಷ್ಟಿಕೋನ ರೂಪಿತವಾಗಿದೆ ಎಂಬುದು ಮಹಿಳೆಯರ ಕುರಿತ ಸಂಪ್ರಾದಾಯಿಕ ಕಣ್ಣೋಟವಾಗಿದೆ. ಹೊರಗಿನ ಶಕ್ತಿಗಳು-ಮಹಿಳೆಯರ ಜೈವಿಕ ಸಂರಚನೆಯಿಂದ ಹೊರಗಿನ ಶಕ್ತಿಗಳು ನಾವು ಬದುಕುತ್ತಿರುವ ಸಮಾಜದಲ್ಲಿನ ಶಕ್ತಿಗಳು ಅಂದರೆ ಮಹಿಳೆಯರ ಮೇಲೆ ಪರಿಣಾಮ ಬೀರುವುದಿಲ್ಲ ಎಂಬ ಕಲ್ಪನೆಯಿದೆ. ಸದಾ ಕಾಲ ಮಹಿಳೆಯರಲ್ಲಿ ಕೆಲವು ಹೆಣ್ಣುತನದ ಗುಣಗಳು ಇದ್ದವು, ಅವು ಈಗಲೂ ಮುಂದುವರೆದಿವೆ. ಅವುಗಳು ಎಲ್ಲವನ್ನು ನಿರ್ಧರಿಸುತ್ತವೆ ಎಂದು ಮಹಿಳಾ ಚಳುವಳಿಯ ಕೆಲವು ವಿಭಾಗವು ಅಭಿಪ್ರಾಯ ಪಡುತ್ತದೆ. ದುರದೃಷ್ಟವೆಂದರೆ ಕೆಲವು ತೀವ್ರ ಪ್ರತಿಗಾಮಿ ಶಕ್ತಿಗಳು ಸಹಾ ಮಹಿಳೆಯರ ಈ ಹೆಣ್ಣುತನದ ಗುಣಗಳ ನಿರಂತರತೆಯ ವಾದವನ್ನೇ ಮುಂದು ಮಾಡಿ ಮಹಿಳೆಯರ ಮೇಲಿನ ವಿವಿಧ ರೀತಿಯ ಸಾಮಾಜಿಕ ಮತ್ತು ಕಾನೂನಾತ್ಮಕ ಕಟ್ಟುಪಾಡುಗಳನ್ನು ಸಮರ್ಥಿಸುತ್ತವೆ.

ಆದರೆ ಈ ವಿಚಾರಗಳಿಗೆ ಐತಿಹಾಸಿಕ ವಾಸ್ತವಗಳ ಬೆಂಬಲವಿಲ್ಲ. ವಿವಿಧ ಸಮಾಜಗಳಲ್ಲಿನ ಮಹಿಳೆಯರ ಪಾತ್ರ ಕುರಿತ ಅಧ್ಯಯನಗಳು ಸಾಬೀತು ಪಡಿಸಿರುವಂತೆ ವರ್ಗ ವಿಭಜಿತ ಸಮಾಜಕ್ಕೂ ಮುನ್ನ ಸಮಾಜದಲ್ಲಿ ಮಹಿಳೆಯರಿಗೆ ಒಂದು ಪ್ರಧಾನ ಪಾತ್ರವಿತ್ತು. ಮಹಿಳೆ ನಾಯಕಳಾಗಿ ಮತ್ತು ಬುಡಕಟ್ಟು ಸಂಘಟನೆಯಲ್ಲಿ ಆಡಳಿತಗಾರಳಾಗಿ ಅತ್ಯಂತ ಹೆಚ್ಚು ಗೌರವಿಸಲ್ಪಟ್ಟವಳಾಗಿದ್ದಳು. ದೈಹಿಕ ಶಕ್ತಿಯಲ್ಲಾಗಲಿ ಅಥವಾ ಇನ್ನಾವುದೇ ಕೌಶಲ್ಯಗಳಲ್ಲಾಗಲಿ ನಾಗರೀಕತೆಯ ಪೂರ್ವ ಕಾಲಾವಧಿಯಲ್ಲಿ ಬುಡಕಟ್ಟು ಮಹಿಳೆ ಪುರುಷರಿಗಿಂತ ಯಾವುದೇ ರೀತಿಯಲ್ಲೂ

ಪುಟ 14 ಕ್ಕೆ

ಅತಿಥಿ ಅಂಕಣ

ಆತ್ಮಹತ್ಯೆಗೆ ದೂಡಿದ ಬಜೆಟ್‌ಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಜೆಟ್‌ಗಳು ಜನರನ್ನು ಉಳಿಸುವ ಬದಲು ಪ್ರಾಣ ಕಳೆದುಕೊಳ್ಳುವಂತಹ ಅಸಹಾಯಕ ಸ್ಥಿತಿಗೆ ಒತ್ತಾಸೆಯಾಗಿರುವುದು ದುರಂತವಾಗಿದೆ. ಅಂತಹ ಸ್ವ ಶಹಬ್ಬಾಶ್‌ಗಿರಿಯ ಬಜೆಟ್ ನಂತರ ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಿಂತಿಲ್ಲ. ಕೇಂದ್ರದ ಬಜೆಟ್ ಪ್ರಸ್ತಾವನೆಗಳ ಪರಿಣಾಮವಾಗಿ ಮಂಡನೆಯಾದ ಒಂದೆರಡು ದಿನಗಳಲ್ಲೇ ಕರ್ನಾಟಕದ ಇಬ್ಬರು ರೇಷ್ಮೆ ಬೆಳೆಗಾರರಾದ ಮಳವಳ್ಳಿಯ ಸ್ವಾಮಿಗೌಡ ಮತ್ತು ಆತ್ನ ಪತ್ನಿ ಆತ್ಮಹತ್ಯೆ ಮಾಡಿಕೊಂಡದ್ದು ಸ್ಥಿತಿಯ ಗಂಭೀರತೆಯನ್ನು ತೋರಿಸುತ್ತಿದೆ.

ಕೇಂದ್ರದ ಪ್ರಣವ ಮುಖರ್ಜಿ, ಕರ್ನಾಟಕದ ಯಡಿಯೂರಪ್ಪನವರ ಹಸಿರು ಬಣ್ಣ ಬಳಿದುಕೊಂಡ ಯಾವ ಬಜೆಟ್ ಪ್ರಸ್ತಾಪಗಳೂ ಕೃಷಿಯನ್ನು ರಕ್ಷಿಸುವಲ್ಲಿ ಕೃಷಿಕರಲ್ಲಿ ಒಂದು ಆತ್ಮವಿಶ್ವಾಸವನ್ನಾದರೂ ಮೂಡಿಸುವಲ್ಲಿ ಸಂಪೂರ್ಣ ವಿಫಲವಾಗಿರುವುದನ್ನೇ ಈ ಘಟನೆಗಳು ತೋರಿಸುತ್ತವೆ. ವಿದೇಶದ ರೇಷ್ಮೆ ಆಮದಿನ ಬೆದರಿಕೆಯನ್ನು ಎದುರಿಸುತ್ತಿರುವ ದೇಶದ ರೇಷ್ಮೆ ಬೆಳೆಗಾರರು ಆಮದಿನ ಮೇಲೆ ಹೆಚ್ಚಿನ ನಿರ್ಬಂಧ ವಿಧಿಸುವ ನಿರೀಕ್ಷೆಯಲ್ಲಿದ್ದರು. ಆದರೆ ನಿರ್ಬಂಧದ ಬದಲು ಆಮದಿಗೆ ಉತ್ತೇಜಿಸುವಂತೆ ಶೇ.31 ಇದ್ದ ಆಮದು ಸುಂಕವನ್ನು ಶೇ.5 ಕ್ಕೆ ಇಳಿಸುವ ಮೂಲಕ ಚೀನಾ ಮತ್ತಿತರೆ ಕಡೆಗಳಿಂದ ಆಮದು ಮಾಡಿಕೊಳ್ಳಲು ವ್ಯಾಪಾರಸ್ಥರಿಗೆ ಅನುವು ಮಾಡಿಕೊಟ್ಟು ದೇಶೀಯ ರೈತರಿಂದ ಖರೀದಿಸಲು ಮನಬಂದಂತೆ ಮಾರುಕಟ್ಟೆ ದರಗಳನ್ನು ಇಳಿಸಲು ಉತ್ತೇಜನವನ್ನೇ ನೀಡಿದೆ. ಇದನ್ನೇ ಬಳಸಿಕೊಂಡ ವ್ಯಾಪಾರಸ್ಥರು ರೇಷ್ಮೆ ಗೂಡಿನ ಬೆಲೆಯನ್ನು 350, 400 ರಿಂದ ರೂ.100, ರೂ.150 ಕ್ಕೆ ಇಳಿಸುವ ಮೂಲಕ ಸೂಪರ್ ಲಾಭ ಕೊಡೆಯಲು ಮುಂದಾದದ್ದು ಸಂಕಷ್ಟದಲ್ಲಿರುವ ರೈತರಿಗೆ ಭಾರೀ ಆಘಾತಕಾರಿಯಾಗಿ ಪರಿಣಮಿಸಿದೆ. ಇದರಿಂದ ಕಂಗಾಲಾದ ರೈತರು ಪ್ರತಿಭಟನೆ ನಡೆಸಿದರೂ ಗೂಡನ್ನು ಮಾರುವ ಇಲ್ಲವೇ ಹಾಗೇ ಇರಿಸಿಕೊಳ್ಳುವ ಯಾವ ಸ್ಥಿತಿಯಲ್ಲೂ ಇಲ್ಲದೇ ನೆಲ ಕಚ್ಚುವ ಸ್ಥಿತಿ ತಲುಪಿರುವುದನ್ನು ಗಮನಿಸಬೇಕು.

ಇದು ಕೇವಲ ಒಂದೇ ಕೃಷಿ ಉತ್ಪಾದನೆಗೆ ಮಾತ್ರ ಸೀಮಿತವಲ್ಲ. ಏಶಿಯನ್ ಕೃಷಿ ಒಪ್ಪಂದದ ಪರಿಣಾಮಗಳಿಂದ ಕೃಷಿ ಉತ್ಪನ್ನಗಳ ಆಮದಿಗೆ ಮುಕ್ತ ಅವಕಾಶ ಕಲ್ಪಿಸಿರುವುದರಿಂದ ತತ್ತರಿಸುತ್ತಿರುವ ಅಡಿಕೆ, ಭತ್ತ, ಸ್ಸಾಂಬಾರು ಪದಾರ್ಥಗಳು, ಕಾಫಿ, ಟೀ ಬೆಳೆಗಾರರು ಭರವಸೆಯ ಆಸೆಯನ್ನೇ ಕಳೆದುಕೊಳ್ಳುವಂತಾಗಿದೆ. ಕಬ್ಬು ಬೆಳೆಗಾರರು ನಿತ್ಯವೂ ಕೂಗಿದರೂ ಪ್ರಯೋಜನವಾಗಿಲ್ಲ. ತೊಗರಿ ಬೆಳೆದ ರೈತರು ಆತ್ಮಹತ್ಯೆ ಜಾಡನ್ನು ಬಿಡುತ್ತಿಲ್ಲ. ಹಾಗೋ ಹೀಗೋ ಜೀವ ಹಿಡಿದುಕೊಂಡಿದ್ದ ಅಡಿಕೆ ಬೆಳೆಗಾರರು ಗುಟ್ಕಾದ ಪ್ಲಾಸ್ಟಿಕ್ ಪ್ಯಾಕೆಟನ್ನು ಏಕಾಏಕಿ ನಿಷೇಧಿಸಿರುವುದರಿಂದ ತೀವ್ರ ಆತಂಕಕ್ಕೀಡಾಗಿದ್ದಾರೆ. ಕನಿಷ್ಟ ಹಂತಹಂತವಾಗಿಯಾದರೂ ರೈತರಿಗೆ, ಜನಸಾಮಾನ್ಯರಿಗೆ ಹಾನಿಯಾಗದ ರೀತಿಯಲ್ಲಿ ಕ್ರಮವಹಿಸಬೇಕಿತ್ತು. ಇಂತಹುದೇ ಸ್ಥಿತಿ ಹಲವಾರು ಬೆಳೆಗಾರರದ್ದಾಗಿದೆ. ಇವೆಲ್ಲವುಗಳೊಂದಿಗೆ ಗಾಯದ ಮೇಲೆ ಬರೆ ಎಳೆದಂತೆ ಪೆಟ್ರೋಲ್, ಡೀಸೆಲ್‌ಗಳ ಬೆಲೆ, ಹೆಚ್ಚಿದ ನಿಯಂತ್ರಣದ ಮುಕ್ತತೆ ದರ ಏರಿಕೆಯ ಭಾರದಿಂದ ಗೊಬ್ಬರ, ಮುಂತಾದ ಕೃಷಿ ಬಳಕೆಯ ಪರಿಕರಗಳ ಮೇಲೆ ತೀವ್ರ ಪರಿಣಾಮ ಬೀರಿವೆ. ಇಂತಹ ಸ್ಥಿತಿಯ ನಡುವೆಯೇ ಕೋಟ್ಯಾಂತರ ಕೃಷಿಕರ ಕೈಯಿಂದ ಕೃಷಿ ಕಿತ್ತುಕೊಂಡು ಕಾರ್ಪೊರೇಟ್ ಕಂಪನಿಗಳ ವಶಕ್ಕೆ ಒಪ್ಪಿಸುತ್ತಿರುವಲ್ಲಿ ಆರ್ಥಿಕ ಸಚಿವರಾದ ಪ್ರಣವ ಮುಖರ್ಜಿ, ಈ ಹಿನ್ನೆಲೆಯಲ್ಲಿ ಬಜೆಟನ್ನು ಅಂಗೀಕರಿಸುವ ಮೊದಲು ವಿನಾಶಕಾರಿ ನೀತಿಗಳತ್ತ ಗಮನಹರಿಸಿ ತಿದ್ದುಪಡಿ ಮಾಡಿಕೊಳ್ಳಬೇಕು. ಈ ಸಂಬಂಧ ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳ ಜಾರಿ ಕೂಡದು.

ವಿಶ್ವಕನ್ನಡ ಸಮ್ಮೇಳನವೋ... ಹೂಡಿಕೆದಾರರ ಸಮಾವೇಶವೋ...

ಇನ್ನೇನು ವಿಶ್ವಕನ್ನಡ ಸಮ್ಮೇಳನ ಉದ್ಘಾಟನಾ ಹೊಸ್ತಿಲಲ್ಲಿದೆ. ಭಾರಿ ಸಂಭ್ರಮ ಸಿದ್ಧತೆಗಳೂ ನಡೆದಿವೆ. ಬೆಳಗಾವಿಯಲ್ಲಿ ಇಂದು (ಮಾರ್ಚ್ 11 ರಿಂದ 13, 2011) ಉದ್ಘಾಟನೆಗೊಳ್ಳುವ ಈ ವಿಶ್ವಕನ್ನಡ ಸಮ್ಮೇಳನ ಖಂಡಿತಕ್ಕೂ ಕನ್ನಡ ಸಾಹಿತ್ಯ ಸಮ್ಮೇಳನದಂತೆ ಇದೂ ಒಂದು 'ಜಾತ್ರೆ'ಯಾಗುವ ಎಲ್ಲಾ ಲಕ್ಷಣಗಳೂ ಇವೆ. ಅದ್ದೂರಿ ಜಾತ್ರೆಗಳಲ್ಲಿ ಚಿಂತನ ಮಂಥನ ಎಷ್ಟು ನಡೆದೀತು ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ.


ಬೆಳಗಾವಿ

ಕನ್ನಡ ನಾಡು, ನುಡಿ, ಕರ್ನಾಟಕದ ಜನರ ಬದುಕಿನ ಬಗ್ಗೆ ಅವಲೋಕನ, ಆಶಯಗಳ ಕೇಂದ್ರಬಿಂದುವಾದ ಈ ಸಮ್ಮೇಳನ ನಿಜಕ್ಕೂ ಒಂದು ಸಾರ್ಥಕತೆ ತರುವಂತಾಗಲಿ ಎಂದು ನಿರೀಕ್ಷಿಸುವುದು ತಪ್ಪೇನಲ್ಲ. ಯಾಕೆಂದರೆ ಇದಕ್ಕೆ ಸರ್ಕಾರವೇ ಜನರ ತೆರಿಗೆಯ ಹಣವಾದ 30 ಕೋಟಿಗಳನ್ನು ನೀಡಿದೆ. ಹೀಗಾಗಿ ಕರ್ನಾಟಕದ ಜನರಿಗೆ ಲೆಕ್ಕ ಒಪ್ಪಿಸುವ ಭಾದ್ಯತೆಯ ಹೊಣೆಯೂ ಸರ್ಕಾರದ್ದಿದೆ. ಜನತೆಯೂ ಅಪಾರ ನಿರೀಕ್ಷೆ ಇಟ್ಟೇ ಇಲ್ಲಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಬರುತ್ತಾರೆ ಎಂಬುದು ಹಿಂದಿನ ಸಮ್ಮೇಳನಗಳಲ್ಲಿ ಕಂಡ ಅಂಶ. ಬೆಂಗಳೂರಿನಲ್ಲಿ ಇತ್ತೀಚಿಗೆ ನಡೆದ ಕರ್ನಾಟಕ ಸಾಹಿತ್ಯ ಸಮ್ಮೇಳನ ಹುರುಪು ಉತ್ಸಾಹ ಢಾಳಾಗಿ ಅಡರಿರುವಾಗಲೇ ಇಂತಹದ್ದೊಂದು ಸಮ್ಮೇಳನ ನಡೆಯುತ್ತಿದೆ.

ವ್ಯವಹಾರಿಕ ರಾಜಕಾರಣ

ಬೆಳಗಾವಿಯನ್ನೇ ಆಯ್ಕೆ ಮಾಡಿಕೊಂಡಿರುವುದರಲ್ಲಿ ಹಲವು ರಾಜಕೀಯ ಅಂಶಗಳಿವೆ. ಇತ್ತೀಚಿನ ವರ್ಷಗಳಲ್ಲಿ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಪಕ್ಷಗಳು ಅಸ್ಥಿರತೆ ಅಥವಾ ಬಿಕ್ಕಟ್ಟನ್ನು ಅನುಭವಿಸುವಾಗ ಗಡಿ ವಿವಾದವನ್ನು ಕೆದಕಿ ಜನರನ್ನು ಭಾಷೆ ಆಧಾರದಲ್ಲಿ ಎತ್ತಿಕಟ್ಟಿ ಭಾವೋದ್ರೇಕದ ನಡುವೆ ನಾಡು, ನುಡಿಯ ರಕ್ಷಣೆಯ ಹೆಸರಿನಲ್ಲಿ ಬಯಲು ನಾಟಕವಾಡಿ ಬಿಡುವುದು ವಾಡಿಕೆಯಾಗಿದೆ. ರಾಷ್ಟ್ರೀಯ ಪಕ್ಷಗಳೆನಿಸಿರುವ ಕಾಂಗ್ರೆಸ್, ಬಿಜೆಪಿ ಪಕ್ಷಗಳೂ ಈ ವರಸೆಯಲ್ಲೇ ಮಗ್ನರಾಗಿರುವುದು ನಿರಂತರ ಮುಂದುವರೆದಿದೆ. ಇವರಿಗೆ ಜನರ ನಿಜ ಪ್ರಶ್ನೆಗಳಿಗೆ ಪರಿಹಾರ ಸೂಚಿಸುವುದು ಬೇಕಿಲ್ಲ. ಮರಾಠಿ ಭಾಷಿಕರ ಮೇಲೆ ಕನ್ನಡಿಗರ ಮೇಲುಗೈ ಸಾಧಿಸಲಾಗಿದೆಯೆಂಬುದು ತೋರಿಸಿ ಬೆಳಗಾವಿ ಮಹಾನಗರ ಪಾಲಿಕೆಯ ಅಧಿಕಾರ ಪಡೆಯುವುದಷ್ಟಕ್ಕೇ ಸೀಮಿತಗೊಂಡಿದೆ. ಇದು ಅಲ್ಲದೇ ವ್ಯಾಪಾರೀ ಹಿತಗಳ ನಡುವಿನ ರಾಜಕೀಯ ಸ್ಪರ್ಧೆಯೂ ಮೂಲ ಅಂಶಗಳಲ್ಲೊಂದಾಗಿದೆ. ಇಂತಹುದೇ ಹಲವಾರು ಪ್ರಯತ್ನಗಳು ಅಲ್ಲಿ ನಡೆಯುತ್ತಾ ಬಂದಿರುವ ಹಿನ್ನೆಲೆಯಲ್ಲಿ ಮೇಲುಗೈ ತೋರಿಸುವ ಇರಾದೆ ಇದಕ್ಕೆ ಇಲ್ಲದಿಲ್ಲ. ಮೇಲಾಗಿ ಈಗಾಗಲೇ ಭಾಷಾ ಸಾಮರಸ್ಯ ಕದಡಿರುವ ಇಲ್ಲಿಯೂ ಮತ್ತು ಉತ್ತರ ಕರ್ನಾಟಕದಲ್ಲಿಯೂ ಬಿಜೆಪಿಯು ರಾಜಕೀಯವಾಗಿ ತನ್ನ ಶಕ್ತಿ ಕ್ರೋಡೀಕರಣಕ್ಕೂ ಬಳಸಿಕೊಳ್ಳುವ ಹುನ್ನಾರವಿದೆ. ಹಲವಾರು ಹಗರಣ, ಬ್ರಹ್ಮಾಂಡ ಭ್ರಷ್ಟಾಚಾರ, ದುರಾಡಳಿತ, ಕಾರ್ಪೊರೇಟರ್ ಕಂಪನಿಗಳ ಕೈಗೆ ಒಪ್ಪಿಸುವ ಹುನ್ನಾರಗಳು, ನೆರೆ, ಬರ, ರೈತರ ಆತ್ಮಹತ್ಯೆಯಂತಹ ಮಹತ್ವ ಇತ್ಯಾದಿ ಬವಣೆಗಳಿಂದ ಜನರಲ್ಲಿ ಹೆಚ್ಚಿರುವ ಅತೃಪ್ತಿ, ಹತ್ತಿದ ಕಳಂಕಗಳಿಂದ ಮಲೀನಗೊಂಡಿರುವ ಬಿಜೆಪಿಯ ಸ್ಥಿತಿಯಿಂದ ಮುಖ ಉಳಿಸಿಕೊಳ್ಳುವ ಕಸರತ್ತು ಇದಾಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಹಿಂದೊಮ್ಮೆ ಕರ್ನಾಟಕ ಅತೀವ ಬರಗಾಲವನ್ನು ಎದುರಿಸುತ್ತಾ, ಅನ್ನ, ಮೇವು ನೀರಿಗೂ ತತ್ವಾರ ಅನುಭವಿಸುತ್ತಾ ತತ್ತರಿಸುತ್ತಿರುವಾಗ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸುವುದನ್ನು ವಿರೋಧಿಸಿದ ಪ್ರಜ್ಞಾವಂತರ ಬಗ್ಗೆ ಹಿರಿಯ ಸಾಹಿತಿ ಡಾ. ಕೆ. ಶಿವರಾಮ ಕಾರಂತರು ಒಂದು ಪ್ರಶ್ನೆಯನ್ನೆತ್ತಿದ್ದರು. 'ಬರಗಾಲ ಬಂದಿದೆಯೆಂದು ಮಸಾಲೆ ದೋಸೆ ತಿನ್ನುವುದಿಲ್ಲವೇ' ಎಂದು. ಇದು ಸಮ್ಮೇಳನ ನಡೆಸಲು ಆಕರ್ಷಕ, ಸರಳೀಕರಣದ ಸಮರ್ಥನೆಯಾಗಿತ್ತು. ಇದರ ಹಿಂದೆ ಜನರ ನೋವಿಗೆ ಮಿಡಿವುದು ತನ್ನ ಕರ್ತವ್ಯವೆಂದು ಭಾವಿಸಿರಲೇ ಇಲ್ಲ. ಅದಕ್ಕೆ ಸ್ಪಂದಿಸುವ ಹೊಣೆ ನಿರಾಕರಣೆಯ ವ್ಯವಸ್ಥೆಯ ಮನಸ್ಸು ಮಾತನಾಡಿತ್ತು. ಉಳ್ಳವರು, ನಿರ್ಗತಿಕರ ನಡುವಿನಲ್ಲಿ ಹೊಳೆವ ಉಳ್ಳವರನ್ನೇ ಆಯ್ಕೆ ಮಾಡಿಕೊಳ್ಳುವ ಆಳುವ ವ್ಯವಸ್ಥೆಯ ಸಮರ್ಥನೆಯಾಗಿತ್ತು.



ಸರಳ ಪ್ರಶ್ನೆಗಳು

ಈಗಲೂ ಒಂದು ಗಂಭೀರ ವಿವಾದ ಎದ್ದಿದೆ. ನೆರೆ, ಬರ ನೇಣಿನ ಕುಣಿಕೆಯಲ್ಲಿ ಈ ನೆಲದ ಮಕ್ಕಳು ಇರುವಾಗನಿ ಇಂತಹ ಅದ್ದೂರಿ ಬೇಕೆ ಎಂಬ ಸಹಜ ಪ್ರಶ್ನೆ. ಹೋಗಲಿ, ಈ ವಾಸ್ತವಗಳತ್ತಲಾದರೂ ಸಮ್ಮೇಳನ ಗಮನವಿಟ್ಟು ಸಮಸ್ಯೆಗಳ ಮೂಲಗಳನ್ನು ಕೆದಕಿ ಹೊರಗಿಟ್ಟು ಪರಿಹಾರದ ಹಾದಿ ಸೂಸಬಲ್ಲದೇ? ಇಂತಹ ಯಾವುದೇ ಪ್ರಶ್ನೆಗಳೂ ಅಸಂಬದ್ಧವೂ ಅಲ್ಲ. ಅಸಹಜವೂ ಅಲ್ಲ. ವಿಶ್ವವಿಖ್ಯಾತ ಸಾಧನೆಗೈದವರ ಸ್ಮರಣೆಯೊಂದೇ ಸಮ್ಮೇಳನದ ಸತ್ವವಾಗಬಾರದಲ್ಲ. ಒಟ್ಟು ಬದುಕಿನ ಬಗ್ಗೆ ಸಮಗ್ರತೆಯ ಕಣ್ಣೋಟ ಇರಬೇಕು. ಸವಾಲುಗಳತ್ತ ವಿಶ್ವ ಕನ್ನಡಿಗರನ್ನು ಎಚ್ಚರಿಸಬೇಕು.

ಶ್ರಮ ವಿರೋಧಿ ಚಿಂತನೆ



ಇಲ್ಲೊಂದು ಪ್ರಶ್ನೆ ಸಮ್ಮೇಳನಗಳನ್ನು ಯಾರು ಉದ್ಘಾಟಿಸಬೇಕು. ಇನ್‌ಫೋಸಿಸ್ ಸಂಸ್ಥೆಯ ಮುಖ್ಯಸ್ಥ, ಉದ್ಯಮಿ ನಾರಾಯಣಮೂರ್ತಿ ಯವರನ್ನು ಆಯ್ಕೆ ಮಾಡುವ ಸುದ್ದಿ ಹೊರಬಂದಾಗಲೇ ಅದನ್ನು ವೈಚಾರಿಕವಾಗಿ ನಾಡಿನ ಹಲವಾರು ಚಿಂತಕರು ಆಕ್ಷೇಪ ವ್ಯಕ್ತಪಡಿಸಿದರು. ಇದನ್ನು ಸರ್ಕಾರ ಸೂಕ್ಷ್ಮವಾಗಿ ಅರಿಯಬೇಕಿತ್ತು. ಆದರೆ ಹಾಗೆ ಮಾಡದೇ ಮೂರ್ತಿಯವರನ್ನೇ ಆರಿಸಲಾಯಿತು. ನಾಡು, ನುಡಿಗೆ, ನಾಳಿನ ಏಳಿಗೆಗೆ ದುಡಿದ ಹಲವಾರು ಮಹನೀಯರಿದ್ದಾರೆ. ಸಾಹಿತಿ, ಚಿಂತಕರು,

ಪುಟ 15 ಕ್ಕೆ

ರಾಜ್ಯ ಕೃಷಿ ಬಜೆಟ್
ಗುಡ್ಡ ಅಗೆದು ಇಲಿ ಹಿಡಿದಂತೆ – ಜಿ.ಸಿ. ಬಯ್ಯಾರೆಡ್ಡಿ

ಮಂತ್ರಿ ಯಡಿಯೂರಪ್ಪನವರು ವಿಧಾನಸಭೆಯಲ್ಲಿ ಮಂಡಿಸಿರುವ ಕೃಷಿ ಬಜೆಟ್ ಕೃಷಿ ಬಜೆಟ್ ಅಲ್ಲ. 4-5 ಇಲಾಖೆಗಳ ಹಣವನ್ನು ಒಟ್ಟು ಸೇರಿಸಿ ಕೃಷಿ ಬಜೆಟ್ ಎಂದು ಮಂಡಿಸಿದ್ದಾರೆ. ಕೃಷಿ ಬಜೆಟ್ಟಿನ ಮೂಲಕ್ಕೆ ಕೈ ಹಾಕದೆ ಬಾಜಾ ಬಜಂತ್ರಿ, ನಡೆಸಿ ಹಸಿರು ಟವೆಲ್ ಹೆಗಲ ಮೇಲೆ ಹಾಕಿಕೊಂಡರೆ ಅದು ಕೃಷಿ ಬಜೆಟ್ ಆಗಲು ಸಾಧ್ಯವಿಲ್ಲ. ಈ ಬಜೆಟ್ ಗುಡ್ಡ ಅಗೆದು ಇಲಿ ಹಿಡಿದಂತಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ತಿಳಿಸಿದರು.

ಅವರು ಅಂಕೋಲಾದಲ್ಲಿ ಸಂಘಟಿಸಿದ 'ರಾಜ್ಯ ಕೃಷಿ ಬಜೆಟ್ - ವಿಮರ್ಶೆ' ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಮಾತನಾಡಿದರು. ಯಡಿಯೂರಪ್ಪನವರು ಮಂಡಿಸಿದ ಕೃಷಿ ಬಜೆಟ್‌ನಲ್ಲಿ ಅರಣ್ಯ ಭೂಮಿ ಸಕ್ರಮದ ಬಗ್ಗೆ ಮಾತಿಲ್ಲ. 1 ಕೋಟಿ ಜನರಿರುವ ಕೃಷಿ ಕೂಲಿಕಾರರ ಬಗ್ಗೆ ಮಾತಿಲ್ಲ. ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ತರುವುದಾಗಿ ಘೋಷಿಸಿದ್ದಾರೆ. ಕೃಷಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುವುದಾಗಿ ಘೋಷಿಸಿ ಕಂಪನಿಕರಣ ಮಾಡಲು ಹೊರಟಿದ್ದಾರೆ. ಶೇ. 1ರ ಬಡ್ಡಿ ದರದಲ್ಲಿ ಸಾಲ ಕೊಡುವುದಾಗಿ ಘೋಷಿಸಿದ್ದಾರೆ. ಇದು ಕೇವಲ 200 ಕೋಟಿ ರೂ. ವ್ಯವಹಾರ. ಅಲ್ಲದೇ ಕೇವಲ ಹನ್ನೊಂದುವರೆ ಲಕ್ಷ ರೈತರಿಗೆ ಮಾತ್ರ ತಲುಪಲು ಸಾಧ್ಯವಾಗಿರುವುದು. ವಾಣಿಜ್ಯ ಬ್ಯಾಂಕುಗಳ ಸಾಲಗಳನ್ನು ಲೆಕ್ಕಕ್ಕೆ ಹಾಕಿಕೊಂಡರು ರಾಜ್ಯದ 76 ಲಕ್ಷ ರೈತ ಕುಟುಂಬಗಳಲ್ಲಿ 46 ಲಕ್ಷ ರೈತ ಕುಟುಂಬಗಳಿಗೆ ಸಾಲ ಸಿಗುತ್ತಿಲ್ಲ. ಹೊಸ ರೈತರಿಗೆ ಸಾಲ ಸಿಗುತ್ತಿಲ್ಲ. ಅವರು ಬಡ್ಡಿ ಸಾಲಗಾರರನ್ನು ಅವಲಂಭಿಸಬೇಕಾಗಿದೆ. ರೈತರ ಆತ್ಮಹತ್ಯೆಗಳು ಮುಂದುವರೆದಿದೆ. 'ಸುವರ್ಣ ಭೂಮಿ ಯೋಜನೆ' ಯಡಿಯಲ್ಲಿ 1 ಲಕ್ಷ ಕುಟುಂಬಗಳಿಗೆ 10 ಸಾವಿರ ರೂಪಾಯಿ ನೀಡುವುದು ರಾಜಕೀಯ ಲಾಭಕ್ಕಾಗಿ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. 20 ಕೋಟಿ ರೂ. ಸಾವಯವ ಕೃಷಿಗೆ ನೀಡುವುದು ನೇರವಾಗಿ ಆರ್.ಎಸ್.ಎಸ್., ವಿಶ್ವ ಹಿಂದು ಪರಿಷತ್ ಮುಂತಾದ ಸಂಘ ಪರಿವಾರಕ್ಕೆ ಸರಕಾರಿ ಹಣ ಹರಿಸುವ ಸಂಚಾಗಿದೆ ಎಂದು ಜಿ.ಸಿ. ಬಯ್ಯಾರೆಡ್ಡಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ರಾಜ್ಯ ಸರಕಾರ ರೈತ ವಿರೋಧಿ ನೀತಿ ವಿರುದ್ಧ ಜಾಗೃತರಾಗಿದ್ದು ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. 1 ಕೆ.ಜಿ.ಗೆ 2 ರೂ. ನಂತೆ 35 ಕ.ಜಿ. ರೇಷನ್ ಕೊಡುವ ಆಶ್ವಾಸನೆ ಮುಖ್ಯಮಂತ್ರಿ ಮರೆತಿದ್ದಾರೆ ಎಂದರು.

ಚರ್ಚೆಯಲ್ಲಿ ಸುಂಕಸಾಳ ಗ್ರಾಮ ಪಂಚಾಯತ ಅಧ್ಯಕ್ಷ ನಾರಾಯಣ ನಾಯಕ, ಮಾದವ ನಾಯಕ ಮಾಬಗಿ, ಸುಧಾಕರ ಬಾನಾವಳಿಕರ ಬೇಲೆಕೇರಿ, ತಾ.ಪಂ. ಸದಸ್ಯ ವಿನೋದ ಗಾಂವಕರ, ಕೆ.ಆರ್. ನಾಯಕ ಬೇಲೆಕೇರಿ, ಸಾವಿತ್ರಿ ಗೌಡ ಹೊಸೂರು, ಎಸ್.ಎಸ್. ಭಟ್ ಸುಂಕಸಾಳ, ಭರತ ಗೌಡ ಬೇಲೆಕೇರಿ, ಭೀಮಣ್ಣ ಬೋವಿ ಮುಂಡಗೋಡ, ಶ್ಯಾಮನಾಥ ನಾಯ್ಕ ಕಾರವಾರ, ಕಾರ್ಮಿಕ ಮುಖಂಡರಾದ ಯಮುನಾ ಗಾಂವಕರ ಮುಂತಾದವರು ಭಾಗವಹಿಸಿದ್ದರು. ಮುರ್ಕುಂಡಿ ನಾಯ್ಕ ಪಳ್ಳಿಕೇರಿ, ಲಕ್ಷ್ಮಿ ನಾಯಕ ಹಿಲ್ಲೂರ, ಮಂಗಲಾ ನಾಯ್ಕ ಅಲಗೇರಿ, ನಾಗೇಶ ಗೌಡ, ಬೀರಾ ಗೌಡ ಬೇಲೆಕೇರಿ ಮುಂತಾದವರು ಉಪಸ್ಥಿತರಿದ್ದರು.

ತಾಲೂಕ ಕಾರ್ಯದರ್ಶಿ ಗಿರೀಶ ಡಿ. ಗೌಡ ಸ್ವಾಗತಿಸಿದರು. ತಾಲೂಕಾ ಅಧ್ಯಕ್ಷ ಗೌರೀಶ ನಾಯಕ ವಂದಿಸಿದರು.

- ಶಾಂತಾರಾಮ ನಾಯಕ

ಚಿನ್ನದ್ ಧ್ವಣ್ಣೆ, ರೇಷ್ಮೆ ಚೆಡ್ಡಿ

ಕ್ವಾಟ್ಲೆ

ಈ. ಬಸವರಾಜು ಮಲ್ಲೇನಹಳ್ಳಿ

ಯಣ್ಣ, ಈ ಯಡೂರಪ್ಪ ಯಡ್ನೋ, ಬುದ್ವಂತ್ನೋ?

ಇದೇನ್ ಇಂಗೇಳ್ತಿ? ಯಡ್ಡಾಗಿದ್ರೆ ಇಷ್ಟೊಂದ್ ಆಸ್ತಿ ಮಾಡ್ಕಂಡು, ಯಾರು ಏನೇ ಕಂಪ್ಲೇಂಟ್ ಮಾಡಿದ್ರೂ ಯದುರ್ದಂಗೆ ಕುರ್ಚಿ ಮ್ಯಾಲೆ ಕೂತ್ಕಳಕಾಯ್ತ ಇತ್ತೆ?

ಅದ್ರೂ ಒಂದ್ ತಪ್ಪ ಮಾಡಿ ಬಯಿಸ್ಕತ್ತಾ ಅವ್ನೆ, ಅದ್ನೂ ಸರಿ ಮಾಡಿಕಂಡಿದ್ರೆ ಆಯ್ತಾ ಇದ್ದಿಲ್ವೆ?

ಅದೇನೇಳಣ್ಣ, ಅದ್ಯಾಕೆ ಸುತ್ತಿ ಬಳ್ಸಿ ಮಾತಾಡ್ತಿ?

ಯಲ್ಲಾರ್ಗೂ ಏನೇನೋ ಕೊಟ್ಟು ಒಲಿಸ್ಕಂಡು ಕುರ್ಚಿ ಮ್ಯಾಲೆ ಕೂತಾವ್ನಲ್ಲ, ಆ ಬಾಗವತ್ರಿಗೆ ಏನಾರ ಕೊಟ್ಟು ಸುಮ್ನಿರ್ಸಿದ್ರೆ ಆಯ್ತಾ ಇರ್ಲಿಲ್ವೆ?

ಅದ್ಯಾವ್ ಬಾಗವತ್ನಣ್ಣ?

ಅದೇ ಕಾಕಿ ನಿಕ್ಕರ್ ಆಕ್ಕಂಡು, ಕೈಲೊಂದ್ ಧ್ವಣ್ಣೆ ಇಡ್ಕಂಡು ಚೂಪ್ ಮೀಸೆ ಬುಟ್ಕಂಡು ಪೇಪ್ರಲಿ ಬತ್ತನಲ ಅವ್ನು.

ಅವ್ನಿಗೂ ಯಡೂರಪ್ಪುಂಗೂ ಏನ್ ಸಮಂದ, ಅವುಂಗ್ಯಾಕ್ ಯಡೂರಪ್ಪ ಬಗ್ ಬೇಕು?

ಅವ್ನು ಆರೆಸೆಸ್ ಅನ್ನ ಸಂಗಕ್ಕೆ ಸೇರ್ದೋನು. ಅವ್ನು ಏಳ್ದಂಗೆ ಇಡೀ ಬೀಜೇಪಿಯವ್ರೆಲ್ಲ ಕೇಳ್ಬೇಕು. ಅಂತ ಜಾಗ್ದಲ್ಲವ್ನೆ.

ಅವ್ನಿಗೇನ್ ಕೊಡ್ಬೇಕಂತೆ?

ಅವ್ನು ಏನೋ ಕೇಳಿಲ್ಲ, ನಾನೇ ಯಡೂರಪ್ಪುಂಗೆ ಸಲಹೆ ಕೊಡ್ತಾ ಇದ್ದೀನಿ. ಯಾಕೆ ಅಂದ್ರೆ ಅವ್ನು ಮಾತಾಡ್ತ ಇರದ ನೋಡಿದ್ರೆ ಅಂಗನುಸ್ತು.

ಏನಂದ?

ಧ್ವಡ್ಡರು ದುಡ್ ವಡ್ವದ ನಿಲ್ಲುಸ್ಬೇಕು, ಪ್ರಾಮಾಣಿಕರಾಗಿರ್ಬೇಕು, ಜಾತಿ ಬೇದ ಮಾಡ್ಬಾರ್ದು ಅಂತ ಏನೇನೋ ಏಳ್ತವ್ನೆ.

ಆಯ್ತು, ಯಡೂರಪ್ಪುಂಗೇನೂ ಏಳಿಲ್ವಲ.

ಏ.. ತಿಳ್ಕರಿಗೆ ಅದ್ನಿಂತ ಏಳ್ಬೇಕೆ? ಬೇಕೆ? ಇವ್ನು ದುಡ್ಡ ವಡ್ಯದು ಅಂಗೇಳ್ತವ್ನೆ ಆ ವಯ್ಯ. ಧ್ವಡ್ಡರು ಅಂದ್ರೆ ಯಡೂರಪ್ಪುಂಗಿತ್ ಅವ್ನಿಗೂ ಗೊತ್ತಾಗಿರ್ಬೇಕು, ಅದ್ಕೆ

ಆ ವಯ್ಯ ಆಕದೆ ಬುಷ್ ಶರ್ಟು, ಕಾಕಿ ಚೆಡ್ಡಿ. ಅವ್ನಿಗೇನ್ ಕೊಟ್ಟು ಒಲಿಸ್ಕಳಕಾದತು?

ಅದ್ಕೆ ನಿನ್ನ ದಡ್ಡ ಅನ್ನದು. ವಳ್ಳೆ ರೇಷ್ಮೆ ಬಟ್ಟೆಲಿ ಒಂದ್ ಚೆಡ್ಡಿ, ಷರ್ಟು ವಲಿಸ್ಕೊಡದು. ಚಿನ್ನದ್ ಧ್ವಣ್ಣೆ ಮಾಡಿಸ್ಕೊಡದು. ಯಂಗೆ ನನ್ ಐಡಿಯಾ?

ನಿನ್ ಐಡಿಯಾ ಚನ್ನಾಗೇ ಅದೆ, ಆ ವಯ್ಯ ಚಿನ್ನದ್ ಧ್ವಣ್ಣೆ ಎತ್ಕತ್ವಂಗೆ?

ಏ.. ಅದ ದಿನಾ ತಿರುಗ್ಸಕೆ ಉಪ್ಯೋಗ್ಸದಲ್ಲ! ಮನೇಲಿ ಸ್ಪೋ ಕೇಸಲಿ ಮಡಿಕತ್ತನೆ.

ಆಯ್ತು ನೋಡನ, ಯಡೂರಪ್ಪ ಸಿಕ್ದಾಗ ಏಳು.

ಅದಿರ್ಲಿ, ಆ ವಯ್ಯ ಅವರ್ಕಡೇರೇ ದುಡ್ ತಿಂದ್ರೂ ಈ ತರ ಮಾತಾಡ್ಯವ್ನಲ, ಯಾಕಿರ್ಬೌದು?

ಇದ ಇನ್ನೊಂದ ತರಾನು ನೋಡ್ಬೌದು. ಧ್ವಡ್ಡರು ಅಂದ್ರೆ ಕೇಂದ್ರ ಸರ್ಕಾರದವ್ರು, ಅವ್ರು ದುಡ್ ವಡೀಬಾರ್ದು. ಸಣ್ಣರು ಅಂದ್ರೆ ರಾಜ್ಯ ಸರ್ಕಾರದವ್ರು, ಅವ್ರು ವಡೀಬೌದು ಅಂತ ಏಳಿರ್ಬೌದೆ? ಅಂತಿನಿ.

ಅಯ್ಯೋ, ಅವ್ರು ಸುಳ್ಳೇಳದ್ರಲಿ ನಿಪುಣ್ರು. ಈಗ ಇಂಗೇಳ್ತರೆ, ಸ್ವಲ್ಪ ಹೊತ್ತು ಬುಟ್ಟು ನಾನೆಲ್ಲೇಳ್ದೆ ಅಂತರೆ.

ಅದಾಯ್ತು, ಆ ವಯ್ಯ ಇಷ್ಟ್ ವಯ್ಸಾದ್ರೂ ಚೆಡ್ಡೀಲೆ ಇರದ್ಯಾಕೆ? ಒಂದ್ ಪಂಚೆನೋ, ಪ್ಯಾಂಟ್ನೋ ಇಕ್ಕಳದಲ್ವೆ?

ಏನೋ ಅವ್ರ ಸಂಗದಲ್ಲಿ ಅಂಗೆಯಂತೆ. ಅವ್ರ ಸಂಗದಲ್ಲಿ ಜಾಸ್ತಿ ಜನ ಅವ್ರಂತೆ. ಅವ್ರಿಗ್ಯಲ್ಲ ಪಂಚೆ, ಪ್ಯಾಂಟು ಅಂದ್ರೆ ಬಜೆಟ್ಟು ಜಾಸ್ತಿ ಆಯ್ತದೆ ಅಂದ್ಬುಟ್ಟು ಇಂಗ್ ಮಾಡಿರ್ಬೌದು.

ಓ.. ಈ ತರ ಪ್ರಾಬ್ಲಮ್ಮು ಅಂದಿದ್ರೆ ನಾನು ಅವ್ರಿಗೆ ವಳ್ಳೆ ಐಡಿಯಾನೆ ಕೊಡ್ತಿದ್ನಪ್ಪ. ಒಂದ್ ಪೈಸ ಕರ್ಚಿಲ್ದಂಗೆ. ಇದ ನಾನೇ ಕೊಡ್ಬೇಕಾಗಿಲ್ಲ, ಅವ್ರೂ ಬ್ಯಾರೇವ್ರುನ್ನ ನೋಡಿ ಕಲಿಬೌದಪ್ಪ.

ಅದೇನು?

ಅಷ್ಟೋ ಗೊತ್ತಿಲ್ವೆ? ನಮ್ ಬೆಳ್ಗೊಳದ್ ನಿರ್ವಾಣಸ್ವಾಮಿಗೋಳ್ನ ನೋಡಿ ಕಲ್ತ್ ಕಂಡ್ರೆ ಬಟ್ಟೆ ಬ್ಯಾಡ ಏನೂ ಬ್ಯಾಡ್ವಪ್ಪ!!!

ಪಾಪ ಅವ್ರೆಲ್ಲಿ, ಇವ್ರೆಲ್ಲಿ, ಅಂಗಿದ್ರೆ ಇಷ್ಟೊಂತರ ದುಡ್ಡು-ಆಸ್ತಿ ಯಾಕ್ವಡ್ಯರು ಬುಡಣ್ಣ.

ಕರ್ನಾಟಕ ರಾಜ್ಯ ಅಂಗವಿಕಲರ ಬಸ್‌ಪಾಸ್ ದರ ಏರಿಕೆ ಖಂಡಿಸಿ ಪ್ರತಿಭಟನಾ ಹೋರಾಟ

ಪ್ರಸಕ್ತ ವರ್ಷದ ಅಂಗವಿಕಲರ ಬಸ್‌ಪಾಸ್ ದರ ಏರಿಕೆ ಮಾಡಿರುವ ಕರ್ನಾಟಕ ಬಿಜೆಪಿ ಸರ್ಕಾರದ ಕ್ರಮ ಖಂಡಿಸಿ 15.2.2011 ರಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಹಗದಿಬೊಮ್ಮನಹಳ್ಳಿ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ನೂರಾರು ಅಂಗವಿಕಲರು ಪ್ರತಿಭಟನಾ ಹೋರಾಟ ನಡೆಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ತಾಲ್ಲೂಕು ಕಾರ್ಯದರ್ಶಿ ಹೆಚ್.ಉಸ್ಮಾನ್‌ಭಾಷ ಮಾತನಾಡಿ ಬಿಜೆಪಿ ಸರ್ಕಾರ ಪದೇ ಪದೇ ಅಂಗವಿಕಲರ ಬಸ್‌ಪಾಸ್ ದರ ಏರಿಕೆ ಮಾಡಿ ಅನಾವಶ್ಯಕವಾಗಿ ಗೊಂದಲ ಸೃಷ್ಟಿಸಿ ಚಿಂತೆಗೀಡು ಮಾಡುತ್ತಿದೆ.

ಸರ್ಕಾರ ಒಂದು ಕಡೆ ಸೌಲಭ್ಯ ನೀಡಿದಂತೆ ಮಾಡಿ ಇನ್ನೊಂದು ಕಡೆ ದರ ಏರಿಕೆಯ ನೆಪದಲ್ಲಿ ಸೌಲಭ್ಯ ವಾಪಸ್ ಕಸಿದುಕೊಳ್ಳುವಂತೆ ಮಾಡುತ್ತಿದೆ. ಸರ್ಕಾರದ ಧೋರಣೆಯಿಂದಾಗಿ ಅಂಗವಿಕಲರ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಇರುವ ಯೋಜನೆಗಳು ಅಂಗವಿಕಲರಿಂದ ಕೈತಪ್ಪುತ್ತಿವೆ. ಸರ್ಕಾರಕ್ಕೆ ಅಂಗವಿಕಲರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಏರಿಕೆ ಮಾಡಿರುವ ಬಸ್‌ಪಾಸ್ ದರ ಕೂಡಲೇ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

ಇನ್ನೊಬ್ಬ ಮುಖಂಡರಾದ ರಂಗಪ್ಪ ದಾಸರ ಮಾತನಾಡುತ್ತಾ, ಬೆಲೆ ಏರಿಕೆಯಿಂದಾಗಿ ಅಂಗವಿಕಲರ ಬದುಕು ಇನ್ನಷ್ಟು ದುಸ್ತರವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಬಸ್‌ಪಾಸ್ ದರ ಏರಿಕೆ ಮಾಡಿರುವುದು ಖಂಡನೀಯ ಸುಳ್ಳು ಭರವಸೆಗಳನ್ನು ನೀಡಿ ಸುಳ್ಳು ಹೇಳುತ್ತಲೇ ಅಧಿಕಾರ ನಡೆಸುತ್ತಿರುವ ಸರ್ಕಾರ ಭ್ರಷ್ಟ ಮಂತ್ರಿಗಳನ್ನಿಟ್ಟುಕೊಂಡು ಜನರನ್ನು ಮೋಸ ಮಾಡುತ್ತಿದೆ. ಸರ್ಕಾರ ಎಚ್ಚೆತ್ತುಕೊಂಡು ಬಸ್ ಪಾಸ್ ದರ ಏರಿಕೆಯನ್ನು ವಾಪಸ್ ಪಡೆಯದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಹೇಳಿದರು. 550 ರೂ.ಗೆ ಏರಿಕೆ ಮಾಡಿದ ದರವನ್ನು ವಾಪಸ್ ಪಡೆದು 375 ರೂ.ಗೆ ದರ ನಿಗದಿ ಮಾಡಬೇಕು. 100 ಕೀ.ಮೀ. ವರೆಗೆ ಪ್ರಯಾಣದ ವ್ಯಾಪ್ತಿಯನ್ನು 200 ಕಿ.ಮೀ.ಗೆ ವಿಸ್ತರಿಸಬೇಕೆನ್ನುವ ಬೇಡಿಕೆಯ ಮನವಿಯನ್ನು ಒಕ್ಕೂಟದ ಅಧ್ಯಕ್ಷರಾದ ಜಿ.ಎಂ. ಉಮಾಪತಿ ಓದಿ ಸಿರಸ್ತೇದಾರರಿಗೆ ನೀಡಿದರು. (ಮುಖ್ಯಮಂತ್ರಿಗೆ, ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಲಾಯಿತು) ಒಕ್ಕೂಟದ ಮುಖಂಡರಾದ, ಕುಮಾರಿ ಗಾಯಿತ್ರಿ, ದಶಮಾಪುರ ಹುಲುಗಪ್ಪ, ಕೃಷ್ಣ ಜವಳಿ ಕೊಟ್ರೇಶಪ್ಪ, ಹುಸೇನ್‌ಸಾಬ್, ಬಸಮ್ಮ ನಾಗರಾಜ ಇತರರು ನೇತೃತ್ವ ವಹಿಸಿದ್ದರು. ಸಿಪಿಐ(ಎಂ) ಪಕ್ಷದ ಗ್ರಾಮ ಪಂಚಾಯತ್ ಸದಸ್ಯರಾದ ಒಂಟಿಗೋಡಿ ತಿಂದಪ್ಪ ಬೆಂಬಲಿಸಿ ಹೋರಾಟದಲ್ಲಿ ಭಾಗವಹಿಸಿದ್ದರು.

ತಿರುಳು ಬಿಟ್ಟು ಗೊರಟೆ ಸುತ್ತ ಗಿರಕಿ ಹೊಡೆಯುತ್ತಿದೆ ಚುನಾವಣಾ ಸುಧಾರಣಾ ಸಮಿತಿ

ಕೆ.ಎನ್. ಉಮೇಶ್

ಚುನಾವಣಾ ಆಯೋಗ ಚುನಾವಣೆ ಸುಧಾರಣೆಯ ಕಸರತ್ತು ನಡೆಸುತ್ತಿದೆ. ಆದರೆ ಆಗಬೇಕಾದ ಸುಧಾರಣೆಯ ತಿರುಳು ಬಿಟ್ಟು ಸಿಪ್ಪೆಯ ಸುತ್ತ ಅದು ಗಿರಕಿ ಹೊಡೆಯುತ್ತಿದೆ.

ಚುನಾವಣಾ ವ್ಯವಸ್ಥೆಯನ್ನು ಬಲಪಡಿಸಲು ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಸಚಿವಾಲಯವು ಚುನಾವಣಾ ಸುಧಾರಣಾ ಸಮಿತಿಯನ್ನು ರಚಿಸಿದೆ. ಚುನಾವಣೆಗಳಲ್ಲಿ ವ್ಯಾಪಕವಾಗಿ ಹೆಚ್ಚುತ್ತಿರುವ ಹಣದ ಪ್ರಭಾವ, ರಾಜಕಾರಣದ ಅಪರಾಧಿಕರಣ, ಚುನಾವಣೆಗಳಿಗೆ ಸರ್ಕಾರದ ಹಣಕಾಸು ಸಹಾಯ, ರಾಜಕೀಯ ಪಕ್ಷಗಳ ನಿಯಂತ್ರಣ, ಲೆಕ್ಕ ಪರಿಶೋಧನೆ, ಚುನಾವಣಾ ವ್ಯಾಜ್ಯಗಳ ನ್ಯಾಯನಿರ್ಧಾರಣೆ, ಪಕ್ಷಾಂತರ ಕಾನೂನಿನ ಪರಾಮರ್ಶೆ ಮುಂತಾದ ಪ್ರಮುಖ ವಿಷಯಗಳ ಕುರಿತು ನಿರ್ದಿಷ್ಟ ಶಿಫಾರಸ್ಸುಗಳನ್ನು ಈ ಸಮಿತಿ ಸರ್ಕಾರಕ್ಕೆ ನಿಡಲಿದೆ.

ಅದಕ್ಕಾಗಿ ಸಮಿತಿಯು ರಾಷ್ಟದ ಪ್ರಮುಖ ನಗರಗಳಾದ ಕೊಲ್ಕತ್ತಾ, ಚಂಢಿಗಡ, ಬೋಪಾಲ್, ಮುಂಬಯಿ, ಗುವಾಹಟಿಗಳಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಿದೆ. ದಕ್ಷಿಣ ಭಾರತ ಮಟ್ಟದ ಸಮಾಲೋಚನ ಸಭೆಯನ್ನು ಫೆಬ್ರವರಿ 12 ರಂದು ಬೆಂಗ್ಳಳೂರಿನಲ್ಲಿ ನಡೆಸಿದೆ. ಈ ಎಲ್ಲದರ ನಂತರ ರಾಷ್ಟ್ರಮಟ್ಟದ ಸಭೆಯನ್ನು ಏಪ್ರಿಲ್ 4 ಮತ್ತು 5 ರಂಧು ನವದೆಹಲಿಯಲ್ಲಿ ನಡೆಸಲಿದೆ.

ಸಮಾಲೋಚನ ಸಭೆ ಆಹ್ವಾನ ಪತ್ರದೊಂದಿಗೆ ಕೋರ್ ಕಮಿಟಿಯ ಅಧ್ಯಕ್ಷರು ಚುನಾವಣ ಸುಧಾರಣೆಗಳಿಗೆ ಕರಡು ಪ್ರಾಸ್ತಾವಿಕ ಹಿನ್ನೆಲೆ ಪತ್ರದ ಸಾರಾಂಶವನ್ನು ಕಳುಹಿಸಲಾಗಿತ್ತು. ಅದರಲ್ಲಿನ ಪ್ರಮುಖ ಅಂಶಗಳು ಅದಕ್ಕೆ ಸಿಪಿಐ(ಎಂ)ನ ಪ್ರತಿಕ್ರಿಯೆ ಕೆಳಗಿನಂತಿವೆ.

ರಾಜಕಾರಣದ ಅಪರಾಧಿಕರಣ :

ರಾಜಕಾರಣದ ಅಪರಾಧಿಕರಣದ ಬಗ್ಗೆ ಹೇಳುತ್ತಾ ಅದನ್ನು ತಡೆಯಲು ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆ ಕುರಿತು ತಪ್ಪು ಮಾಹಿತಿ ನೀಡುವುದು, ಮುಚ್ಚಿಡುವುದು ಅಥವಾ ನೀಡದೆ ಇರುವುದಕ್ಕೆ ಹೆಚ್ಚು ಕಠಿಣ ಶಿಕ್ಷೆ ನೀಡಬೇಕು ಎಂದಿದೆ. ಕ್ರಿಮಿನಲ್ ಮೊಕದ್ದಮೆ ಹೊಂದಿರುವ ಅಭ್ಯರ್ಥಿಗಳನ್ನು ಸ್ಪರ್ಧಿಸುವುದರಿಂದ ನಿರ್ಬಂಧಿಸಬೇಕೆಂದಿದೆ. ಮತದಾರರು ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಮತನೀಡಲು ಇಷ್ಟಪಡದಿದ್ದರೆ ನೆಗೆಟಿವ್ ಅಥವ ತಟಸ್ಥ ಮತದಾನ ಮಾಡಿ, ಸ್ಪರ್ಧಿಗಳಲ್ಲಿ ಯಾರು ಇಷ್ಟವಿಲ್ಲ ಎಂದು ಸೂಚಿಸಲು ಅವಕಾಶ ಕಲ್ಪಿಸುವ ಪ್ರಸ್ತಾಪವಿರಿಸಿದೆ.

ಕ್ರಿಮಿನಲ್ ಹಿನ್ನೆಲೆಯ ಮಾಹಿತಿ ನೀಡದಕ್ಕೆ ಕಠಿಣ ಶಿಕ್ಷೆ ಪ್ರಸ್ತಾಪ, ಒಪ್ಪಬಹುದಾದರೂ ಕ್ರಿಮಿನಲ್ ಮೊಕದಮೆ ಹಿನ್ನೆಲೆಯ ಅಭ್ಯರ್ಥಿಯ ಸ್ಪರ್ಧೆಯ ನಿರ್ಬಂಧವನ್ನು ಬಳಸಿ ಕೆಲವೊಮ್ಮೆ ಸಂಭವನೀಯ ಉತ್ತಮ ಅಭ್ಯರ್ಥಿಗಳನ್ನು ಚುನಾವಣೆಯ ಕಣದಿಂದ ಹೊರದೂಡಲು ಸುಳ್ಳು ಮೊಕದ್ದಮೆಗಳ ದಾಖಲಿಸಲು ಮುಕ್ತ ಅವಕಾಶ ಕಲ್ಪಿಸುವ ಸಾಧ್ಯತೆಗಳಿಗೆ ಅದು ಅವಕಾಶ ಮಾಡಲಿದೆ. ನೆಗೆಟಿವ್ ಮತದಾನದ ಅವಕಾಶ ಸ್ವಾಗತರ್ಹ. ಆದರೆ ನಿಗದಿತ ಪ್ರಮಾಣದ ನೆಗೆಟಿವ್ ಮತಗಳ ಆಧಾರದಲ್ಲಿ ಚುನಾವಣೆ ಫಲಿತಾಂಶವನ್ನು ರದ್ದುಮಾಡುವುದು ಮರು ಚುನಾವಣೆಗಳ ಅಪಾಯವನ್ನು ನಿರ್ಮಿಸಿ ಆರ್ಥಿಕ ಹೊರೆ ಹೊರಿಸುವ ಅಪಾಯದ ಬಗ್ಗೆ ಎಚ್ಚರಿಕೆಯ ಅಗತ್ಯವಿದೆ. ಸ್ವತಂತ್ರ ಅಭ್ಯರ್ಥಿಗಳ ಸ್ಪರ್ಧೆಯನ್ನು ನಿರುತ್ತೇಜಿಸಲು ಠೇವಣಿ ಹಣವನ್ನು ಹೆಚ್ಚಿಸಬಹುದು, ಆದರೆ ಈ ಕುರಿತು ಇತರೆ ಪ್ರಸ್ತಾವಗಳು ಹಲವಾರು ಇತರೆ ಸಮಸ್ಯೆಗಳನ್ನು ಸೃಷ್ಟಿಸಲಿವೆ.

ಚುನಾವಣೆಗಳಿಗೆ ಸರ್ಕಾರದ ಧನ ಸಹಾಯ :

'ಹಣಕ್ಕಾಗಿನ ಚುನಾವಣಾ ಒತ್ತಡಗಳೆ ಮೇಲ್‌ರಚನೆಯಲ್ಲಿನ ಭಷ್ಟಾಚಾರಕ್ಕೆ ಅಡಿಪಾಯವಾಗಿದೆ' ಎಂಬ 2001 ರಲ್ಲಿ ಸಂವಿಧಾನ ಪರಾಮರ್ಶೆ ವರದಿಯ ಟೀಕೆಯನ್ನು ಉದಾಹರಿಸಿ ನಿಗದಿತ ಮಿತಿಗಿಂತ ಎಷ್ಟು ಪಾಲು ಹೆಚ್ಚು ಚುನಾವಣಾ ವೆಚ್ಚ ವಾಸ್ತವದಲ್ಲಿ ನಡೆಯುತ್ತಿವೆ ಎಂಬುದನ್ನು ಸಾರಾಂಶದಲ್ಲಿ ಉಲ್ಲೇಖಿಸಲಾಗಿದೆ.

ಅದಕ್ಕಾಗಿ ಪ್ರಚಾರ ವೆಚ್ಚದ ಮೇಲಿನ ನಿಗಧಿತ ಮಿತಿಯನ್ನು ತೆಗೆದುಹಾಕಲು ಅಥವಾ ಹೆಚ್ಚಿಸಲು ಪ್ರಸ್ತಾಪ ಮಾಡಿದೆ. ಅಭ್ಯರ್ಥಿಗಳ ಆಸ್ತಿ ಮತ್ತು ಋಣಭಾರ ಕುರಿತು ಮಾಹಿತಿ ನೀಡಿಕೆಗೆ ಪರಿಣಾಮಕಾರಿ ಜಾರಿ ಕ್ರಮಗಳು ಮತ್ತು ವಿಶೇಷ ಪ್ರಾಧಿಕಾರದಿಂದ ಲೆಕ್ಕ ಪರಿಶೋಧನೆಯ ಪ್ರಸ್ತಾಪ ಮಾಡಲಾಗಿದೆ. ಪ್ರಚಾರ ವೆಚ್ಚ ನಿಯಂತ್ರಿಸಲು ಸರ್ಕಾರವೆ ಚುನಾವಣಾ ವೆಚ್ಚ ಭರಿಸುವ, ಕೆಲವು ಬಗೆಯ ಪ್ರಚಾರ ಸಾಮಗ್ರಿಗಳು ಮತ್ತು ವಿಧಾನಗಳ ನಿಷೇಧ, ಸಂಸತ್ ಮತ್ತು ವಿಧಾನಸಭಾ ಚುನಾವಣೆಗಳನ್ನು ಒಟ್ಟಿಗೆ ನಡೆಸುವ, ಪ್ರಚಾರ ಅವಧಿ ಕಡಿಮೆಮಾಡುವ, ಬಹು ಕ್ಷೇತ್ರಗಳಲ್ಲಿ ಒಬ್ಬರೇ ಅಭ್ಯರ್ಥಿಯು ಸ್ಪರ್ಧಿಸುವುದನ್ನು ನಿಷೇಧಿಸುವ ಪ್ರಸ್ತಾಪ ಮಾಡಲಾಗಿದೆ. ಚುನಾವಣಾ ವೆಚ್ಚ ಮಿತಿಯನ್ನು ಹೆಚ್ಚಿಸುವ ಪ್ರಸ್ತಾಪ ಒಪ್ಪಬಹುದು, ಆದರೆ ಅಂತಹ ಮಿತಿಯನ್ನು ಆಗ್ಗಿಂದಾಗ್ಗೆ ಪರಾಮರ್ಷಿಸಬೇಕು.

ಸರ್ಕಾರದಿಂದ ಚುನಾವಣಾ ವೆಚ್ಚ ಭರಿಸಲು ನೇರ ಹಣ ನೀಡುವ ಬದಲು ಕರಪತ್ರ, ಪೋಸ್ಟರ್ಸ್, ಮೈಕ್, ವಾಹನ ಮುಂತಾದ ಸವಲತ್ತನ್ನು ಎಲ್ಲಾ ಅಭ್ಯರ್ಥಿಗಳಿಗೆ ಸಮಾನವಾಗಿ ನೀಡಬಹುದು. ಆಸ್ತಿ-ಋಣಭಾರ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವ ರಿಟರ್ನ್ಸ್‌ನೊಂದಿಗೆ ತಾಳೆಮಾಡಿದರೆ ಸತ್ಯಾಂಶ ಪಡೆಯಬಹುದು. ಅದನ್ನು ಬಿಟ್ಟು ಪ್ರತ್ಯೇಕ ಪ್ರಾಧಿಕಾರ ರಚನೆಯು ವ್ಯರ್ಥ ಕಸರತ್ತಾಗಲಿದೆ. ಬಾವುಟ, ಬ್ಯಾನರ್, ಪೋಸ್ಟರ್ಸ್, ಗೋಡೆಬರಹ, ಬಹಿರಂಗ ಸಭೆ, ಮನೆ ಮನೆ ಪ್ರಚಾರ ನಿರ್ಬಂಧಿಸುವ ಬದಲು ವಿದ್ಯುನ್ಮಾನ ಮಾಧ್ಯಮ ಮತ್ತು ಮುದ್ರಣ ಮಾಧ್ಯಮ ಜಾಹಿರಾತುಗಳನ್ನು ನಿಷೇಧಿಸಬೇಕಿದೆ. ಬಹುಕ್ಷೇತ್ರಗಳಿಂದ ಸ್ಪರ್ಧೆ ನಿರ್ಬಂಧ ಜಾರಿಮಾಡಬಹುದು. ಚುನಾವಣಾ ವೆಚ್ಚ ಮಿತಿ ಹೆಚ್ಚಳ ಸರಿ ಆದರೆ ತೆಗೆದುಹಾಕುವುದು ಮಿತಿ ಇಲ್ಲದ ವೆಚ್ಚಕ್ಕೆ ಅವಕಾಶವಾಗಲಿದೆ. ಪ್ರಚಾರ ಅವದಿ ಕಡಿತ ಬಲಾಢ್ಯರಿಗೆ ಸಹಾಯಕವಾಗಲಿದೆ. ಚುನಾವಣಾ ವೆಚ್ಚಗಳ ಮಾಹಿತಿ ನೀಡಿಕೆಯಲ್ಲಿನ ವಿಫಲತೆಗಿರುವ ಶಿಕ್ಷೆಯಾದ ಚುನಾವಣೆಗೆ ಸ್ಪರ್ಧಿಸುವ ನಿರ್ಬಂಧನೆಯನ್ನು 5 ವರ್ಷಕ್ಕೆ ಹೆಚ್ಚಿಸಬಹುದು.

ಚುನಾವಣೆಗಳ ನಡೆಸುವುದು - ಉತ್ತಮ ನಿರ್ವಹಣೆ

ವಿಧಾನ ಸಭೆ, ಲೋಕ ಸಭೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಮಾನ ಮತದಾರರ ಪಟ್ಟಿ ತಯಾರಿಸಬೇಕು. ಟೋಟಲೈಸರ್ ಅಳವಡಿಕೆ (ಎಲ್ಲಾ ಮತ ಯಂತ್ರಗಳ ಮತಗಳನ್ನು ಒಟ್ಟುಗೂಡಿಸಿ ಏಣಿಕೆ)



ಅಕ್ರಮಗಳಿಗೆ ಅನುವುಮಾಡಲಿದೆ. ಮರುಮತದಾನವು ಚುನಾವಣ ಅಧಿಕಾರಿ-ಮತಗಟ್ಟೆ ಅಧಿಕಾರಿಯ ಶಿಫಾರಸ್ಸಿನ ಮೇಲೆ ನಡೆಸಬೇಕೆ ವಿನಹಃ ವೀಕ್ಷಕರ ವರದಿ ಆಧರಿಸಿಯಲ್ಲ. ಮನದಾನಕ್ಕೆ 48 ಗಂಟೆ ಮುನ್ನ ಟಿ.ವಿ, ವೃತ್ತ ಪತ್ರಿಕೆ ಮಾಧ್ಯಮ ಜಾಹಿರಾತು ನಿರ್ಬಂಧ ಸರಿ, ಆದರೆ ಮನೆ ಮನೆ ಪ್ರಚಾರ ನಿರ್ಬಂಧ ಸರಿಯಲ್ಲ. ಸರ್ಕಾರಿ ಜಾಹಿರಾತುಗಳ ನಿರ್ಬಂಧ ಅಗತ್ಯ. ಬಾರ್‌ಕೋಡ್ ಗುರುತಿನ ಚೀಟಿ ನೀಡುವ ಪ್ರಸ್ತಾಪ ಪರಿಗಣಿಸಬಹುದು.

ಸೋತ ಅಭ್ಯರ್ಥಿ ವಿರುದ್ದವು ಚುನಾವಣಾ ತಕರಾರು ಅರ್ಜಿ ಪರಿಗಣಿಸುವ ಪ್ರಸ್ತಾಪ ಸ್ವಾಗತಾರ್ಹ. ಆದರೆ ದುರುದ್ದೇಶ ಪೂರಿತ ಅರ್ಜಿಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮೇಲ್ಮನೆ ಚುನಾವಣಾ ವೆಚ್ಚ ಮಿತಿ ನಿಗದಿ ಅಗತ್ಯವಿದೆ. ಚುನಾವಣಾ ವೆಚ್ಚ ಮಾಹಿತಿ ನೀಡದಕ್ಕೆ ಶಿಕ್ಷೆ ಹೆಚ್ಚಳವು ಸ್ವಾಗತಾರ್ಹ. ಚುನಾವಣಾ ಪ್ರಚಾರ ಅವಧಿ ಸೀಮಿತಗೊಳಿಸುವುದು ಸರಿಯಲ್ಲ.

ಚುನಾವಣಾ ತಕರಾರು ಅರ್ಜಿಗಳ ವಿಚಾರಣೆಗೆ ವಿಶೇಷ ಚುನಾವಣಾ ನ್ಯಾಯಾಧೀಕರಣ ಸ್ಥಾಪನೆ ಸ್ವಾಗತಾರ್ಹ, ಆದರೆ ಅದಕ್ಕೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಮಾತ್ರ ನೇಮಿಸಬೇಕು. ಅಧಿಕಾರಿಗಳ ನೇಮಕ ಅಗತ್ಯವಾಗದು. ಚುನಾವಣಾ ತಕರಾರು ಅರ್ಜಿ ಸಲ್ಲಿಸು ಕಾಲಾವಕಾಶದ ಅವಧಿಯನ್ನು 60 ದಿವಸಕ್ಕೆ ಹೆಚ್ಚಿಸಬಹುದು.

ಪಕ್ಷಾಂತರ ನಿಷೇಧ ಕಾನೂನಿನ ಬಲಪಡಿಸುವಿಕೆ ಸ್ವಾಗತಾರ್ಹ, ಆದರೆ ಪಕ್ಷಾಂತರ ನಿರ್ಧಾರಣೆಯ ಅಧಿಕಾರವನ್ನು ರಾಜ್ಯಪಾಲರು ಅಥವ ರಾಷ್ಟ್ರಪತಿಗಳಿಗೆ ನೀಡುವುದು ಪರಿಹಾರವಾಗದು.

ರಾಜಕೀಯ ಪಕ್ಷಗಳ ನಿರ್ವಹಣೆ - ನಿಯಂತ್ರಣ:

ರಾಜಕೀಯ ಪಕ್ಷಗಳ ಆಸ್ತಿ ಮತ್ತು ಋಣಭಾರ ಕುರಿತು ಲೆಕ್ಕ ಪರಿಶೋಧನೆ ಕಾನೂನಿನಡಿ ವಿಶೇಷ ಪ್ರಾಧಿಕಾರ ರಚಿಸುವುದು ಸಲ್ಲದು, ಏಕೆಂದರೆ ಅದು ರಾಜಕೀಯ ಪಕ್ಷಗಳ ಮೇಲೆ ಅಧಿಕಾರಿಶಾಹಿಯ ಸವಾರಿಗೆ ಅನುವುಗೊಳಿಸುವುದಲ್ಲದೆ, ಬಲಾಢ್ಯರ ದುರುಪಯೋಗಕ್ಕೂ ಅವಕಾಶ ಕಲ್ಪಿಸುತ್ತದೆ.

ರಾಜಕೀಯ ಪಕ್ಷಗಳ ಹೆಚ್ಚಳ ನಿಯಂತ್ರಿಸಲು ಗಂಭೀರವಲ್ಲದ ರಾಜಕೀಯ ಪಕ್ಷಗಳನ್ನು ನಿಯಂತ್ರಿಸಲು ನಿರ್ಧಿಷ್ಟವಧಿಯಲ್ಲಿ ಚುನಾವಣೆಗಳಿಗೆ ಸ್ಪರ್ಧಿಸದ ಹಾಗೂ ಶೇಕಡ ಒಂದರಷ್ಟು ಮತ ಪಡೆಯದ ಪಕ್ಷಗಳ ನೊಂದಾವಣೆ ರದ್ದು ಮಾಡಬಹುದು, ಇದಕ್ಕೆ ಮಾನದಂಡವನ್ನು ಶಾಸನಬದ್ಧಗೊಳಿಸಬೇಕು ಚುನಾವಣಾ ಆಯೋಗಕ್ಕೆ ಈ ನಿಟ್ಟಿನಲ್ಲಿ ಯಾವುದೇ ಮುಕ್ತ ಅಧಿಕಾರ ನೀಡಬಾರದು.

ಚುನಾವಣಾ ಲೆಕ್ಕ ಪತ್ರ ಸಲ್ಲಿಸಲಿಕ್ಕೆ 30 ರಿಂದ 20 ದಿನಕ್ಕೆ ಇಳಿಸುವ ಅಭಿಪ್ರಾಯವು ಪ್ರಾಯೋಗಿಕವಲ್ಲ. ರಾಜಕೀಯ ಪಕ್ಷಗಳ ಲೆಕ್ಕಪತ್ರವನ್ನು ಪ್ರಸ್ತುತ ಲೆಕ್ಕ ಪರಿಶೋಧಕರಿಂದ ಪರಿಶೀಲನೆ ಮಾಡಲಾಗುತ್ತಿದೆ ಮತ್ತು ಅದನ್ನು ಆದಾಯ ತೆರಿಗೆ ಅಧಿಕಾರಿಗಳಿಗೆ ಹಾಗು ಚುನಾವಣ ಆಯೋಗಕ್ಕೆ ನೀಡಲಾಗುತ್ತಿದೆ. ಪ್ರಸಕ್ತ ಈ ವ್ಯವಸ್ಥೆಯನ್ನು ಬದಲಾಯಿಸುವ ಅಗತ್ಯವಿಲ್ಲ. CAG ಯ ಮೂಲಕ ಅನುಮತಿಸಲ್ಪಟ್ಟ ಲೆಕ್ಕಪರಿಶೋಧಕರಿಂದ ಪರಿಶೀಲಿಸಬೇಕೆಂಬ ಶರತ್ತು ಅನಗತ್ಯ ಗೊಂದಲಗಳಿಗೆ ಎಡೆಮಾಡಿಕೊಡಬಹುದು, ಇದು ಪಕ್ಷಪಾತ ಮತ್ತು ಅಧಿಕಾರಶಾಹಿ ಮಧ್ಯಪ್ರವೇಶಕ್ಕೆ ಅನುವುಗೊಳಿಸುತ್ತದೆ. ಲೆಕ್ಕ ಪರಿಶೋಧಕರಿಂದ ಪರಿಶೀಲನೆ ಮಾಡಲ್ಪಟ್ಟ ಲೆಕ್ಕಪತ್ರವನ್ನು ಪ್ರಕಟಿಸಬಹುದು. ಅಂತಹ ಪ್ರಕಟಣೆ ಮಾಡದ ಅಪರಾಧಗಳಿಗೆ ಶಿಕ್ಷೆ ನೀಡಬಹುದೆ ಹೊರತು ನೊಂದಣಿ ರದ್ದುಪಡಿಸಬಾರದು.

ಮುಖ್ಯ ಚುನಾವಣಾ ಆಯೋಗ :

ಚುನಾವಣಾ ಆಯೋಗ ದೆಹಲಿಯಲ್ಲಿನ ಕಛೇರಿಯನ್ನು ಮುಖ್ಯ ಚುನಾವಣಾ ಆಯೋಗದ ವ್ಯಾಪ್ತಿಗೆ ತರಬಹುದು, ಆದರೆ ರಾಜ್ಯಗಳ ಚುನಾವಣಾ ಆಯೋಗದ ಕಛೇರಿಯನ್ನು ತರುವುದು ಸರಿಯಲ್ಲ. ಚುನಾವಣ ಆಯೋಗದ ಆಯ್ಯವ್ಯಯವನ್ನು Consolidated Fund of India ಅಡಿಗೆ ತಂದು

ಪುಟ 10 ಕ್ಕೆ

ಎರಡನೆಯ ಮಗು ಅದೂ ಹೆಣ್ಣಾಯ್ತು. ಹೆಣ್ಣನ್ನು ಸಾಕಿ ಸಲಹುವ ಹೊಣೆಯನ್ನು ನೆನೆಸಿಕೊಂಡು ಬೆದರಿದ ಬಡತಾಯಿ ತಾನೇ ಮಗುವನ್ನು ಕೊಂದು ಸುಟ್ಟಳು. 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ 'ರೂಢಿಗತ' ತೀರ್ಮಾನಕ್ಕೆ ಬರದೇ ಒಟ್ಟು ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಅರ್ಥೈಸುವ ಪ್ರಯತ್ನ ಮಾಡಬೇಕಿದೆ. ಅಮಾನವೀಯ ಕ್ರೌರ್ಯಕ್ಕೆ ತಡೆ ಹಾಕಬೇಕಿದೆ.

ಬಡತನದ ಬೇಗೆ - ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಯ್ತು ನಾಲ್ಕು ದಿನದ ಹಸುಗೂಸು

ಹೆಣ್ಣು ಹುಟ್ಟಿತೆಂದು ಮುರಿಯದಿರು ಮೂಗು
ಅವಳು ಪ್ರಕೃತಿಯ ಬಳಕು ಬಾಗು
ಅಯ್ಯೋ ಕೆಟ್ಟಿದೆಂದು ಹಾಕದಿರಿ ಕೂಗು
ಕೈಹಿಡಿದು ನಡೆಸುವಳು ನಿಮ್ಮ ಬದುಕು

ಎಂದು ಪ್ರಗತಿಪರ ಸಂಘಟನೆಗಳು ಜನರಲ್ಲಿ ಜಾಗೃತಿಯನ್ನು ಉಂಟು ಮಾಡುತ್ತಿದ್ದರು. ಇದಾವುದನ್ನೂ ಕೇಳಿಸಿಕೊಳ್ಳದ ತನ್ನ ಹೃದಯವನ್ನು ಗಟ್ಟಿಗೊಳಿಸಿದ ತಾಯಿಯೊಬ್ಬಳು 9 ತಿಂಗಳು ತನ್ನ ಗರ್ಭದಲ್ಲಿ ಸಾಕಿ ಸಲಹಿ ಜನ್ಮನೀಡಿದ ನಾಲ್ಕು ದಿನದ ಹಸುಗೂಸನ್ನು ಹೆಣ್ಣು ಮಗುವೆಂಬ ಕಾರಣಕ್ಕೆ ಕತ್ತು ಹಿಸುಕಿ ಸಾಯಿಸಿ ಸುಟ್ಟುಹಾಕಿರುವ ಘಟನೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಬೊಮ್ಮೂರು ಅಗ್ರಹಾರ ಗ್ರಾಮದಲ್ಲಿ ನಡೆದಿದೆ. ಈ ಹಳ್ಳಿಯು ಬೆಂಗಳೂರು, ಮೈಸೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣದ 3 ಕಿ.ಮೀ ಅಂತರದಲ್ಲಿದ್ದು ಸಾಂಸ್ಕೃತಿಕ ನಗರ ಮೈಸೂರಿಗೆ 12 ಕಿ.ಮೀ ದೂದರಲ್ಲಿದೆ. ಈ ಗ್ರಾಮದಲ್ಲಿ ಹೆಳವ ಜನಾಂಗ, ದಲಿತ ಮತ್ತು ಒಕ್ಕಲಿಗರು ಇದ್ದಾರೆ. ಹೆಳವ ಜನಾಂಗಕ್ಕೆ ಸೇರಿದ ನಲವತ್ತು ಕುಟುಂಬಗಳು ಐದು ಮನೆಗಳನ್ನು ಹೊರತುಪಡಿಸಿದರೆ ಉಳಿದ ಗುಡಿಸಲುಗಳಿಗೆ ಹಕ್ಕುಪತ್ರಗಳಿಲ್ಲ. ಕೂಲಿಯನ್ನೇ ನಂಬಿ ಜೀವನ ನಡೆಸುತ್ತಾರೆ. 30 ರಿಂದ 40 ವರ್ಷಗಳಿಂದ ವಾಸವಿದ್ದೂ ಹಕ್ಕುಪತ್ರವಿಲ್ಲದ ಕಾರಣ ಮನೆ ಕಟ್ಟಿಕೊಳ್ಳಲು ಯಾವುದೇ ಸರ್ಕಾರಿ ಅನುದಾನವಿಲ್ಲದೆ ಗುಡಿಸಲೇ ಗತಿಯಾಗಿದೆ. ಇಲ್ಲಿ ವಾಸ ಮಾಡುತ್ತಿರುವ ಮಹದೇವು ಎಂಬ ವ್ಯಕ್ತಿಯ ಆಲೆ ಮನೆಯಲ್ಲಿ ಗಂಡ, ಹೆಂಡತಿ ಇಬ್ಬರು ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಇವರಿಗೆ 2.5 ವರ್ಷದ ಹೆಣ್ಣು ಮಗುವಿದ್ದು ಎರಡನೇ ಮಗು ಸಹ ಹೆಣ್ಣು ಮಗು ಜನಿಸಿತ್ತು. ಬಡತನದ ಬೇಗೆ, ವಾಸಿಸಲು ಸ್ಥಿರವಾದ ನೆಲೆಯಿಲ್ಲ. ದುಡಿಯಲು ಭದ್ರತೆಯ ಉದ್ಯೋಗವಿಲ್ಲ ಇದರ ನಡುವೆ ಸರ್ಕಾರದಿಂದ ಬಡತನವನ್ನು ಹೋಗಲಾಡಿಸಿ ಜೀವನದಲ್ಲಿ ಚೈತನ್ಯ ತುಂಬುವ ಯೋಜನೆಗಳಿಲ್ಲ. ಇಂತಹ ಸಂದರ್ಭದಲ್ಲಿ ಎರಡು ಹೆಣ್ಣು ಮಕ್ಕಳನ್ನು ಸಾಕಿ ಸಲುಹಿ ಮದುವೆ ಮಾಡಿ ಅವರ ಜೀವನ ರೂಪಿಸುವುದು ನಮ್ಮಿಂದಾಗದ ಕೆಲಸ ಎಂದು ಹೆದರಿ ರಾಜಮ್ಮ ಎಂಬ ಮಹಿಳೆ 7 ನೇ ತರಗತಿ ವ್ಯಾಸಂಗ ಮಾಡಿದ್ದರು. ಈ ಸಂಕಷ್ಟಗಳನ್ನು ಎದುರಿಸಲಾರದೆ ತನ್ನ ಹೃದಯವನ್ನು ಕಲ್ಲಾಗಿಸಿಕೊಂಡು ತನ್ನ ಮನಸ್ಸನ್ನು ವಿಕೃತಗೊಳಿಸಿಕೊಂಡು ತಾನೇ ಜನ್ಮ ನೀಡಿದ ಹಸುಗೂಸನ್ನು ಕತ್ತುಹಿಸುಕಿ ಸಾಯಿಸಿ ಸುಟ್ಟುಹಾಕಿ ಅಮಾನವೀಯವಾಗಿ ನಡೆದುಕೊಂಡಿದ್ದಾರೆ.

ಪ್ರಕರಣ ಬೆಳಕಿಗೆ

ಈ ಘಟನೆಯ ಬೆಳಕಿಗೆ ಬರಲು ಕಾರಣ ಹೀಗಿದೆ. ಮಗು ಹುಟ್ಟಿದ 3 ದಿನಕ್ಕೆ ಆಶಾ ಕಾರ್ಯಕರ್ತೆ ಬಿ.ಸಿ.ಜಿ ಹಾಕಿಸಿದ್ದರು. ನಾಲ್ಕನೇ ದಿನಕ್ಕೆ ಮಗುವನ್ನು ನೋಡಲು ಮನೆ ಬಳಿ ಹೋದಾಗ ಮಗುವಿನ ಆರೋಗ್ಯವನ್ನು ವಿಚಾರಿಸಿದಾಗ ತಾಯಿಯಾದ ರಾಜಮ್ಮ ಮಗು ಹಾಲು ಕುಡಿಯುತ್ತಿಲ್ಲ ಎಂಬು ತಿಳಿಸಿದ್ದಳು. ಮಗುವನ್ನು ಪರೀಕ್ಷಿಸಿದ ಆಶಾ ಕಾರ್ಯಕರ್ತೆಯು ಮಗು ಸತ್ತು ಹೋಗಿರುವುದನ್ನು ನೋಡಿ ಗಾಬರಿಗೊಂಡಳು. ಏಕೆಂದರೆ ನಿನ್ನೆ ದಿನ ಹಾಕಿರುವ ಬಿ.ಸಿ.ಜಿ. ಯಿಂದ ಏನಾದರೂ ವ್ಯತ್ಯಾಸವಾಗಿರ ಬಹುದೆಂದು ಹೆದರಿ ಪಾಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಗೆ ಫೋನ್ ಮಾಡಿ ಕರೆಸಿಕೊಂಡಳು. ವೈದ್ಯರು ಬಂದು ಸತ್ತ ಮಗುವನ್ನು ನೋಡಿದಾಗ ಕತ್ತಿನ ಬಾಗದಲ್ಲಿ ನೀಲಿ ಬಣ್ಣಕ್ಕೆ ತಿರುಗಿ ಕೈಯಿಂದ ಅಮುಕಿರುವ ಬೆರಳು ಮತ್ತು ಉಗುರಿನ ಗುರುತು ಇದ್ದು ಮೂಗಿನಿಂದ ರಕ್ತ ಹೊರಬಂದಿದ್ದ ಕಲೆ ಇತ್ತು. ವೈದ್ಯರು ಏಕೆ ಮಗು ಸತ್ತುಹೋಯಿತು ಎಂದು ಕೇಳಿದಾಗ ಮಗು ತಾನೇ ತಾನಾಗಿ ಸತ್ತುಹೋಯಿತೆಂದು ತಾಯಿ ಹೇಳಿದಳು. ಮತ್ತೆ ವೈದ್ಯರು ಒತ್ತಡ ಮಾಡಿದಾಗ ಎರಡನೇ ಮಗು ಹೆಣ್ಣು ಎಂಬ ಕಾರಣಕ್ಕೆ ಸಾಕಿ ಬೆಳೆಸಲು ಶಕ್ತಿಯಿಲ್ಲ.



ಉದ್ಯೋಗ ಭದ್ರತೆಯಿಲ್ಲ. ವಾಸಿಸಲು ಸರಿಯಾದ ನೆಲೆಯಿಲ್ಲ. ಅಂತದರಲ್ಲಿ ಮಕ್ಕಳನ್ನು ಬೆಳೆಸಿ ಬಿಕಾರಿ ಮಾಡುವುದರ ಬದಲು ಇವಾಗಲೇ ಸಾಯಿಸುವುದು ಲೇಸು ಎಂದು ತಿಳಿದು ನಾನೇ ಮಗುವನ್ನು ಕತ್ತು ಹಿಸುಕಿ ಸಾಯಿಸಿದೆ ಎಂದು ಒಪ್ಪಿಕೊಂಡಳು. ವೈದ್ಯರು ಗಂಟೆಯ ಅರ್ಧ ಗಂಟೆಯ ನಂತರ ವಾಪಸ್ಸು ಬರುತ್ತೇನೆ ಎಂದು ಹೇಳಿ ಹೊರಹೋದರು. ಆಗ ಅಕ್ಕಪಕ್ಕದ ಮನೆಯವರು ಏಕೆ ಈ ರೀತಿ ಮಾಡಿದ್ದೆಂದು ನಿನ್ನ ಮೇಲೆ ಕೇಸು ಹಾಕುತ್ತಾರೆ ಎಂದು ಬೈದಾಗ ಹೆದರಿ ಆ ಮಗುವನ್ನು ಸುಟ್ಟುಹಾಕಿದರು. ಮಗುವಿ ಮೃತದೇಹ ಬೇಯುತ್ತಿದ್ದ ಸಂದರ್ಭದಲ್ಲಿ ವಿಷಯವನ್ನು ಮಾಧ್ಯಮ ಮತ್ತು ಅಧಿಕಾರಿಗಳಿ ವೈದ್ಯರು ವಿಷಯ ಮುಟ್ಟಿಸಿದರಿಂದ ತಕ್ಷಣ ಸ್ಥಳ ಮಾಧ್ಯಮದವರು ಭೇಟಿಕೊಟ್ಟಾಗ ಅರ್ಧಂಬದ ಬೆಂದುಹೋಗಿದ್ದ ಮಗು ಕಾಣುತ್ತಿತ್ತು. ಈ ಘಟನೆಯ ಮಾಧ್ಯಮದ ಮುಖಾಂತರ ನೋಡಿದ ಜನವಾ ಮಹಿಳಾ ಸಂಘಟನೆಯು ಆ ಗ್ರಾಮಕ್ಕೆ ಭೇಟಿ ನೀಡ ತೀರ್ಮಾನಿಸಿ ಅದರಂತೆ ಜನವಾದಿ ಮಹಿ ಸಂಘಟನೆಯ ಮಂಡ್ಯ ಜಿಲ್ಲಾ ಕಾರ್ಯದರ್ಶಿ ದೇ ಜಿಲ್ಲಾ ಮುಖಂಡರಾದ ಸುನಿತಾ, ಸುಶೀಲ ಹಾಗ ಡಿವೈಎಫ್ಐ ರಾಜ್ಯ ಅಧ್ಯಕ್ಷರಾ ಎನ್.ಎಲ್.ಭರತ್‌ರಾಜ್ ಹಾಗೂ ಡಿವೈಎಫ್ ಮುಖಂಡರಾದ ಸಿದ್ದಪ್ಪನವರ ನಿಯೋಗವು ಭೇ ನೀಡಿ ಆ ಪ್ರದೇಶದ ಜನರನ್ನು ಕರೆದು ಈ ಘಟನೆ ಬಗ್ಗೆ ವಿಚಾರಿಸಿದಾಗ ಈ ಕೃತ್ಯಕ್ಕೆ ಬಡತನ ನಿಲ್ಲಲು ನೆ ಇಲ್ಲದಿರುವುದು ಹೆಣ್ಣು ಮಕ್ಕಳೆಂದರೆ ಬಾರವೆಂ ಭಾವನೆಯಿಂದ ಇಂತಹ ನೀಚ ಕೃತ್ಯವನ್ನು ಎಸಗಿದ್ದಾ

ಈ ಘಟನೆಯಿಂದ ನಾಗರೀಕ ಸಮಾ ತಲೆತಗ್ಗಿಸುವಂತಾಗಿದೆ. ಇದರಿಂದ ನಮ ಗ್ರಾಮದ ಮರ್ಯಾದೆ ಇಡೀ ರಾಜ್ಯದ ಹರಾಜಾಗಿತ್ತೆಂದು ಗ್ರಾಮದ ಕುಮಾರ ಸೋಮಶೇಖರ್, ಚಂದ್ರು, ರಾಜೇಶ್ವ ಸರೋಜ ತಿಳಿಸಿದರು. ಇಂತಹ ಘಟನೆಗ ಮರುಕಳಿಸದಿರಲು ಸಾಮಾಜಿಕ, ಆರ್ಥಿ ಪರಿಸ್ಥಿತಿಗಳು ಬದಲಾಗಬೇಕು. ಹೆಣ್ಣಾಗಲಿ ಗಂಡಾಗಲಿ ಗೌರವದಿಂದ ಜೀವನ ನಡೆಸ ಚೈತನ್ಯ ತುಂಬುವ ಕಾರ್ಯಕ್ರಮಗಳ ಸರ್ಕಾರಗಳು ರೂಪಿಸಬೇಕಾಗಿದೆ. ಸಂ ಸಂಸ್ಥೆಗಳು ಸರ್ಕಾರಗಳು ಜನರಲ್ಲಿ ಜಾಗೃ ಮೂಡಿಸಬೇಕು. ತಂದೆ ತಾಯಿ ಸ್ಥಾನ ಬಡತನವನ್ನು ಮುಂದಿಟ್ಟು ಕರುಳುಬಳ್ಳಿಯ ಸಂಬಂಧವನ್ನೇ ಕಿತ್ತುಹಾಕಿ ಕತ್ತು ಹಿಸ ಸಾಯಿಸುವುದು ಅಮಾನವೀಯ ಮತ್ತು ಶಿಕ್ಷಾ ಅಪರಾಧವಾಗಿರುತ್ತದೆ. ಮಾನವೀಯತೆ ಉಳಿಯ ಹೆಣ್ಣು, ಗಂಡು ಸಮಾನಾಂತರವಾಗಿ ಬದುಕುವ ವ್ಯ ನಿರ್ಮಾಣವಾಗುವ ನಿಟ್ಟಿನಲ್ಲಿ ಎಲ್ಲರ ದುಡಿಯುವಂತಾಗಬೇಕು.

ವರದಿ : ಜನವಾದಿ ಮಹಿಳಾ ಸಂಘಟ
ಮಂಡ್ಯ ಜಿಲ್ಲಾ ಸಮಿತಿ, ಮಂ

ವಿಚಾರಸಂಕಿರಣಗಳು

ಪುಟ 16 ರಿಂದ

ಇಲ್ಲದ ಬಹುಸಂಖ್ಯಾತ ಬಡವರು ಅದರ ಬಹಿಷ್ಕಾರದಲ್ಲಿ ತೊಡಗುವುದು ಅರ್ಥಹೀನ. ಭಾರತಕ್ಕೆ ಮಾನಸಿಕ ಬದಲಾವಣೆ, ಆಂತರಿಕ ಸುಧಾರಣೆ ವಿಮೋಚನೆಗೆ ಚಳುವಳಿ ಹೆಚ್ಚು ತುರ್ತಿನದು. ಆಕ್ರಮಣಕಾರಿ ಹಿಂಸಾತ್ಮಕ ಬಲಪ್ರಯೋಗದ ಮೂಲಕ ಏಕ ಸಂಸ್ಕೃತಿ-ಭಾಷೆ ಹೇರುವ ಯುರೋಪಿಯನ್ ಮಾದರಿಯ ರಾಷ್ಟ್ರೀಯತೆಯ ಅಂಧಾನುಕರಣೆ ಬೇಡ. ಇದು ಟಾಗೋರ್ ಅವರ ಟೀಕೆಯ ಸಾರವಾಗಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿಯವರ ವಿಶಿಷ್ಟ ಸಶಕ್ತ ಪಾತ್ರ ಒಪ್ಪುತ್ತಲೇ, ಟಾಗೋರ್ ವಸಾಹತುಶಾಹಿ-ವಿರೋಧಿ ಐಕ್ಯ ಚಳುವಳಿಯ ರಾಜಕೀಯ ತುರ್ತನ್ನು ಗ್ರಹಿಸಲಿಲ್ಲ. ಆದರೆ ಮುಖ್ಯಧಾರೆಯಾದ ಕಾಂಗ್ರೆಸ್ ಚಳುವಳಿಯಲ್ಲಿ ನುಗ್ಗಿದ ಹಲವು ತೀವ್ರ ನ್ಯೂನ್ಯತೆಗಳ ಬಗ್ಗೆ ಅವರ ಟೀಕೆ ಸರಿಯಾಗಿಯೇ ಇತ್ತು. ಎಂದು ಮಾಲಿನಿ ಅಭಿಪ್ರಾಯ ಪಟ್ಟರು.

ಪ್ರೊ. ಬಸವರಾಜ ಕಲ್ಗುಡಿ ಅವರು ತಮ್ಮ ಪ್ರಬಂಧದಲ್ಲಿ ಗಾಂಧಿ-ಟಾಗೋರ್ ಸಂವಾದವನ್ನು ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮಿಕ ಮತ್ತು ಅನುಭಾವಿ ಪಂಥಗಳ ನಡುವಣ ಸಂವಾದದ ಮುಂದುವರಿಕೆಯಾಗಿ ನೋಡಿದರು. ಗಾಂಧೀಜಿ ಸನಾತನ ಆಧ್ಯಾತ್ಮಿಕ ಹಿಂದೂ ಮೌಲ್ಯಗಳನ್ನು ಆಧುನೀಕರಣಗೊಳಿಸಲು ಹೊರಟರೆ, ಟಾಗೋರ್ ಸನಾತನ ಅನುಭಾವಿಕ ಮೌಲ್ಯಗಳಿಗೆ ನವೀನತೆ ನೀಡಲು ಪ್ರಯತ್ನಿಸಿದರು ಎಂಬುದು ಅವರ ಅಭಿಪ್ರಾಯ. ಸ್ವಾತಂತ್ರ್ಯ ಚಳುವಳಿಯ ಎಲ್ಲಾ ಪ್ರಮುಖ ಸಂವಾದಗಳಲ್ಲಿ ಗಾಂಧಿ ಒಬ್ಬ ಸಾಮಾನ್ಯ ಭಾಗವಾಗಿದ್ದು ಅವರು ಅದರಲ್ಲಿ ತೊಡಗಿ ಸಹಮತ ರೂಪಿಸಲು ಪ್ರಯತ್ನಿಸಿದರು. ಆದರೆ ಸುಭಾಸ್ ಚಂದ್ರ ಬೋಸ್ ಜತೆ ಅವರು ಸಂವಾದಕ್ಕೂ ತಯಾರಿರಲಿಲ್ಲ ಎಂಬುದರ ಕಡೆಗೆ ಚರ್ಚೆಯಲ್ಲಿ ಭಾಗವಹಿಸಿದ ಎಂ.ಕೆ.ಭಾಸ್ಕರ ರಾವ್ ಅವರು ಗಮನ ಸೆಳೆದರು. ಟಾಗೋರರ ಬಗ್ಗೆ ಎದ್ದ ಹಲವು (ರಾಷ್ಟ್ರಗೀತೆ ಇತ್ಯಾದಿ) ವಿವಾದಗಳ ಬಗ್ಗೆ ಸಹ ಅವರು ಪ್ರಸ್ತಾಪಿಸಿದರು. ಇನ್ನೊಂದು ಪ್ರಸಿದ್ಧ ಸಂವಾದವಾ ಗಾಂಧೀ-ಅಂಬೇಡ್ಕರ್ ಸಂವಾದದ ನಂತರ ಪೂನಾ ಒಪ್ಪಂದ ಸಾಧ್ಯ ಮಾಡುವುದರಲ್ಲಿ ಟಾಗೋರ ಪಾತ್ರದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ ಡಾ.ರ ಕುಮಾರ್ ಬಾಗಿ ಪ್ರಸ್ತಾಪಿಸಿದರು. ಪ್ರೊ ಲಿಂಗದೇವರು ಹಳೆಮನೆ ಸಂಕಿರಣದ ಅಧ್ಯಕ್ಷ ವಹಿಸಿದ್ದರು. ಆ ನಂತರ ವಿಷಯದ ಬಗ್ಗೆ ಮು ಸಂವಾದ ನಡೆಯಿತು. ಕೆ.ಎಸ್.ವಿಮಲಾ ವಿಚಾ ಸಂಕಿರಣದ ನಿರೂಪಣೆ ಮಾಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಐದೂವರೆ ದಶಕಗಳ ಹಿಂದೆ ಇತಿಹಾಸ ನಿರ್ಮಿಸಿದ ಕೇರಳದಲ್ಲಿ ಎಲ್‌ಡಿಎಫ್ ಮತ್ತೆ ಅಧಿಕಾರಕ್ಕೆ ಬರುವುದು, ಅಲ್ಲಿಯ ಜನತೆಯ ಇದುವರೆಗಿನ ಗಳಿಕೆಗಳನ್ನು ಮೊದಲು ಕಾಪಾಡಿಕೊಳ್ಳಬೇಕಾದರೆ, ಮತ್ತು ನಂತರ ಅದನ್ನು ಇನ್ನೂ ಉನ್ನತ ಮಟ್ಟಗಳಿಗೆ ಒಯ್ಯಲು ಸಾಧ್ಯವಾಗಬೇಕಾದರೆ ಅತ್ಯಂತ ಅನಿವಾರ್ಯ. ಮಾತ್ರವಲ್ಲ, ನಮ್ಮ ಎಲ್ಲಾ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲು ಅಖಿಲ ಭಾರತ ಮಟ್ಟದಲ್ಲಿ ಒಂದು ಪರ್ಯಾಯ ಧೋರಣೆಯ ದಿಕ್ಪಥಕ್ಕಾಗಿ ನಡೆದಿರುವ ಪ್ರಯತ್ನಗಳನ್ನು ಬಲಪಡಿಸಲು ಕೂಡ ಅಗತ್ಯ

ಉತ್ತಮ ಭಾರತದ ನಿರ್ಮಾಣಕ್ಕೆ

ಕೇರಳದಲ್ಲಿ ಎಲ್‌ಡಿಎಫ್ ಮರು ಆಯ್ಕೆ ಅತ್ಯಗತ್ಯ

ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ, ಈಗಾಗುತ್ತಿರುವಂತೆ ಕೇವಲ ಕೆಲವರಿಗಾಗಿ ಅಲ್ಲ, ಸಮಸ್ತ ಜನತೆಗಾಗಿ ಅದನ್ನು ನಿರ್ಮಿಸುವ ಪ್ರಯತ್ನಗಳನ್ನು ಮುಂದೊಯ್ಯಲು ಪಶ್ಚಿಮ ಬಂಗಾಲದಲ್ಲಿ ಎಡರಂಗ ಮತ್ತು ಕೇರಳದಲ್ಲಿ ಎಡ ಪ್ರಜಾಪ್ರಭುತ್ವವಾದಿ ರಂಗ(ಎಲ್‌ಡಿಎಫ್) ಯಶಸ್ವಿಯಾಗುವಂತೆ ಮಾಡುವುದು ಒಂದು ಮಹತ್ವದ ಅಂಶ.

ಕಳೆದ ಸಂಚಿಕೆಯಲ್ಲಿ ಕಂಡಂತೆ, ಸಿಪಿಐ(ಎಂ) ನೇತೃತ್ವದ ರಂಗಗಳ ರಾಜ್ಯ ಸರಕಾರಗಳು ಜನತೆಯ ಬದುಕನ್ನು ಉತ್ತಮಗೊಳಿಸುವಲ್ಲಿ ಬಂಡವಾಳಶಾಹಿ-ಭೂಮಾಲಕ ವರ್ಗ ಆಳ್ವಿಕೆಯಲ್ಲಿ ಮತ್ತು ಸಂವಿಧಾನದ ಅಡಿಯಲ್ಲಿ ಅದುವರೆಗೆ ಅಜ್ಞಾತವಾಗಿದ್ದ (ಆಳುವ ವರ್ಗಗಳು ಶೋಷಣೆಯನ್ನು ತೀವ್ರಗೊಳಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿಯೇ ಅಡಗಿಸಿಟ್ಟಿದ್ದ) ಸಾಧ್ಯತೆಗಳನ್ನು ತೆರೆದು ಕೊಟ್ಟವು. ಇತರೆಡೆಗಳಲ್ಲಿ ಆಳುವ ವರ್ಗಗಳು ನಮ್ಮ ಸಂಪನ್ಮೂಲಗಳ ಲಂಗುಲಗಾಮಿಲ್ಲದ ಲೂಟಿ ನಡೆಸುತ್ತಿರುವಾಗ, ಅದಕ್ಕಿಂತ ಸಂಪೂರ್ಣ ಭಿನ್ನವಾಗಿ ಈ ಸರಕಾರಗಳು ರಾಜಕೀಯ ನೈತಿಕತೆಯ ಉನ್ನತ ಮಟ್ಟಗಳನ್ನು ಎತ್ತಿ ಹಿಡಿದಿವೆ. ಈ ಸರಕಾರಗಳು ದುಡಿಯುವ ಜನತೆಯ ಹಕ್ಕುಗಳ ರಕ್ಷಣೆಗೆ ದೃಢವಾಗಿ ನಿಂತಿವೆ. ಅದರಿಂದಾಗಿ ಅವು ದೇಶದಲ್ಲಿ ಪ್ರಜಾಪ್ರಭುತ್ವ ಆಂದೋಲನದ ಕಾವಲು ಠಾಣೆಗಳಾಗಿವೆ.

ಶಾಶ್ವತ ಪ್ರಭಾವ

ಕೇರಳದ ಜನತೆ 1957ರಲ್ಲಿ ಒಂದು ವಿಶಿಷ್ಟ ಚರಿತ್ರೆಯನ್ನೇ ನಿರ್ಮಿಸಿದರು. ಕೇರಳ ರಾಜ್ಯ ರಚನೆಯಾದ ನಂತರ ನಡೆದ ಮೊತ್ತಮೊದಲ ವಿಧಾನಸಭಾ ಚುನಾವಣೆಗಳಲ್ಲಿ ಅವರು ಒಂದು ಕಮ್ಯುನಿಸ್ಟ್ ಸರಕಾರವನ್ನು ಚುನಾಯಿಸಿದರು. ಆ ವೇಳೆಗೆ ಜಗತ್ತಿನ ಬೇರೆಲ್ಲೂ ಕಂಡಿರದ ಅಭೂತಪೂರ್ವ ಘಟನೆ ಅದು. ಆಳುವ ವರ್ಗಗಳೇನೋ ಒಂದು ಚುನಾಯಿತ ಸರಕಾರವನ್ನು ಪ್ರಜಾಪ್ರಭುತ್ವ-ವಿರೋಧಿ ರೀತಿಯಲ್ಲಿ ವಜಾ ಮಾಡಿದರು. ಅದು ಪ್ರಮುಖವಾಗಿ, ಅವರ ವರ್ಗ ದೃಷ್ಟಿಕೋನವನ್ನು ಪ್ರದರ್ಶಿಸಿತು, ಏಕೆಂದರೆ ಜನತೆಯ ಸಮ್ಮತಿಯಿಂದ ಕಾರ್ಮಿಕ ವರ್ಗದ ಪಕ್ಷ ಒಂದು ಸರಕಾರದ ನೇತೃತ್ವವನ್ನು ವಹಿಸಿದ್ದು ಅವರಿಗೆ ಅಸಹನೀಯವಾಗಿತ್ತು. ಆದರೂ ಈ ಸರಕಾರ ಅಂಗೀಕರಿಸಿದ ಪರ್ಯಾಯ ಜನಪರ ಧೋರಣೆಯ ದಿಕ್ಪಥ ಕೇರಳದ ರಾಜಕಿಯ ಮತ್ತು ಅಭಿವೃದ್ಧಿಯ ಮೇಲಷ್ಟೇ ಅಲ್ಲ, ಇಡೀ ಭಾರತದಲ್ಲೂ ಶಾಶ್ವತ ಪ್ರಭಾವ ಬೀರಿದೆ.

ಇದು ನಿಮಗೆ ಗೊತ್ತೇ?

- ಕೇರಳದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲದೆ, 13 ಜೀವನಾವಶ್ಯಕ ಸರಕುಗಳನ್ನು ಒದಗಿಸುವ ನ್ಯಾಯ ಬೆಲೆ ಅಂಗಡಿಗಳ ಒಂದು ವ್ಯಾಪಕ ಜಾಲವನ್ನು ನಿರ್ಮಿಸಲಾಗಿದೆ. ಇಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬೆಲೆಗಳನ್ನು ಅದೇ ಮಟ್ಟದಲ್ಲಿ ಉಳಿಸಿಕೊಳ್ಳಲಾಗಿದೆ.
- 2005-06ರಲ್ಲಿ 96 ಕೋಟಿ ರೂ. ನಷ್ಟವನ್ನು ದಾಖಲಿಸಿದ ಕೇರಳದ ರಾಜ್ಯ ಸಾರ್ವಜನಿಕ ವಲಯದ ಘಟಕಗಳು 2009-10ರಲ್ಲಿ 240 ಕೋಟಿ ರೂ.ಗಳ ಲಾಭವನ್ನು ಗಳಿಸುವಂತಾಗಿದೆ. ಈ ಮಿಗುತೆ ಈಗಿರುವ ಸಾರ್ವಜನಿಕ ವಲಯದ ಘಟಕಗಳನ್ನು ವಿಸ್ತರಿಸಲು ಮತ್ತು ಎಂಟು ಹೊಸ ಘಟಕಗಳನ್ನು ಸ್ಥಾಪಿಸಲು ಮರುಹೂಡಿಕೆಯಾಗಿದೆ. ಕೇರಳ, ಬಹುಶಃ, ಹೊಸ ಸಾರ್ವಜನಿಕ ವಲಯದ ಘಟಕಗಳನ್ನು ನಿರ್ಮಿಸುತ್ತಿರುವ ಏಕೈಕ ರಾಜ್ಯವಾಗಿದೆ.

ಕೇರಳ, ದೇಶದ ಬೇರೆ ಯಾವ ರಾಜ್ಯಕ್ಕೆ ಹೋಲಿಸಿದರೂ, ಅತ್ಯುನ್ನತ ಸಾಮಾಜಿಕ ಸೂಚಿಗಳು ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಹೊಂದಿದೆ. ಇದರಲ್ಲಿ ಕೆಲವು ಅಂಶಗಳಲ್ಲಿ ಅದು ಪಶ್ಚಿಮ ಯುರೋಪನ್ನು ಕೂಡ ಮೀರಿ ನಿಲ್ಲುತ್ತದೆ. ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಜನತೆಗಾಗಿ ಅತಿ ಹೆಚ್ಚು ಸಂಖ್ಯೆಯಲ್ಲಿ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿರುವ ಸರಕಾರ; ಅಸಂಘಟಿತ ವಲಯದಲ್ಲಿ ಕಾರ್ಮಿಕರಿಗೆ ಪೆನ್ಶನ್, ಅಸಂಘಟಿತ ವಲಯದ ಮಹಿಳಾ ಕಾರ್ಮಿಕರಿಗೆ ಒಂದು ತಿಂಗಳ ಹೆರಿಗೆಪೂರ್ವ ರಜೆ, ಕೆ.ಜಿ.ಗೆ 2ರೂ.ನಲ್ಲಿ ಅಕ್ಕಿ ಸ್ಕೀಮ್ ಮತ್ತು ದೀರ್ಘ ಕಾಯಿಲೆಗಳಿಗೂ ಸೇರಿದಂತೆ ಉಚಿತ ಆರೋಗ್ಯ ವಿಮೆ ಇತ್ಯಾದಿ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲದೆ, 13 ಜೀವನಾವಶ್ಯಕ ಸರಕುಗಳನ್ನು ಒದಗಿಸುವ ನ್ಯಾಯ ಬೆಲೆ ಅಂಗಡಿಗಳ ಒಂದು ವ್ಯಾಪಕ ಜಾಲವನ್ನು ನಿರ್ಮಿಸಲಾಗಿದೆ. ಇಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬೆಲೆಗಳನ್ನು ಅದೇ ಮಟ್ಟದಲ್ಲಿ ಉಳಿಸಿಕೊಳ್ಳಲಾಗಿದೆ. ಐದು ಲಕ್ಷ ಮನೆಗಳನ್ನು ಕಟ್ಟಿಸುವ ಇಎಂಎಸ್ ವಸತಿ ಯೋಜನೆ ಪೂರ್ಣಗೊಂಡಾಗ, ಕೇರಳದಲ್ಲಿ ಒಂದು ಮನೆಯಿಲ್ಲದ ಕುಟುಂಬವೇ ಇರುವುದಿಲ್ಲ.



'ಜನತೆಯ ಯೋಜನೆ'

ವಿಕೇಂದ್ರೀಕರಣದ ಒಂದು ವ್ಯವಸ್ಥೆಯ ಮೂಲಕ ಪ್ರಜಾಪ್ರಭುತ್ವವನ್ನು ಬುಡಮಟ್ಟಕ್ಕೆ ಒಯ್ದು ಅದನ್ನು ಬಲಪಡಿಸುವ ಕ್ರಿಯೆಯನ್ನು ಕೇರಳದಲ್ಲಿ ಇಎಂಎಸ್ ಸರಕಾರ 1957ರಲ್ಲಿಯೇ ಆರಂಭಿಸಿತು. ಇದನ್ನು ಮುಂದೆ ಇನ್ನಷ್ಟು ಬೆಳೆಸಿ ಜನತೆ ಭಾಗವಹಿಸುವ ಪ್ರಜಾಪ್ರಭುತ್ವದ ಮೂಲಕ 'ಜನತೆಯ ಯೋಜನೆ'ಯಾಗಿ ಅಭಿವೃದ್ಧಿ ಪಡಿಸಲಾಯಿತು. ಇದು ಜನತೆಗೆ ಅಪಾರ ಪ್ರಯೋಜನಗಳನ್ನು ತಂದು ಕೊಟ್ಟಿದೆ.

ಎಲ್‌ಡಿಎಫ್ ಸರಕಾರ ಅನುಸರಿಸಿದ ಪರ್ಯಾಯ ಧೋರಣೆಯ ದಿಕ್ಕು ಗಮನಾರ್ಹ ಫಲಿತಾಂಶಗಳನ್ನು ನೀಡಿದೆ. ಉದಾಹರಣೆಗೆ, ಸಾರ್ವಜನಿಕ ವಲಯವನ್ನು ಖಾಸಗೀಕರಿಸುವ ಕೇಂದ್ರ ಸರಕಾರದ ದಾಳಿಗೆ ತದ್ವಿರುದ್ಧವಾಗಿ, ಎಲ್‌ಡಿಎಫ್ ಸರಕಾರ ರೋಗಗ್ರಸ್ತವಾಗಿದ್ದ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಚೇತರಿಕೆ ತರುವಲ್ಲಿ ಯಶಸ್ವಿಯಾಗಿದೆ. 2005-06ರಲ್ಲಿ 96 ಕೋಟಿ ರೂ. ನಷ್ಟವನ್ನು ದಾಖಲಿಸಿದ ಈ ಘಟಕಗಳೇ 2009-10ರಲ್ಲಿ 240 ಕೋಟಿ ರೂ.ಗಳ ಲಾಭವನ್ನು ಗಳಿಸುವಂತಾಗಿದೆ. ಈ ಮಿಗುತೆ ಈಗಿರುವ ಸಾರ್ವಜನಿಕ ವಲಯದ ಘಟಕಗಳನ್ನು ವಿಸ್ತರಿಸಲು ಮತ್ತು ಎಂಟು ಹೊಸ ಘಟಕಗಳನ್ನು ಸ್ಥಾಪಿಸಲು ಮರುಹೂಡಿಕೆಯಾಗಿದೆ. ಕೇರಳ, ಬಹುಶಃ, ಹೊಸ ಸಾರ್ವಜನಿಕ ವಲಯದ ಘಟಕಗಳನ್ನು ನಿರ್ಮಿಸುತ್ತಿರುವ ಏಕೈಕ ರಾಜ್ಯವಾಗಿದೆ. ಇದು, ಜನತೆಯ ಹಿತಗಳನ್ನು ಎತ್ತಿ ಹಿಡಿಯುವ, ಅವರ ಬದುಕನ್ನು ಉತ್ತಮಗೊಳಿಸಲು ಸಮರ್ಪಿತವಾದ ರಾಜ್ಯ ಸರಕಾರಗಳು ಭಾರತದಲ್ಲಿ ಈಗಿರುವ ಬಂಡವಾಳಶಾಹಿ-ಭೂಮಾಲಕ ವರ್ಗ ಆಳ್ವಿಕೆಯ ಮಿತಿಯೊಳಗೆ ಕೆಲಸ ಮಾಡುತ್ತಲೂ ಜನಗಳಿಗೆ ಗಮನಾರ್ಹ ಪ್ರಯೋಜನಗಳನ್ನು ಒದಗಿಸಬಲ್ಲವು ಎಂಬುದನ್ನು ಮತ್ತೊಮ್ಮೆ ತೋರಿಸಿ ಕೊಡುತ್ತದೆ.

ಗಳಿಕೆಗಳ ಉಳಿಕೆಗೆ

ಇವು ಮತ್ತು ಇನ್ನೂ ಹಲವು ಸಂಗತಿಗಳಿಂದಾಗಿಯೇ, ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪ್ರಕಟವಾಗಿರುವ ಚುನಾವಣಾ-ಪೂರ್ವ ಸಮೀಕ್ಷೆಗಳು ಕೇರಳದಲ್ಲಿ ಅಧಿಕಾರಸ್ಥ-ವಿರೋಧಿ ಅಂಶ(ಅಧಿಕಾರದಲ್ಲಿ ಇರುವ ಪಕ್ಷ/ಮೈತ್ರಿಕೂಟದ ಬಗ್ಗೆ ಜನರಲ್ಲಿ ಸಾಮಾನ್ಯವಾಗಿ ಇರುವ ತಿರಸ್ಕಾರದ ಅಂಶ) ಎಂಬುದು ಕೆಲಸ ಮಾಡುತ್ತಿಲ್ಲ ಎಂದೇ ಹೇಳಬಹುದು ಎಂದು ತೋರಿಸಿವೆ. ಈ ರಾಜ್ಯದಲ್ಲಿ ಕಳೆದ ಕೆಲವು ದಶಕಗಳಲ್ಲಿ, ಸರಕಾರಗಳು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ಸತತವಾಗಿ ಅದಲು ಬದಲಾಗುತ್ತಿರುವ ಪ್ರವೃತ್ತಿ ಕಾಣ ಬಂದಿದೆ. ಆದರೆ ಈ ಬಾರಿ, ಮೇಲೆ ಹೇಳಿದ ಕಾರಣಗಳಿಂದಾಗಿ, ಈ ಪ್ರವೃತ್ತಿಯನ್ನು ಬದಲಿಸಬೇಕಾಗಿದೆ. ಕೇರಳದ ಜನತೆಯ ಇದುವರೆಗಿನ ಗಳಿಕೆಗಳನ್ನು ಮೊದಲು ಕಾಪಾಡಿಕೊಳ್ಳಬೇಕಾದರೆ, ಮತ್ತು ನಂತರ ಅದನ್ನು ಇನ್ನೂ ಉನ್ನತ ಮಟ್ಟಗಳಿಗೆ ಒಯ್ಯಲು ಸಾಧ್ಯವಾಗಬೇಕಾದರೆ ಇದು ಅತ್ಯಂತ ಅನಿವಾರ್ಯ.

ಇದು ನಮ್ಮ ಎಲ್ಲಾ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲು ಅಖಿಲ ಭಾರತ ಮಟ್ಟದಲ್ಲಿ ಒಂದು ಪರ್ಯಾಯ ಧೋರಣೆಯ ದಿಕ್ಪಥಕ್ಕಾಗಿ ನಡೆದಿರುವ ಪ್ರಯತ್ನಗಳನ್ನು ಬಲಪಡಿಸಲು ಕೂಡ ಅಗತ್ಯ ಎಂದು ಬೇರೆ ಹೇಳಬೇಕಾಗಿಲ್ಲ.

(ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯ ಸಂಪಾದಕೀಯ ಮಾರ್ಚ್ 13, 2011 ಆಧರಿಸಿ)

ಮಮತರ ಕೇಂದ್ರ ರೈಲ್ವೆ ಬಜೆಟ್ ಎಂಬ ರೈಲಿಗೆ ಓಡಲು ಹಳಿ ಬೇಕೆಂದೇನೂ ಇಲ್ಲ. ಚುಕು ಬುಕು...... ಎಂದು ಭರವಸೆಗಳ ಬೋಗಿಗಳು ಒಂದು ಮೇಲೊಂದು ನುಗ್ಗಿ ಬಂದಿವೆ. ಆದರೆ ಕಳೆದ ವರ್ಷ ಪ್ರಕಟಿಸಿದ ಯೋಜನೆಗಳು, ಕೊಟ್ಟ ಭರವಸೆಗಳ ಕತೆ ಏನಾಗಿದೆ ಕೇಳುವವರು ಯಾರು?

ಹಳಿ ಇಲ್ಲದೇ ಓಡುತ್ತಿರುವ ಮಮತ 'ರೈಲು' ಬಜೆಟ್

■ ಬಾಲಕೃಷ್ಣಶೆಟ್ಟಿ

ಮಮತಾ ದೀದಿ ರೈಲು ಅಥವಾ ಕನ್ನಡದ ಆಡು ಭಾಷೆಯಲ್ಲಿ ರೈಲು ಬಿಡೋದು ಅಂದರೆ ಸುಳ್ಳು ಹೇಳುವುದು ಎಂದರ್ಥ. ಈ ವಿದ್ಯೆಯಲ್ಲಿ ನಿಸ್ಸೀಮರಾಗಿರುವವರು ರೈಲ್ವೆ ಮಂತ್ರಿ ಮಮತಾ ಬ್ಯಾನರ್ಜಿ ಎಂದರೆ ತಪ್ಪಾಗಲಿಕ್ಕಿಲ್ಲ.

2011 ಮತ್ತು 12 ರ ಬಜೆಟ್‌ನಲ್ಲಿ ಭರವಸೆಗಳ ಮಹಾಪೂರವನ್ನೇ ಹರಿಯಬಿಟ್ಟಿರುವ ಮಮತಾ ಬ್ಯಾನರ್ಜಿ ರೈಲ್ವೆ ಇಲಾಖೆಯನ್ನೇ ಅಧೋಗತಿಗೆ ತಳ್ಳುತ್ತಿದ್ದಾರೆ. ಬಜೆಟ್ ಮಂಡಿಸುವಾಗ ಅವರೇ ಒಪ್ಪಿಕೊಂಡಂತೆ ಹಣಕಾಸಿನ ಕೊರತೆಯನ್ನು ರೈಲ್ವೆ ಇಲಾಖೆ ಎದುರಿಸುತ್ತಿದೆ. ದೇಶದ ಒಟ್ಟು ವರಮಾನ ಶೇ.8 ರಷ್ಟು ಹೆಚ್ಚುತ್ತಿದೆ ಎಂದು ಹೇಳುವಾಗಲೇ ಸರಕು ಸಾಗಾಣಿಕೆಯ ಆದಾಯ ಹೆಚ್ಚುತ್ತಿಲ್ಲ.

ಈ ಅವಧಿಯಲ್ಲಿ ಕೇವಲ ಪ್ರಯಾಣಿಕರಿಂದ ಬರುವ ಆದಾಯ ಮಾತ್ರ ಹೆಚ್ಚಿದೆ. ಅದರಲ್ಲೂ ಬಹುಭಾಗ ರಿಸರ್ವ್ ಟಿಕೇಟುಗಳನ್ನು 'ತತ್ಕಾಲ್' ಸೇವೆಗೆ ಮೀಸಲಿರಿಸುವುದರ ಮೂಲಕ ಪರೋಕ್ಷವಾಗಿ ರೈಲುದರ ಹೆಚ್ಚಿದಂತಾಗಿದೆ.


ಯೋಜನೆಗಳಿಗೆ 57,630 ಕೋಟಿ ರೂ ಎಲ್ಲಿಂದ

2011 ಮತ್ತು 12 ರ ಬಜೆಟ್‌ನಲ್ಲಿ ಯೋಜನೆಯ ಗಾತ್ರವನ್ನು 57,630 ಕೋಟಿ ರೂ. ಗಳಿಗೆ ಹೆಚ್ಚಿಸಿದೆ. ಆದರೆ ಈ ಹಣ ಎಲ್ಲಿಂದ ಬರುತ್ತದೆ? ಇದರಲ್ಲಿ 20,000 ಕೋಟಿ ರೂ. ಕೇಂದ್ರ ಬಜೆಟ್‌ನಿಂದ ಬಂದರೆ, 20,500 ಕೋಟಿ ರೂ. ರೈಲ್ವೆ ಬಾಂಡುಗಳ ಮೂಲಕ ಸಾರ್ವಜನಿಕರಿಂದ ಸಾಲ ಎತ್ತಲಾಗುತ್ತಿದೆ. ರೈಲ್ವೆ ಇಲಾಖೆಯ ಸ್ವಂತ ಹೂಡಿಕೆ ಕಳೆದ ಬಜೆಟ್‌ಗಿಂತ ಈ ಬಜೆಟ್‌ನಲ್ಲಿ 300 ಕೋಟಿ ರೂ. ಕಡಿಮೆಯಾಗಿದೆ!

ಹೊಸ ಯೋಜನೆಗಳಲ್ಲಿ ಆಸ್ಪತ್ರೆ, ಕ್ರೀಡಾಂಗಣ, ವ್ಯಾಗನ್ ತಯಾರಿಕಾ ಕಾರ್ಖಾನೆಗಳು, ವಿದ್ಯುತ್ ಕಾರ್ಯಾಗಾರ ಹೊಸ ಮಾರ್ಗಗಳು ಇತ್ಯಾದಿಗಳನ್ನು ಘೋಷಿಸಲಾಗಿದೆ. ಆದರೆ ಈಗಾಗಲೇ ಘೋಷಿಸಲಾದ ಯೋಜನೆಗಳನ್ನು ಜ್ಯಾರಿ ಮಾಡಲಾಗಿದೆಯೋ? ಇಲ್ಲ ಕಳೆದ ವರ್ಷ ಘೋಷಿಸಿದ ಯೋಜನೆಗಳ ಬಗ್ಗೆ ಈ ಬಜೆಟ್‌ನಲ್ಲಿ ಒಂದೋ ಮರೆತಿದ್ದಾರೆ ಅಥವಾ ಸಬೂಬು ಹೇಳಿದ್ದಾರೆ. ಅವುಗಳ ಕೆಲವು ತುಣುಕುಗಳು ಈ ಕೆಳಗಿನಂತಿವೆ :

ಬಂಗಾಳದ ಚುನಾವಣೆಯ ಮೇಲೆ ಕಣ್ಣು

ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಅಸೆಂಬ್ಲಿ ಚುನಾವಣೆಯನ್ನು ಗಮನದಲ್ಲಿರಿಸಿ, ಆ ರಾಜ್ಯಕ್ಕೆ ಹಲವಾರು ಯೋಜನೆಗಳನ್ನು ಘೋಷಿಸಿದ್ದಾರೆ. ಮಮತಾ ಬ್ಯಾನರ್ಜಿ. ಕರ್ನಾಟಕ ಮತ್ತಿತರ ರಾಜ್ಯಗಳಿಗೆ ವಂಚನೆ ಮಾಡಿದ್ದಾರೆ. ಇಂದಿರಾಗಾಂಧಿ ಕಾಲದ ಕಡೂರು, ಚಿಕ್ಕಮಗಳೂರು ಮಾರ್ಗವಾಗಲಿ, ವಾಜಪೇಯಿ ಅಡಿಗಲ್ಲು ಹಾಕಿದ ಹುಬ್ಬಳ್ಳಿ, ಅಂಕೋಲಾ ಮಾರ್ಗವಾಗಲೀ, ದೇವೇಗೌಡ ಕಾಲದಲ್ಲಿ ಮಂಜೂರಾತಿ ನೀಡಿದ ಗುಲ್ಬರ್ಗಾ, ಬೀದರ್ ಮಾರ್ಗಗಳನ್ನು ಪೂರ್ಣಗೊಳಿಸಲು ಬಜೆಟ್‌ನಲ್ಲಿ ಹಣ ಮೀಸಲಾಗಿಟ್ಟಿಲ್ಲ.



ಇದೇ ರೀತಿಯಾಗಿ, 913 ಕೋಟಿ ರೂ. ಅಂದಾಜು ವೆಚ್ಚದ ತುಮಕೂರು ದಾವಣಗೆರೆ ಮಾರ್ಗಕ್ಕೆ ಮೀಸಲಿಟ್ಟ ಹಣ ಕೇವಲ 1 ಕೋಟಿ ರೂ. ಅಂದರೆ ಪ್ರತಿವರ್ಷ ಇಷ್ಟೇ ಹಣ ಮೀಸಲಿಟ್ಟರೆ ಈ ಯೋಜನೆ ಪೂರ್ಣಗೊಳ್ಳಲು 913 ವರ್ಷ ಬೇಕಾಗುತ್ತದೆ! (ಇಂದಿನ ಬೆಲೆಯಲ್ಲಿ) 341.05 ಕೋಟಿ ರೂ. ವೆಚ್ಚದ ವೈಟ್‌ಫೀಲ್ಡ್ ಕೋಲಾರ ಹಾಗೂ 562.74 ಕೋಟಿ ರೂ. ವೆಚ್ಚದ ಶಿವಮೊಗ್ಗ ಹರಿಹರ ಮಾರ್ಗಕ್ಕೂ ಕೇವಲ 1 ಕೋಟಿ ರೂ. ಮಾತ್ರ ತೆಗೆದಿರಿಸಲಾಗಿದೆ. ಒಟ್ಟಾರೆಯಾಗಿ ಹೊಸ ಮಾರ್ಗಗಳ ನಿರ್ಮಾಣಕ್ಕೆ ಕಳೆದ ಬಾರಿಗಿಂತ ಈ ಬಾರಿ 107 ಕೋಟಿ ರೂ. ಕಡಿಮೆ ನೀಡಿದ್ದಾರೆ. ಹಾಗೂ ಗೇಜ್ ಪರಿವರ್ತನೆಗೂ ಕಳೆದ ಬಾರಿಗಿಂತ 47 ಕೋಟಿ ರೂ. ಕಡಿಮೆಯಾಗಿದೆ.

ರಾಜ್ಯದಲ್ಲಿ ವಿವಿಧ ಬಜೆಟ್‌ಗಳಲ್ಲಿ ಘೋಷಿಸಿ, ಬಾಕಿ ಉಳಿದಿರುವ ಯೋಜನೆಗಳ ಪಟ್ಟಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಖಾಲಿ ಹುದ್ದೆಗಳ ಭರ್ತಿ :

ಸಿ ಮತ್ತು ಡಿ ಗ್ರೂಪ್ ನೌಕರರಲ್ಲಿ 1.75 ಲಕ್ಷ

ಪುಟ 10ಕ್ಕೆ

ಮಮತ ಕೊಟ್ಟ ಭರವಸೆಗಳು - ಮರೆತ ಯೋಜನೆಗಳು

ರಾಯಚೂರು ಜಿಲ್ಲೆ

ಮುನಿರಾಬಾದ್ ಮಹೆಬೂಬನಗರ ಬ್ರಾಡ್‌ಗೇಜ್ ರೈಲ್ವೆ ಮಾರ್ಗ ನಿರ್ಮಾಣ

ಗದಗ, ಲಿಂಗಸುಗೂರು, ವಾಡಿ ಮಾರ್ಗ ನಿರ್ಮಾಣ

ಚಾಲ್ತಿ ಕುಡಚಿ, ಬಾಗಲಕೋಟ ಮಾರ್ಗ ರಾಯಚೂರುವರೆಗೆ ವಿಸ್ತರಣೆ

ಗುಲ್ಬರ್ಗ, ರಾಯಚೂರು, ಬೆಂಗಳೂರು ಫಾಸ್ಟ್ ಪ್ಯಾಸೆಂಜರ್ ರೈಲು ಸಂಚಾರ

ಬಳ್ಳಾರಿ ಜಿಲ್ಲೆ

ಚೆನ್ನೈ- ಹುಬ್ಬಳ್ಳಿ, (ಗುಂತಕಲ್ -ಬಳ್ಳಾರಿ-ಹೊಸಪೇಟೆ - ಮಾರ್ಗ)

ಹುಬ್ಬಳ್ಳಿ-ಗುಂತಕಲ್-ಇಂಟರ್‌ಸಿಟಿ ರೈಲು

ಹೊಸಪೇಟೆ - ಬೆಂಗಳೂರು, ಹುಬ್ಬಳ್ಳಿ - ಗುಲ್ಬರ್ಗ (ಬಳ್ಳಾರಿ ಮಾರ್ಗ)

ಮುನಿರಾಬಾದ್ -ಮಹೆಬೂಬನಗರ- ಗದಗ - ಮುಂಡರಗಿ (ಹಡಗಲಿ-ಹರಪನಹಳ್ಳಿ - ಹರಿಹರ ಮಾರ್ಗ) ಕೊಟ್ಟೂರು ಹರಿಹರ- ಚಳ್ಳಕೆರೆ - ಹರಿಹರ ಹೊಸ ರೈಲು ಮಾರ್ಗದ ಬೇಡಿಕೆ.

ವಿಜಾಪುರ ಯಶವಂತಪುರ ಹೊಸ ರೈಲು ಸಂಚಾರ

ಶಿವಮೊಗ್ಗ ಜಿಲ್ಲೆ

ತಾಳಗುಪ್ಪ - ಹೊನ್ನಾವರ ಕೊಂಕಣ ರೈಲ್ವೆ ಸಂಪರ್ಕ

ಬಾಗಲಕೋಟ, ವಿಜಾಪುರ ಜಿಲ್ಲೆ

ಬಾಗಲಕೋಟ ರೈಲ್ವೆ ನಿಲ್ದಾಣ ಆಧುನೀಕರಣ, ಮಾದರಿ ನಿಲ್ದಾಣ

ಗದಗ -ಬಾಗಲಕೋಟ ಪ್ಯಾಸೆಂಜರ್ ರೈಲು

ದಾವಣಗೆರೆ ಜಿಲ್ಲೆ

ಹರಿಹರ-ಬೆಂಗಳೂರಿಗೆ ಹೊಸ ಇಂಟರ್‌ಸಿಟಿ ರೈಲು

ಕೊಟ್ಟೂರು-ಜಗಳೂರು - ಚಿತ್ರದುರ್ಗ ನಡುವೆ ಹೊಸ ಮಾರ್ಗ.

ದಾವಣಗೆರೆ -ಬೀರೂರು ಜೋಡಿ ಮಾರ್ಗ ನಿರ್ಮಾಣ

ಬೆಂಗಳೂರು - ಹುಬ್ಬಳ್ಳಿ - ಮೀರಜ್ ಎಕ್ಸ್‌ಪ್ರೆಸ್ ರೈಲನ್ನು ಪುಣೆವರೆಗೆ ವಿಸ್ತರಣೆ

ಹಾಸನ ಜಿಲ್ಲೆ

ಹಾಸನ-ಶ್ರವಣಬೆಳಗೊಳ -ಬೆಂಗಳೂರು ಮಾರ್ಗ

ಕಡೂರು-ಚಿಕ್ಕಮಗಳೂರು ಸಕಲೇಶಪುರ ಮಾರ್ಗ

ಅರಸೀಕೆರೆ - ಹಾಸನ - ಮೈಸೂರು ನಡುವೆ ಪುಷ್‌ಪುಲ್ ರೈಲು

ಹಾಸನ ಅರಸೀಕೆರೆ ಬೆಂಗಳೂರು ನಡುವೆ ರೈಲು

ಗುಲ್ಬರ್ಗ ಜಿಲ್ಲೆ

ಗುಲ್ಬರ್ಗದಲ್ಲಿ ವಿಭಾಗೀಯ ಕಚೇರಿ ಈ ಸಲವೂ ಆರಂಭವಾಗಲಿಲ್ಲ

ಸೊಲ್ಲಾಪುರ-ಬೆಂಗಳೂರು ಗರೀಬ್ ರೈಕ್ಕೆ ಸಿಗದ ಹಸಿರು ನಿಶಾನೆ

ಅಮೃತಸರ-ನಾಂದೇಡ ರೈಲು ಬೀದರ್‌ವರೆಗೆ ವಿಸ್ತರಣೆಯಾಗಲಿಲ್ಲ.

ದಕ್ಷಿಣ ಕನ್ನಡ ಜಿಲ್ಲೆ

ಮಂಗಳೂರನ್ನು ಪ್ರತ್ಯೇಕ ವಿಭಾಗವೆಂದು ಘೋಷಿಸುವ ಬೇಡಿಕೆ ಈಡೇರಿಲ್ಲ

ಕಾರವಾರಕ್ಕೆ ಪ್ರತ್ಯೇಕ ರೈಲು ಓಡಿಸುವ ಸಚಿವರ ಖಚಿತ ಭರವಸೆ ಸುಳ್ಳಾಗಿದೆ.

ಕಣ್ಣೂರಿಗೆ ತಿರುಗಿದ್ದ ರೈಲನ್ನು ಕಾರವಾರಕ್ಕೆ ತಿರುಗಿಸುವ ಬದಲು ವಾರಕ್ಕೆ ಮೂರು ಬಾರಿ ಮಾತ್ರ ಸಂಚರಿಸುವ ಮಂಗಳೂರು-ಯಶವಂತಪುರ ಹಗಲು ರೈಲನ್ನು ಕಾರವಾರಕ್ಕೆ ವಿಸ್ತರಿಸಲಾಗಿದೆ.

ಮೈಸೂರು

ಮೈಸೂರು-ವಿಜಾಪುರ ಇಂಟರ್‌ಸಿಟಿ

ನಂಜನಗೂಡು-ನೀಲಂಬೂರ್ ನಡುವೆ ರೈಲು

ಮಂಡ್ಯ

ಕನಕಪುರ ಮಳವಳ್ಳಿ ಕೊಳ್ಳೇಗಾಲ ಚಾಮರಾಜನಗರ ರೈಲುಮಾರ್ಗ ಯೋಜನೆ ನನೆಗುದಿಗೆ

ಮಂಡ್ಯ ರೈಲು ನಿಲ್ದಾಣದ ಮೇಲ್ದರ್ಜೆಗೇರಿಸುವ ವಿಚಾರ ನನೆಗುದಿಗೆ

ಕೊಡಗು

ಮೈಸೂರಿನಿಂದ ಕುಶಾಲನಗರದವರೆಗೆ ರೈಲ್ವೆ ಸಂಪರ್ಕ ಕಲ್ಪಿಸಬೇಕೆಂಬ ಪ್ರಸ್ತಾವನೆ ಕೂಡ ನನೆಗುದಿಗೆ ಬಿದ್ದಿದೆ.

ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ರೈಲ್ವೆ ನಿಲ್ದಾಣ ಸ್ಥಳಾಂತರ ಅಥವಾ ಹಾಲಿ ನಿಲ್ದಾಣ ಮಾದರಿಯಾಗಿ ಪರಿವರ್ತನೆ

ಚಿಕ್ಕಬಳ್ಳಾಪುರ-ಬೆಂಗಳೂರು ನಡುವೆ ಹೆಚ್ಚಿನ ರೈಲು

ಕೋಲಾರ-ಚಿಂತಾಮಣಿ ಶಿಡ್ಲಘಟ್ಟ ನಡುವೆ ರೈಲು

ಯಲಹಂಕ-ಗೌರಿಬಿದನೂರು ಮಾರ್ಗವಾಗಿ ಗುಂತಕಲ್ಲಿಗೆ ಡಬಲ್ ಟ್ರಾಕ್

ಇದಲ್ಲದೆ, ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಿದ ಈ ಕೆಳಗಿನ ಯೋಜನೆಗಳು ಇನ್ನೂ ಜ್ಯಾರಿಯಾಗಿಲ್ಲ.

1. ಬೆಂಗಳೂರು ನೆಲಮಂಗಲ ಪ್ಯಾಸೆಂಜರ್
2. ಹೊಸಪೇಟೆ ಹರಿಹರ ಪ್ಯಾಸೆಂಜರ್
3. ಗುಂತಕಲ್ ಬಳ್ಳಾರಿ ಹೊಸಪೇಟೆ ವಾಸ್ಕೋ ವಿದ್ಯುತೀಕರಣ
4. ಬಾಗ - ಲಕೋಟೆ ಕುಡಚಿ ರೈಲುಮಾರ್ಗಕ್ಕೆ ಕೇವಲ 4 ಕೋಟಿ ರೂ. ಬಿಡುಗಡೆಯಾಗಿದೆ.

ರೇಷ್ಮೆ ಬೆಳೆಗಾರನಿಗೆ ಕೇಂದ್ರದ ಸುಂಕ ನೀತಿಯ ಉರುಳು

■ ಅಂಗರಾಜು

ರೇಷ್ಮೆಕೃಷಿಯನ್ನೇ ನಂಬಿ ಬದುಕು ಸಾಗಿಸುತ್ತಿದ್ದ ಮಂಡ್ಯ ಜಿಲ್ಲೆ ವಳಗೆರೆ ಹಳ್ಳಿಯ ರೈತದಂಪತಿಗಳು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಸದ್ದಿಲ್ಲದೆ ಮರೆಯಾಗಿದೆ. ಕೇಂದ್ರ ಸರ್ಕಾರ ಸೃಷ್ಟಿಸಿದ ರೇಷ್ಮೆ ಬಿಕ್ಕಟ್ಟಿಗೆ ದುರ್ದೈವಿ ದಂಪತಿಗಳು ಬಲಿಯಾಗಿದ್ದಾರೆ.

ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಅನುಸರಿಸಿದ ಸುಂಕರಹಿತ ರೇಷ್ಮೆ ಆಮದು ನೀತಿ ರೇಷ್ಮೆ ಬೆಳೆಗಾರರನ್ನು ಕಂಗೆಡಿಸಿದೆ. ರೇಷ್ಮೆಕೃಷಿಕರು ದಿಕ್ಕು ತೋಚದಂತಾಗಿದ್ದಾರೆ. ರೇಷ್ಮೆಯನ್ನು ಆಧಾರವಾಗಿಸಿಕೊಂಡವರ ಬದುಕು ಮೂರಾಬಟ್ಟೆಯಾಗಿದೆ.

ರೇಷ್ಮೆ ಕೃಷಿ ಸಾಕಷ್ಟು ಆದಾಯ ತರುವ ಅಲ್ಪಾವಧಿ ಬೇಸಾಯ. ಬಯಲುಸೀಮೆ ಪ್ರಾಂತ್ಯದಲ್ಲಿ ಪ್ರಮುಖ ಕಸುಬು. ಬಹುತೇಕ ಸಣ್ಣ ಹಿಡುವಳಿದಾರರು, ಭೂರಹಿತರು ಮಾಡಬಹುದಾದ ವರ್ಷವಿಡೀ ಉದ್ಯೋಗ ನೀಡಬಹುದಾದ, ಕೈಗಾರಿಕೆ ಎಂದರೆ ತಪ್ಪಾಗಲಾರದು. ಹೀಗಾಗಿ ರೇಷ್ಮೆಕೃಷಿ ಸಾಕಷ್ಟು ಆದಾಯ ತರುವ ಸ್ವಾವಲಂಬಿ, ಸ್ವಾಭಿಮಾನಿ ಉದ್ಯಮವಾಗಿ, 'ಜನಪ್ರಿಯ' ಕೃಷಿಯಾಗಿ ಹೊರಹೊಮ್ಮುವ ಕಾಲಘಟ್ಟದಲ್ಲಿ ಕೇಂದ್ರದ ನೀತಿ ಬರಸಿಡಿಲಿನಂತೆ ಬಂದೆರೆಗಿದೆ.

ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಅಲ್ಪಪ್ರಮಾಣದಲ್ಲಿ ಬಾಗಲಕೋಟೆಯಲ್ಲಿ ರೇಷ್ಮೆ ಕೃಷಿ ರೈತರ ಮೊಗದಲ್ಲಿ ಹರುಷ ತರುವ ಏಕೈಕ ಬೆಳೆಯಾಗಿತ್ತು. ರೇಷ್ಮೆ ಕೃಷಿ ಇತ್ತೀಚಿನ ವರ್ಷಗಳಲ್ಲಿ ವೈಜ್ಞಾನಿಕ ವಿಧಾನಗಳು ಅರಿವಿಗೆ ಬಂದ ಮೇಲೆ ರೇಷ್ಮೆ ಅವಲಂಬಿತರ ಸಂಖ್ಯೆಯೂ ಹೆಚ್ಚಾಗತೊಡಗಿತ್ತು. ಸರ್ಕಾರ ರೇಷ್ಮೆ ಆಮದಿನ ಮೇಲೆ ಆಮದು ಸುಂಕ ಕಡಿತ ಮಾಡಿದ್ದರಿಂದಾಗಿ ಬೆಲೆ ತೀವ್ರ ಕುಸಿತ ಕಂಡಿದೆ. ಸುಂಕರಹಿತವಾಗಿ ಆಮದಾಗುವ ರೇಷ್ಮೆ ಕೆ.ಜಿ.ಗೆ ದೇಶೀಯ ರೇಷ್ಮೆ ಬೆಲೆಗಿಂತ 600 ರಿಂದ 700 ರೂ. ಕಡಿಮೆಯಾಗುವುದರಿಂದ ದೇಶಿ ರೇಷ್ಮೆಗೆ ಬೇಡಿಕೆ ಕಡಿಮೆಯಾಗಿ ಬೆಲೆಯೂ ಕುಸಿದಿದೆ. ಕೆ.ಜಿ. ಗೂಡಿಗೆ ರೂ.250 ರಿಂದ ರೂ.400 ವರೆಗೆ ಬೆಲೆ ದಿಢೀರನೆ ರೂ.100 ರಿಂದ 150 ಕ್ಕೆ ಕುಸಿತ ಕಂಡಿದೆ. ರೇಷ್ಮೆ ಕೃಷಿಯಲ್ಲಿ ತೊಡಗಿರುವ 1.42 ಲಕ್ಷ ಬೆಳೆಗಾರರು ಸೇರಿದಂತೆ ಇತರೆ ರೇಷ್ಮೆ ಅವಲಂಬಿತರು ಸಂಕಷ್ಟಕ್ಕೆ ಒಳಗಾಗಿದ್ದಾರೆ.



ಬಿಕ್ಕಟ್ಟಿನ ಮೂಲ : ಕಚ್ಚಾ ರೇಷ್ಮೆ ಬೆಲೆ ಕುಸಿತದ ಬಿಕ್ಕಟ್ಟಿಗೆ 3 ಪ್ರಧಾನ ಅಂಶಗಳು ಕಾರಣವಾಗಿವೆ.

1. ಶೇ.40 ರಷ್ಟು ರೇಷ್ಮೆ ಸುಂಕರಹಿತ ಆಮದು ಮಾಡಿಕೊಳ್ಳಲಿರುವುದು.
2. ನೇಪಾಳ, ಬಾಂಗ್ಲಾ ದೇಶಗಳಿಂದ ಕಳ್ಳ ದಾಸ್ತಾನು ಬರುತ್ತಿರುವುದು.
3. ಪ್ರಧಾನವಾಗಿ ಶೇ.31 ಇದ್ದ ಆಮದು ಸುಂಕವನ್ನು ಕೇವಲ ಶೇ.5 ಕ್ಕೆ ಇಳಿಸಿರುವುದು.

ಈ ಮೂರು ಪ್ರಧಾನ ಕಾರಣಗಳೇ ಇವತ್ತಿನ ಬಿಕ್ಕಟ್ಟಿಗೆ ಮೂಲ.

ಚೀನದಿಂದ ಸದ್ಯ 7,500 ಮೆಟ್ರಿಕ್ ಟನ್ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಲ್ಲಿ ಸಿದ್ಧ ಮಾಲು ರಫ್ತುದಾರರಿಗೆ (fabric export dealer) ಶೇ.0 ಸುಂಕದಲ್ಲಿ ರೇಷ್ಮೆಯನ್ನು ಒದಗಿಸಲಾಗುತ್ತಿದೆ. ಹೆಚ್ಚಿನ ಬೇಡಿಕೆ ಇರುವ ಕಾರಣ ಒಟ್ಟು ಬೇಡಿಕೆಯ ಉಳಿದ ಸುಮಾರು 7,000 ಮೆಟ್ರಿಕ್ ಟನ್ ರೇಷ್ಮೆಯನ್ನು ಆಮದು ಮಾಡಿಕೊಳ್ಳಲು ರೇಷ್ಮೆ ಉದ್ದಿಮೆದಾರರು ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದಿದ್ದರಿಂದಾಗಿ ಈಗಿರುವ ಕೊರತೆಯನ್ನು ತುಂಬಿಕೊಳ್ಳಲು ಕೇಂದ್ರ ಬಜೆಟ್‌ನಲ್ಲಿ ಅನುಮತಿಸಲಾಗಿದೆ. ಮಾರ್ಚ್ 14 ರಂದು ಜಾಗತಿಕ ಟೆಂಡರ್ ಕರೆಯಲಾಗಿದೆ. ಈ ಹಿನ್ನೆಲೆಯಲ್ಲಿ ದೇಶೀಯ ಕಚ್ಚಾ ರೇಷ್ಮೆ ಬೆಲೆ ಕುಸಿತ ಕಂಡಿದೆ. ನೇಕಾರರಿಗೆ ನಷ್ಟವಾಗುತ್ತಿದೆ ಎಂಬ ಕಾರಣಕ್ಕೆ ಸುಂಕರಹಿತ ಆಮದಿಗೆ ಮುಂದಾಗಲಿದೆ ಎಂಬ ಕಾರಣವನ್ನು ನೀಡಲಾಗುತ್ತಿದೆ. ಆದರೆ ಇದೊಂದು ಕಪೋಲಕಲ್ಪಿತ ಸುಳ್ಳು. ನೇಕಾರರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಎಂಬುದು ಎಷ್ಟು ವಾಸ್ತವವೋ ಸುಂಕರಹಿತ ಆಮದಿನಿಂದ ನೇಕಾರರಿಗೆ ಯಾವುದೇ ಲಾಭವಾಗುವುದಿಲ್ಲ ಎಂಬುದೂ ಕೂಡ ಅಷ್ಟೇ ಸತ್ಯ. ಏಕೆಂದರೆ ನೇಕಾರರು ದುಡಿಮೆಯ ಪ್ರತಿಫಲವನ್ನಷ್ಟೇ ಅವಲಂಬಿಸಿದ್ದಾರೆ. ಒಟ್ಟು ಮಾರುಕಟ್ಟೆಯ ಹಿಡಿತ ಉದ್ದಿಮೆದಾರರ ಕೈಯಲ್ಲಿದೆ. ಹೀಗಾಗಿ ಸುಂಕರಹಿತ ಆಮದಿನಿಂದಾಗಿ ಶೇ.80 ನೇಕಾರರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಉದ್ದಿಮೆದಾರರು ಬರುವ ಲಾಭ (profit) ದಲ್ಲಿ ಹೆಚ್ಚಳ ಮಾಡಿಕೊಳ್ಳುವ ಧಾವಂತದಲ್ಲಿ ದೇಶೀಯ ರೇಷ್ಮೆ ಬೆಳೆಗಾರರ ಕತ್ತು ಹಿಸಕಲು ಹೊರಟ್ಟಿದ್ದಾರೆ.

ಇನ್ನೊಂದೆಡೆ ಚೀನಾದಿಂದ ನೇಪಾಳ ಮತ್ತು ಬಾಂಗ್ಲಾ ದೇಶಗಳಿಗೆ ರಫ್ತಾಗುವ ಕಚ್ಚಾ ರೇಷ್ಮೆ ಕಳ್ಳಬಾಗಿಲುಗಳ ಮೂಲಕ ಭಾರತದ ಮಾರುಕಟ್ಟೆಯನ್ನು ಪ್ರವೇಶಿಸುತ್ತಿವೆ. ಇದರಲ್ಲಿ ಉದ್ದಿಮೆದಾರರ ಕೈವಾಡವಿದೆ ಎನ್ನುವುದು ಸ್ಪಷ್ಟ. ಇದರಿಂದಾಗಿ ಬೇಡಿಕೆಯನ್ನು ಪೂರೈಕೆ ಹೆಚ್ಚಾಗಿ ದೇಶೀಯ ರೇಷ್ಮೆ ಬೆಲೆ ಕುಡಿತ ಕಂಡಿದೆ.


ಮುಂಬರುವ ದಿನಗಳಲ್ಲಿ ತೀವ್ರವಾದ ಬಿಕ್ಕಟ್ಟಿಗೆ ಒಳಗಾಗಲು ಇರುವ ಪ್ರಧಾನ ಅಂಶವೇನೆಂದರೆ ಶೇ.31 ಇದ್ದ ಆಮದು ಸುಂಕವನ್ನು ಕೇವಲ ಶೇ.5 ಕ್ಕೆ ಇಳಿಸಿರುವುದು ರೇಷ್ಮೆ ಬೆಳೆಗಾರರ ಮರಣ ಶಾಸನವಾಗಬಹುದಾದ ತೀರ್ಮಾನವಾಗಿದೆ. ಈ ತೀರ್ಮಾನ ಏಪ್ರಿಲ್ ವೇಳೆಗೆ ಜಾರಿಯಾಗಲಿದ್ದು, ಈ ಬಿಕ್ಕಟ್ಟು ಮತ್ತಷ್ಟು ಗಂಭೀರ ಸ್ವರೂಪ ಪಡೆಯಲಿದೆ. ಆಮದು ಸುಂಕವನ್ನು ಕೇವಲ ಶೇ.5ಕ್ಕೆ ಇಳಿಸುವುದೆಂದರೆ ದೇಶದ ರೇಷ್ಮೆ ಬೆಳೆಗಾರರು ರೇಷ್ಮೆ ಉತ್ಪಾದನೆಯನ್ನೇ ನಿಲ್ಲಿಸುವುದೆಂದರ್ಥ. ಈಗಾಗಲೇ ಬೇಡಿಕೆಗಿಂತ ಪೂರೈಕೆ ಹೆಚ್ಚಳವಾಗಿರುವ ಮಧ್ಯೆ ಸುಂಕದಲ್ಲಿ ರಿಯಾಯಿತಿ ನೀಡಿರುವುದು surplus ಗೆ ಅವಕಾಶ ಮಾಡಿಕೊಡುತ್ತದೆ. ಇನ್ನೊಂದೆಡೆ ಒಟ್ಟು ಅಗತ್ಯವಿರುವ ರೇಷ್ಮೆ ಬಟ್ಟೆ (silk fabric production) 8,295 ಲಕ್ಷ ಸ್ಕೇರ್ ಮೀಟರ್‌ನಲ್ಲಿ 3276 ಲಕ್ಷ ಮೀಟರ್ಸ್ ಬಟ್ಟೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ರೇಷ್ಮೆಕೃಷಿಗೆ ಅಗತ್ಯ ಪ್ರೋತ್ಸಾಹ ನೀಡಿದ್ದಲ್ಲಿ ಉತ್ಪಾದನೆ ಹೆಚ್ಚಿಸಿ ಆಮದನ್ನು ನಿಲ್ಲಿಸಬಹುದಾಗಿದೆ. ಆದರೆ ಕೇಂದ್ರದ ಈ ನೀತಿ ಉತ್ಪಾದನೆ ಮತ್ತು ನೇಕಾರಿಕೆಯನ್ನು ನಿರ್ನಾಮಗೊಳಿಸಿ ಪರಾವಲಂಬಿಯಾಗಿಸಿ ಉದ್ಯಮಿಗಳಿಗೆ ಲಾಭ ಮಾಡಿಕೊಡುವುದೇ ಆಗಿದೆ. ಕಚ್ಚಾ ಪದಾರ್ಥಗಳ ಮೇಲೆ import duty ಕಡಿತಗೊಳಿಸಿ ಸಿದ್ಧ ಪದಾರ್ಥಗಳ ಮುಕ್ತ ಆಮದಿಗೆ ಮುಂದಾಗುವುದು ಯಾವ ರೀತಿ ಅಭಿವೃದ್ಧಿ ಅರ್ಥ ವ್ಯವಸ್ಥೆಯಾಗುತ್ತದೆ ಎಂಬುದನ್ನು ವಿತ್ತ ಪಂಡಿತರೇ ವಿಶ್ಲೇಷಿಸಬೇಕಿದೆ. ಸಿದ್ಧ ಬಟ್ಟೆಯನ್ನು ಆಮದು ಮಾಡಿಕೊಳ್ಳುವುದರಿಂದ ಲಕ್ಷಾಂತರ ನೇಕಾರಿಕೆ ಕುಟುಂಬಗಳ ಭವಿಷ್ಯ ಭಯಾನಕವಾಗುವುದಲರಲ್ಲಿ ಸಂಶಯವಿಲ್ಲವೆಂದೇ ಹೇಳಲಾಗುತ್ತಿದೆ. ಲಾಭದಾಯಕವಲ್ಲದ ಕೃಷಿಯ ಬಗೆಗಿನ ಅಸಡ್ಡೆ ಹೆಚ್ಚುತ್ತಿರುವ ಮಧ್ಯೆ ಸರ್ಕಾರದ ಈ ನೀತಿಗಳು ಇನ್ನಷ್ಟು ವಿಮುಖತನಕ್ಕೆ ಎಡೆ ಮಾಡಿಕೊಡುತ್ತದೆ. ಅಂಕಿ ಅಂಶಗಳ ಪ್ರಕಾರ 1999 ಮತ್ತು 2000 ರಲ್ಲಿ ದೇಶದ 1.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯು ಬೆಳೆಯಲಾಗುತ್ತಿದ್ದು ಹಿಪ್ಪೆ ನೇರಳೆ ನಿಧಾನವಾಗಿ ಕುಸಿಯತೊಡಗಿದೆ. ಸರ್ಕಾರಗಳ ನಿರ್ಲಕ್ಷ್ಯ, ಅಗತ್ಯ ಪ್ರೋತ್ಸಾಹವಿಲ್ಲದ ಕಾರಣ ಮುಂದೊಂದು ದಿನ ಆಮದನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ ಬಂದೊದಗಿದರೆ ಆಶ್ಚರ್ಯವಿಲ್ಲ.

ಸೂರತ್, ವಾರಣಾಸಿ, ಕೋಯಮತ್ತೂರು, ಬೆಂಗಳೂರು ನಗರಗಳಲ್ಲಿರುವ ಬೆರಳೆಣಿಕೆಯ ಉದ್ದಿಮೆದಾರರು ಮತ್ತು ವ್ಯಾಪಾರಸ್ಥರ ಲಾಬಿಗೆ ಒಳಗಾಗಿರುವ ಕೇಂದ್ರ ಸರ್ಕಾರ ರೇಷ್ಮೆ ಕೃಷಿಕರು ನೇಕಾರರಿಗೆ ಕುಣಿಕೆ ಬಿಗಿಯಲು ಹೊರಟಿರುವ ಅದರ 'ಆಮ್ ಆದ್ಮಿ'ಯ ಪೊಳ್ಳುತನವನ್ನು ತೋರಿಸುತ್ತದೆ.

ರೇಷ್ಮೆ ಉದ್ಯಮ ಉಳಿಸುವ ಮಾರ್ಗಗಳೇನು?

ಸುಂಕರಹಿತ ಆಮದು ನೀತಿಯನ್ನು ಕೂಡಲೇ ಕೈಬಿಡಬೇಕು. ದೇಶೀಯ ಉತ್ಪಾದನೆಗೆ ಅವಕಾಶ ಕಲ್ಪಿಸಿ ಉತ್ಪಾದನೆ ಸಾಮರ್ಥ್ಯವನ್ನು ಹೆಚ್ಚಿಸಿ ಸ್ವಾವಲಂಬನೆ ಸಾಧಿಸಬೇಕು. ರೇಷ್ಮೆ ಬೆಳೆಗಾರರಿಗೆ ಬೆಂಬಲ ಬೆಲೆ ಘೋಷಿಸಿ ರೇಷ್ಮೆ ಕೃಷಿಗೆ ಪ್ರೋತ್ಸಾಹ ನೀಡಬೇಕು. ಇದರಿಂದ ಉದ್ಯೋಗ ಸೃಷ್ಟಿಯಾಗುವುದಲ್ಲದೆ ಯುವಜನರು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬರುವುದನ್ನು ತಪ್ಪಿಸಬಹುದಾಗಿದೆ. ಹವಾಮಾನ ದೃಷ್ಟಿಯಿಂದ ರೇಷ್ಮೆಕೃಷಿಗೆ ಅನುಕೂಲಕರ ಪರಿಸ್ಥಿತಿ ಇರುವ ರೇಷ್ಮೆಕೃಷಿಯನ್ನು ಇತರೆ ಪ್ರದೇಶಗಳಿಗೆ ವಿಸ್ತರಿಸುವ ಕೆಲಸ ಆಗಬೇಕು.

ಸಿದ್ಧ ರೇಷ್ಮೆ ಬಟ್ಟೆಯ ಆಮದಿನ ಮೇಲೆ ಸಂಪೂರ್ಣ ನಿಷೇಧ ಹೇರಬೇಕು. ಇದರಿಂದ ಲಕ್ಷಾಂತರ ನೇಕಾರರ ಬದುಕನ್ನು ಉಳಿಸಲು ಸಾಧ್ಯವಾಗುತ್ತದೆ. ಕಚ್ಚಾ ರೇಷ್ಮೆ ಆಮದಿಗೆ ನಿಗದಿ ಮಾಡಲಾದ ಶೇ.31 ಸುಂಕವನ್ನು ಮುಂದುವರಿಸಬೇಕು. ಇದರಿಂದ ವಾರ್ಷಿಕ 3200 ಕೋಟಿ ರೂ.ಗಳ ವಿದೇಶಿ ವಿನಿಮಯವನ್ನು ಉಳಿಸುವುದಲ್ಲದೇ ಮತ್ತು ಬೆಲೆ ಸ್ಥಿರತೆಯನ್ನು ಕಾಪಾಡಿಕೊಳ್ಳಬಹುದಾಗಿದೆ. ರಾಜ್ಯ ಸರ್ಕಾರ ತನಗೆ ಸಂಬಂಧಿಸಿಲ್ಲ ಎಂಬ ಧೋರಣೆಯಿಂದ ಹೊರಬಂದು ರಾಜ್ಯದ ರೇಷ್ಮೆ ಕೃಷಿಕರ ಹಿತ ಕಾಪಾಡಲು ಕೇಂದ್ರದ ಮೇಲೆ ಒತ್ತಡ ಹೇರಬೇಕು ಮತ್ತು ರೇಷ್ಮೆ ಕೃಷಿಗೆ ಸಹಾಯಧನ ನೀಡಲು ಮುಂದಾಗಬೇಕು. ಇಲ್ಲದಿದ್ದಲ್ಲಿ ದೇಶದ ರೇಷ್ಮೆ ಉತ್ಪಾದನೆಯಲ್ಲಿ ಮುಕ್ಕಾಲು ಪಾಲು ಉತ್ಪಾದನೆಯಾಗುತ್ತಿರುವ ರೇಷ್ಮೆ ರಾಜ್ಯದಿಂದ ಕಣ್ಮರೆಯಾಗುವುದನ್ನು ತಪ್ಪಿಸಲು ಮುಂದಾಗಬೇಕಿದೆ.



ಚುನಾವಣಾ ಸುಧಾರಣಾ ಕೋರ್ ಕಮಿಟಿ


ಪುಟ 5 ರಿಂದ

ಬಲಪಡಿಸುವುದು ಎಂಬ ವಿಚಾರವು ಸರಿಯಾದ ಕ್ರಮವಲ್ಲ, ಏಕೆಂದರೆ ಅದು ಚುನಾವಣಾ ಆಯೋಗದ ಕಾರ್ಯನಿರ್ವಾಹಣ ಕುರಿತು ಚರ್ಚಿಸುವ ಸಂಸತ್ತಿನ ಅಧಿಕಾರವನ್ನು ಮೊಟಕುಗೊಳಿಸುತ್ತದೆ. ಚುನಾವಣಾ ಕೆಲಸಕ್ಕೆ ನಿಯೋಜಿಸಲಾಗುವ ಅಧಿಕಾರಿಗಳ ವರ್ಗಾವಣೆ ಮೇಲೆ 3 ತಿಂಗಳ ನಿರ್ಬಂಧ ಒಪ್ಪಬಹುದು.

ಅಲಂಕಾರಿಕ ಚಿಕಿತ್ಸೆ ಪರಿಹಾರವಲ್ಲ :

ಚುನಾವಣಾ ಸುಧಾರಣೆಗಾಗಿ ಇಂತಹ ಸಮಾಲೋಚನ ಸಭೆ ನಡೆಸುವುದು, ಅಲ್ಪಸ್ವಲ್ಪವಾದರೂ ತಿದ್ದುಪಡಿಗಳನ್ನು ತರುವುದು ಸ್ವಾಗತಾರ್ಹ ಮತ್ತು ಅಗತ್ಯ ಕೂಡ. ಆದರೆ ಕರಡು ಪ್ರಾಸ್ತವಿಕ ಹಿನ್ನಲೆ ಪತ್ರದಲ್ಲಿನ ಅಂಶಗಳು ಕೇವಲ ಕಾಯಿಲೆಯ ಲಕ್ಷಣಗಳನ್ನು ಮಾತ್ರ ಗುರುತಿಸಿ ಅಲಂಕಾರಿಕ ಚಿಕಿತ್ಸೆ ನೀಡುವ ಪ್ರಯತ್ನವಾಗಿದೆ. ಆದರೆ ರೋಗದ ಮೂಲವನ್ನು ಪರಿವೀಕ್ಷಿಸಿ ಅದಕ್ಕೆ ಮದ್ದುಕೊಡುವ ಪ್ರಯತ್ನ ಅದರಲ್ಲಿ ಕಾಣದಾಗಿದೆ. ರಾಜಕೀಯ ಪಕ್ಷಗಳು ಲೋಕಸಭೆ ಮತ್ತು ವಿಧಾನ ಸಭೆಯು ಚುನಾವಣೆಗಳಲ್ಲಿ ಆಯಾಯು ಪಕ್ಷಗಳು ಮುಂಚಿತವಾಗಿ ಬಿಡುಗಡೆ ಮಾಡುವ ಪಟ್ಟಿಯ ಆಂಶಿಕ ಅಭ್ಯರ್ಥಿಗಳಿಗೆ ಪಡೆದ ಶೇಕಡವಾರು ಮತಗಳ ಅನುಸಾರ ಸ್ಥಾನ ನೀಡುವ 'ಆಂಶಿಕ ಪಟ್ಟಿಯೊಂದಿಗೆ ಪ್ರಮಾಣಾತ್ಮಕ ಪ್ರಾತಿನಿಧ್ಯ' (Proportional Representation Wit? Partial listings) ದಂತಹ ನೈಜ ವೈಜ್ಞಾನಿಕ ಪರಿಹಾರ ಕುರಿತು ಕೋರ್‌ಕಮಿಟಿ ಚಕಾರ ಎತ್ತಿಲ್ಲ. ಅಂತೆಯೇ ತಮ್ಮ ಪ್ರತಿನಿಧಿಗಳನ್ನು 'ವಾಪಸ್ಸು ಕರೆಸಿಕೊಳ್ಳುವ' (Right to Recall) ನಂತಹ ದೂರಗಾಮಿ ಪರಿಣಾಮ ಬೀರಬಲ್ಲಂತಹ ವೈಜ್ಞಾನಿಕ ಪರಿಹಾರದ ಬಗ್ಗೆ ಮೌನವಾಗಿದೆ. ರಾಜಕಾರಣದಿಂದ ಕೋಮುವಾದವನ್ನು ಬೇರ್ಪಡಿಸುವ ಕುರಿತು ಸಹಾ ಏನು ಹೇಳದೆ ಚಾರಿತ್ರಿಕ ಅಗತ್ಯವನ್ನು ನಿರ್ಲಕ್ಷಿಸಿದೆ.

ಒಟ್ಟಾರೆ ಹಾವನ್ನು ಬಿಟ್ಟು ಪೊದೆ ಬಡಿಯುವ; ತಿರುಳ ಬಿಟ್ಟು ಕೊರಟೆ ಸುತ್ತ ಗಿರಕಿ ಹೊಡೆಯುತ್ತಾ, ಆಳುವ ವರ್ಗಗಳ ಬಗ್ಗೆ ಅತೃಪ್ತಿ ಹೆಚ್ಚುತ್ತಿರುವ ವಾಸ್ತವತೆಯನ್ನು ಮರೆಮಾಚುವ ಯತ್ನದಲ್ಲಿ ಚುನಾವಣಾ ಸುಧಾರಣಾ ಕೋರ್ ಕಮಿಟಿ ನಿರತವಾಗಿದೆ.



ಬಂಡವಾಳಶಾಹಿ ಪಕ್ಷಗಳು ನಡೆಸುವ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಟಿ.ವಿ. ಜಾಹಿರಾತುಗಳನ್ನು ನಿಷೇಧಿಸಬೇಕಾದ ಅಗತ್ಯವಿದೆ. ಆದರೆ ದುಡಿಯುವ ಜನರ ಪಕ್ಷಗಳ ಆಶ್ರಯಿಸಿರುವ ಇಂತಹ ಗೋಡೆಬರಹಗಳನ್ನು ನಿಷೇಧಿಸುವುದು ತರಹಬೇ

ಬೆಂಗಳೂರು ಸಮಾಲೋಚನ ಸಭೆ :

ಬೆಂಗಳೂರು ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಪುದುಚೆರಿ, ಆಂಧ್ರಪ್ರದೇಶ ಸರ್ಕಾರಗಳ ಸಚಿವರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಕೇರಳ ಸರ್ಕಾರದ ಪ್ರತಿನಿಧಿಗಳಿರಲಿಲ್ಲ, ಬಹುಷ ಆಹ್ವಾನಿಸಿರಲಿಕ್ಕಿಲ್ಲ. ಕೇಂದ್ರ ಕಾನೂನು ಸಚಿವರು ರಾಜ್ಯದವರೇ ಆದ ಡಾ॥ವೀರಪ್ಪ ಮೋಯ್ಲಿ, ರಾಜ್ಯ ಕಾನೂನು ಸಚಿವರಾದ ಸುರೇಶ್‌ಕುಮಾರ್ ಭಾಗವಹಿಸಿದ್ದರು. ಮುಖ್ಯ ಚುನಾವಣಾ ಆಯುಕ್ತರಾದ ಡಾ॥ಎಸ್.ವೈ.ಖುರೇಶಿ, ಕೇಂದ್ರ ಅಲ್ಪಸಂಖ್ಯಾತ ಸಚಿವರಾದ ಸಲ್ಮಾನ್ ಖುರ್ಶಿದ್, ರಾಜ್ಯಪಾಲರಾದ ಹೆಚ್.ಆರ್.ಬಾರಧ್ವಾಜ್ ಪ್ರಮುಖವಾಗಿ ಭಾಗವಹಿಸಿದ್ದರು. ಕೋರ್ ಕಮಿಟಿ ಅಧ್ಯಕ್ಷರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆದ ವಿವೇಕ್.ಕೆ.ತಂಖಾ, ಅದರ ಸದಸ್ಯರಾದ ಮತ್ತೋರ್ವ ಹೆಚ್ಚುವರಿ ಸಾಲಿಸಿಟರ್ ಜನರಲ್ ಆದ ಮೋಹನ್ ಪರಾಸರನ್ ಮುಂತಾದವರು ಭಾಗವಹಿಸಿದ್ದರು.

ರಾಜ್ಯದ ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸಿದ್ದರು. ಕಾಂಗ್ರೆಸ್, ಜಿಜೆಪಿ, ಬಿಎಸ್‌ಪಿ, ಸಿಪಿಐ(ಎಂ), ಸಿಪಿಐ, ಮತ್ತು ಜೆಡಿ(ಎಸ್) ನ ಕೆಲವು ಪ್ರತಿನಿಧಿಗಳು ಭಾಗವಹಿಸಿದ್ದರು. ಆಸಕ್ತ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಕಾನೂನು ಕಾಲೇಜುಗಳ ಮುಖ್ಯಸ್ಥರು, ವಕೀಲ ಮಿತ್ರರು ಭಾಗವಹಿಸಿದ್ದರು. ಪ್ರೋ॥ರವಿ ವರ್ಮ ಕುಮಾರ್‌ರಂತಹ ಪ್ರಮುಖರು ಸಹಾ ಭಾಗವಹಿಸಿದ್ದರು. ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಿಗೆ ತರುವಂತೆ ಶಿಕ್ಷಣ ಇಲಾಖೆಯಿಂದ ಬಲವಂತಕ್ಕೆ ಹಲವಾರು ಶಿಕ್ಷಕಿಯರನ್ನು ನಿಯೋಜಿಸಿ ಸಭಾಂಗಣ ತುಂಬಿಸಲು ಕರೆತಂದಂತಿತ್ತು. ಉದ್ಘಾಟನಾ ಸಮಾರಂಭದಲ್ಲಿ ಚುನಾವಣಾ ಸುಧಾರಣೆಗಳ ಕುರಿತು ಮಾತನಾಡಿದವರು ಅವರವರ ಚಿಂತನೆಗಳನ್ನು ಹರಿಬಿಟ್ಟರು. ಅಂತೆಯೇ ಎಲ್ಲರಿಗೂ ತಿಳಿದಿರುವ ಅಕ್ರಮಗಳು, ಮತದಾನದಲ್ಲಿ ನಿರಾಸಕ್ತಿ, ಠೇವಣಿ ಇಲ್ಲದಿದ್ದರು ಗೆಲುವು ಸಾಧಿಸಿರುವ ಉದಾಹರಣೆಗಳು, ಜಾತಿ, ಹಣ, ಧರ್ಮದ, ಭಾಷೆ ಮುಂತಾದ ಅಂಶಗಳ ಪ್ರಭಾವ, ಅಪರಾಧಿಗಳ ಭಾಗವಹಿಸುವಿಕೆ, ಮತದಾರ ಪಟ್ಟಿ ಲೋಪಗಳು ದೋಷಗಳನ್ನು ಒಂದೊಂದಾಗಿ ಬಿಡಿಸಿಟ್ಟರು. ಅವರವರ ಆಶಯಗಳನ್ನು ವ್ಯಕ್ತಪಡಿಸಿದರು.

ಆನಂತರ ನಡೆದ ವಿಚಾರ ಗೋಷ್ಠಿಯಲ್ಲಿ ಭಾರತದ ನ್ಯಾಯ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಪಿ.ವಿ.ರೆಡ್ಡಿ, ಕಾನೂನು ತಜ್ಞರಾದ ಡಾ॥ಮಾಧವಮೆನನ್, ಇತಿಹಾಸಕಾರರು ಮತ್ತು ಅಂಕಣಕಾರರಾದ ರಾಮಚಂದ್ರ ಗುಹಾ ವಿಚಾರಗಳನ್ನು ಮಂಡಿಸಿದರು.

ಆನಂತರ 4 ಸಮಾನಾಂತರ ಗೋಷ್ಠಿಗಳನ್ನು ನಡೆಸಿ, ಅವುಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಸಮಾರೋಪದಲ್ಲಿ ಕ್ರೋಢೀಕರಿಸಲು ಯತ್ನಿಸಲಾಯಿತು. ಆದರು ಸಹಾ ಕ್ರೋಢೀಕರಣ ಸಮಗ್ರವಾಗಿರದೆ ಅವರವರಿಗೆ ಬೇಕಾದಂತೆ ಸಂಬಂಧಿತರು ಅದನ್ನು ಮಂಡಿಸಿದರು.

ಸಮಾನಾಂತರ ಗೋಷ್ಠಿಗಳಲ್ಲಿ ರಾಜಕಾರಣದ ಅಪರಾಧಿಕರಣ ಮತ್ತು ಹಣದ ಪ್ರಭಾವ; ಮತದಾರರ ಅರಿವು ಮತ್ತು ಮಾಧ್ಯಮದ ಪಾತ್ರ; ಚುನಾವಣೆಗಳ ನಡೆಸುವುದು ಮತ್ತು ಉತ್ತಮ ನಿರ್ವಹಣೆ; ಮತ್ತು ಚುನಾವಣೆಗಳಲ್ಲಿ ತಂತ್ರಜ್ಞಾನ ವಿಷಯಗಳ ಕುರಿತು 4 ಪ್ರತ್ಯೇಕ ಚರ್ಚೆ, ವಿಚಾರ ವಿನಿಮಯ ನಡೆಯಿತು. ಈ ಎಲ್ಲಾ ಸಮಾನಾಂತರ ಗೋಷ್ಠಿಗಳಿಗೂ ಪ್ರಧಾನವಾಗಿ ಕಾಂಗ್ರೆಸ್, ಅಲ್ಲಲ್ಲಿ ಬಿಜೆಪಿ ಪ್ರತಿನಿಧಿಗಳ ಹೆಸರುಗಳನ್ನು ಕಾರ್ಯಕ್ರಮ ಪಟ್ಟಿಯಲ್ಲೆ ಸೇರಿಸಿ ನೀಡಲಾಗಿತ್ತು. ಕಾಂ॥ಕೆ.ಪ್ರಕಾಶ್, ಕಾಂ॥ಕೆ.ಎನ್.ಉಮೇಶ್, ಕಾಂ॥ಚಂದ್ರು ತೇಜಸ್ವಿ, ಕಾಂ॥ಗೌರಮ್ಮ, ಕಾಂ॥ವೆಂಕಟಾಚಲಯ್ಯ, ಕಾಂ॥ಗೋಪಾಲಕೃಷ್ಣ ಅರಳಳ್ಳಿ, ಕಾಂ॥ಟಿ.ನಾರಾರಣಸ್ವಾಮಿ, ಕಾಂ॥ಲೀಲಾವತಿ, ಕಾಂ॥ಹನುಮಂತರಾವ್ ಹವಾಲ್ದಾರ್ ಸಿಪಿಐ(ಎಂ) ಅನ್ನು ಪ್ರತಿನಿಧಿಸಿ ಭಾಗವಹಿಸಿದ್ದರು. ಎಲ್ಲಾ ಸಮಾನಾಂತರ ಗೋಷ್ಠಿಗಳಲ್ಲೂ ತಲಾ ಇಬ್ಬರಂತೆ ಭಾಗವಹಿಸಿದ್ದ ಸಿಪಿಐ(ಎಂ) ಪ್ರತಿನಿಧಿಗಳು ಪಕ್ಷದ ನಿಲುಮೆಯನ್ನು ಮೇಲಿನಂತೆ ಕೇಂದ್ರ ಸಮಿತಿಯ ಮಾರ್ಗದರ್ಶಿ ಸೂತ್ರಗಳ ಆಧಾರದಲ್ಲಿ ರಾಜ್ಯ ಸಮಿತಿಯ ಅನುಭವಗಳನ್ನು ಪ್ರತಿಪಾದಿಸಿದರು.

○

ಮಮತ 'ರೈಲು' ಬಜೆಟ್

ಪುಟ 8 ರಿಂದ

ಹುದ್ದೆಗಳು ಖಾಲಿ ಇವೆ ಎಂಬುದನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ. ಯಾಕೆ ಭರ್ತಿ ಮಾಡಿಲ್ಲ ಎಂಬುದರ ಬಗ್ಗೆ ವಿವರಣೆ ನೀಡದ ಮಮತಾ ಬ್ಯಾನರ್ಜಿಯವರು ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದ್ದಾರೆ. ಈಗಾಗಲೇ ರೈಲ್ವೆಯಲ್ಲಿ ಉದ್ಯೋಗ ಕೊಡಿಸುವುದಾಗಿ ವಂಚಿಸಿದ ತೃಣಮೂಲ ಕಾಂಗ್ರೆಸ್‌ನ ಜಾಲ ಪಶ್ಚಿಮ ಬಂಗಾಳದಲ್ಲಿ ಬೆಳಕಿಗೆ ಬಂದಿದೆ. ತೃಣಮೂಲ ಕಾಂಗ್ರೆಸ್ಸಿನ ಮುಖಂಡರಿಗೆ ಹಣ ನೀಡಿ ಕೆಲಸ ದೊರಕದ ಯುವಕನೋರ್ವ ಮಮತಾ ಬ್ಯಾನರ್ಜಿಯವರ ಮನೆಯ ಮುಂದೆ ಆತ್ಮಹತ್ಯೆಗೆ ಪ್ರಯತ್ನಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ 1.75 ಲಕ್ಷ ಹುದ್ದೆಗಳ ಭರ್ತಿ ಹೇಗೆ ಕಾರ್ಯಸಾಧು ಎಂಬುದನ್ನು ಗಮನಿಸಬೇಕಾಗಿದೆ. ಏಕೆಂದರೆ ಮಮತಾ ಬ್ಯಾನರ್ಜಿಯವರ ಆಡಳಿತದ ಅವಧಿಯಲ್ಲಿಯೇ ಅಂದರೆ ಮಾರ್ಚ್ 2009 ರಿಂದ ಮಾರ್ಚ್ 2010 ರ ನಡುವೆ 24,600 ರಷ್ಟು ನೌಕರರ ಸಂಖ್ಯೆ ಕಡಿಮೆಯಾಗಿದೆ ಎಂದು 2009-10 ರೈಲ್ವೆ ವಾರ್ಷಿಕ ವರದಿ ಹೇಳುತ್ತಿದೆ.



ರೈಲ್ವೆ ಸುರಕ್ಷತೆ ಬಗ್ಗೆ ಕಾಳಜಿ ಇಲ್ಲ :

ಕಳೆದ 1 ವರ್ಷದ ಅವಧಿಯಲ್ಲಿ ರೈಲ್ವೆ ಸುರಕ್ಷತೆ ಕೊರತೆಯಿಂದಾಗಿ ರೈಲ್ವೆ ಅಫಘಾತದಲ್ಲಿ 216 ಅಮಾಯಕ ಜೀವಗಳು ನಷ್ಟವಾಗಿವೆ. ಅಷ್ಟಾದರೂ ಈ ಸಾರಿ ಬಜೆಟ್‌ನಲ್ಲಿ ಅವರ ಬಗ್ಗೆ ಗಮನ ನೀಡಿಲ್ಲ. 2009ರ ಬಜೆಟ್‌ನಲ್ಲಿ 3 ರೈಲ್ವೆ ವಲಯಗಳಲ್ಲಿ ಅಪಘಾತ ತಡೆ ಉಪಕರಣವನ್ನು ಅಳವಡಿಸಲಾಗುವುದು ಎಂದು ಭರವಸೆ ನೀಡಿದ್ದರೂ ಇದುವರೆಗೆ ಜಾರಿಯಾಗಿಲ್ಲ.

ಒಟ್ಟಾರೆಯಾಗಿ ರೈಲ್ವೆ ಬಜೆಟ್ ಎಂಬುದು ದಿಕ್ಕುದೆಸೆ ಇಲ್ಲದ, ಅಬ್ಬರದ ಪ್ರಚಾರ ಗಳಿಸುವ ಬಜೆಟ್ ಆಗಿದೆ. ಇದೂ ಕೂಡ ಹೊಂದಾಣಿಕೆ ರಾಜಕೀಯದ ಫಲಿತಾಂಶವೇ? ಎಂದು ಪ್ರಧಾನ ಮಂತ್ರಿಯವರು ಉತ್ತರಿಸಬೇಕಾಗಿದೆ.

○

‘ಕೃಷ್ಣ ಪ್ರಜ್ಞೆ’ಯನ್ನು ಹರಡುವೆವು ಎನ್ನುವ ಇಸ್ಕಾನ್ ಸಂಸ್ಥೆಯ ‘ವ್ಯವಹಾರಿಕ ಪ್ರಜ್ಞೆ’ ಲಾಭಕೋರತನಗಳು ನಮ್ಮ ನಾಡಿನ ಜನರಿಗೆ ಗೊತ್ತಿಲ್ಲದೇನು ಅಲ್ಲ. ಆದರೆ ಈ ಸಂಸ್ಥೆಯ ವಂಚನೆ, ಹಗರಣಗಳ ಬಗೆಗೆ ರಚನೆಯಾಗಿದ್ದ ಜಂಟಿ ಸದನ ಸಮಿತಿಯ ಅಂತಿಮ ವರದಿ ಕೊಳಕು ಮುಚ್ಚಿ ತಿಪ್ಪೆ ಸಾರಿಸುವ ಕ್ರಮದಂತಿದೆ.

ಇಸ್ಕಾನ್ ಭ್ರಷ್ಟಾಚಾರ ಜಂಟಿ ಸದನ ಸಮಿತಿ ವರದಿಯಲ್ಲಿ ನ್ಯಾಯವೆಷ್ಟು ?

■ ಎಸ್.ವರಲಕ್ಷ್ಮಿ

ಇಸ್ಕಾನ್ ಭ್ರಷ್ಟಾಚಾರಕ್ಕೆ ಸಂಬಂಧಿಸಿ ಜಂಟೀ ಸದನ ಸಮಿತಿಯ ತೀರ್ಮಾನ ನ್ಯಾಯಯುತವಾಗಿದೆಯೇ?

ಖಂಡಿತವಾಗಿಯೂ ಇಲ್ಲ! ಜಂಟೀ ಸದನ ಸಮಿತಿಯ ವರದಿಯನ್ನು ಓದಿದರೆ ಸಾಕು. ಬಹುಶ: ದೊಡ್ಡ ತರ್ಕ ಮತ್ತು ಚರ್ಚೆಗಳ ಅವಶ್ಯಕತೆಯೇ ಇಲ್ಲ, ಹಾಗಿದೆ ವರದಿ.

ವರದಿಯ ಶಿಫಾರಸ್ಸುಗಳೇನು?

“... ಈ ಸಮಿತಿ ನಿರ್ದಿಷ್ಟ ಉದ್ದೇಶದಿಂದ ರಚನೆ ಆಗೋದ್ರಿಂದ ಇಸ್ಕಾನ್ ಸಂಸ್ಥೆಯ ಜಮೀನಿನ ವಿಚಾರ ಉಚ್ಛ ನ್ಯಾಯಾಲಯದಲ್ಲಿರೋದ್ರಿಂದ ಈಗೇನು ಮಾಡಲು ಆಗುವುದಿಲ್ಲ. ನ್ಯಾಯಾಲಯದಲ್ಲಿ ಅಕ್ರಮ ಎಂದು ಸಾಬೀತು ಆದರೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು......”

ರಾಜ್ಯದಲ್ಲಿ ಹಲವಾರು ಖಾಸಗಿ ಸಂಘ ಸಂಸ್ಥೆಗಳು ಅಸ್ತಿತ್ವದಲ್ಲಿದ್ದು, ಆಗಿಂದಾಗ್ಗೆ ಅವುಗಳ ಕಾರ್ಯವೈಖರಿ, ಹಣ ಸಂಗ್ರಹ ಹಾಗೂ ಹಣ ಬಳಕೆ ಮಾಡುತ್ತಿರುವ ಕುರಿತು ಪರಿಶೀಲಿಸಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಅಕ್ಷರದಾಸೋಹ ಕಾರ್ಯಕ್ರಮವನ್ನು ನಡೆಸುತ್ತಿರುವ ಖಾಸಗಿ ಸಂಘ ಸಂಸ್ಥೆಗಳು ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ಸಹಭಾಗಿತ್ವದಲ್ಲಿ ಅಕ್ಷರದಾಸೋಹ ಕಾರ್ಯಕ್ರಮ ನಡೆಸಲಾಗುತ್ತದೆ ಎಂಬ ಜಾಹೀರಾತನ್ನು ಪ್ರಚಾರದ ಮೂಲಕ ಕಡ್ಡಾಯವಾಗಿ ಉಲ್ಲೇಖ ಮಾಡಬೇಕು ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ಸಂಸ್ಥೆಗಳಲ್ಲಿ ಸದಸ್ಯರನ್ನಾಗಿ ಕಡ್ಡಾಯವಾಗಿ ಸೇರಿಸಿಕೊಳ್ಳಬೇಕೆಂದೂ ಶಿಫಾರಸ್ಸು ಮಾಡಿದೆ.

‘ಇಸ್ಕಾನ್ ಸಂಸ್ಥೆ ಬಿಸಿಯೂಟ ಕೊಡಲು ದೇಣಿಗೆ ಸಂಗ್ರಹ ಮಾಡೋದು ತಪ್ಪಲ್ಲ ಹಾಗೂ ಆ ಹಣ ದುರ್ಬಳಕೆ ಆಗಿಲ್ಲವೆಂದು ವರದಿ ನೀಡಲಾಗಿದೆ. ಈ ದೇಣಿಗೆಯನ್ನು ಭಾರತದ ನಿರ್ವಸಿತ ಮಕ್ಕಳು ಒಂದು ಹೊತ್ತಿನ ಊಟಕ್ಕೂ ಅಂಗಲಾಚುತ್ತಾರೆ ಎಂಬ ಚಿತ್ರಗಳನ್ನು ತೋರಿಸಿ, ಮಕ್ಕಳು ಅಳುತ್ತಿರುವ ಚಿತ್ರಗಳನ್ನು ಬೇರೆ ದೇಶಗಳಲ್ಲಿ ಪ್ರದರ್ಶಿಸಿ ಒಂದು ಮಗುವಿಗೆ 6 ರೂ.ನಂತೆ ಸಂಗ್ರಹಿಸುತ್ತಿದ್ದಾರೆ.

ರಾಜ್ಯದಲ್ಲೀಗ 1 ರಿಂದ 10ನೇ ತರಗತಿಯ

ಈಗ ಸರ್ಕಾರ ಕೊಡುತ್ತಿರುವುದು

ತರಗತಿ	ಅಕ್ಕಿ	ಅಡುಗೆ ತಯಾರಿಕೆ ವೆಚ್ಚ	ಸಾಗಾಣಿಕಾ ವೆಚ್ಚ ಪ್ರತಿ ಕ್ವಿಂಟಾಲ್
1 ರಿಂದ 5	100 ಗ್ರಾಂ	1.80 ಪೈ	75 ರೂ.
6 ರಿಂದ 7	150 ಗ್ರಾಂ	1.80 ಪೈ	
8 ರಿಂದ 10	150 ಗ್ರಾಂ	2.20 ಪೈ	

ಸರ್ಕಾರಿ ಶಾಲೆಗಳು 49,539

ಅನುದಾನಿತ ಶಾಲೆಗಳು 5254 ಸೇರಿ ಒಟ್ಟು 54,793 ಶಾಲೆಗಳಲ್ಲಿ 37,890.28 ಲಕ್ಷ ರೂ.ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಖರ್ಚು ಮಾಡುತ್ತಿದೆ.

ವರ್ಷ	ದಾಖಲಾತಿ	ಹಾಜರಾತಿ	ಬಿಸಿಯೂಟ ಫಲಾನುಭವಿಗಳು
2004-05	93,61,607	60,83,173	6,003,980
2008-09	76,52,527	73,11,823	69,25,932

ಮೇಲ್ಕಂಡ ಕೋಷ್ಟಕವನ್ನು ನೋಡಿದರೆ 2004-05 ರಲ್ಲಿ 60,83,173 ಹಾಜರಾತಿ ಇದ್ದದ್ದು 73,11,823ಕ್ಕೇರಿದೆ. ಅಂದರೆ 12,28,650 ಇಷ್ಟು

ಒಳ್ಳೆಯ ಹಾಜರಾತಿ ಬರಲು ಮುಖ್ಯ ಪ್ರಬಲವಾದ ಅಂಶಗಳಲ್ಲಿ ಬಿಸಿಯೂಟವು ಒಂದು. ಇಂತಹ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಸಂಘ ಸಂಸ್ಥೆ ದೇಣಿಗೆ ಸಂಗ್ರಹಿಸಬಾರದು ಎಂದಿದೆ.

ಜಂಟಿ ಸದನ ಸಮಿತಿಯ ಉದ್ದೇಶ ಏನಿತ್ತು?

1) ಅಕ್ಷಯ ಪಾತ್ರೆ (ಇಸ್ಕಾನ್) ಪೂರೈಸುವ ಆಹಾರದ ಗುಣಮಟ್ಟ ಮಾಪನ.

ಪಾಲ್ಗೊಳ್ಳುವ ಸ್ವಯಂಸೇವಾ ಸಂಘಗಳು ಎನ್‌ಪಿಎನ್‌ಎಸ್‌ಪಿಇ ನ ಷರತ್ತಿಗೊಳಪಡಬೇಕು.

ಇದರ ಪ್ರಕಾರ ಯಾವುದೇ ಜಾತಿಯ, ಧಾರ್ಮಿಕ/ ಪಂಗಡದ ಸಂಘಟನೆಗಳಿಗೆ ಕೊಡಬಾರದು, ಇದರಿಂದ ಲಾಭ ಮಾಡಲು ಅವಕಾಶ ಇರಬಾರದು, ತಾರತಮ್ಯ ಮಾಡಬಾರದು ಎಂದು ಸ್ಪಷ್ಟವಾಗಿ ತಿಳಿಸಿದೆ.

ಶಿಕ್ಷಣ ಇಲಾಖೆ ಮತ್ತು ಕೇಂದ್ರ ಸರ್ಕಾರದ



ಕೃಷ್ಣಪ್ರಜ್ಞೆ



ವ್ಯವಹಾರ ಪ್ರಜ್ಞೆ

2) ಸರ್ಕಾರದಿಂದ ಪಡೆಯುತ್ತಿರುವ ಅನುದಾನದ ಸಮರ್ಪಕ ಬಳಕೆ ಯಾಗಿದೆಯೇ ಅಥವಾ ದುರುಪಯೋಗ ಆಗಿದೆಯೇ ಎಂಬ ಬಗ್ಗೆ ಅನುದಾನ ಲೆಕ್ಕಪತ್ರದ ಪರಿಶೀಲನೆ.

3) ಸರ್ಕಾರದ ಅನುದಾನವಿದ್ದರೂ ಸಾರ್ವಜನಿಕರು ಮತ್ತು ವಿದೇಶಗಳಿಂದ ನಿಧಿ ಸಂಗ್ರಹ ಮಾಡಿರುವ ಕುರಿತು.

4) ಹಣ ಸಂಗ್ರಹಕ್ಕಾಗಿ ಶಾಲಾ ಮಕ್ಕಳ ಭಾವಚಿತ್ರಗಳನ್ನು ರಾಷ್ಟ್ರದ ಗೌರವಕ್ಕೆ ಚ್ಯುತಿ ಬರುವ ರೀತಿ ಬಿಂಬಿಸಿರುವುದು.

ಇಸ್ಕಾನ್ ಸಂಸ್ಥೆಯ ಹಣಕಾಸಿನ ಅವ್ಯವಹಾರ, ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿ, ದೇವಸ್ಥಾನದ ಹೆಸರಿನಲ್ಲಿ ಅವ್ಯವಹಾರ ಕುರಿತು ಪರಿಶೀಲನೆ.

ಉದ್ದೇಶಗಳ ಪರಿಶೀಲನೆ

ಅಕ್ಷರ ದಾಸೋಹ ಯೋಜನೆಯಡಿಯಲ್ಲಿ

ಮಾನವ ಸಂಪನ್ಮೂಲ ಇಲಾಖೆ (ಹೆಚ್‌ಆರ್‌ಡಿ) ಬಿಸಿಯೂಟಕ್ಕಾಗಿ ಹಣ ಸಂಗ್ರಹಿಸಬಾರದು ಮತ್ತು ಸಂಗ್ರಹಿಸಲು ನಾವು ಅಧಿಕೃತವಾಗಿ ಆದೇಶ ನೀಡಿಲ್ಲ ಎಂದು ಲಿಖಿತ ರೂಪದಲ್ಲಿ ತಿಳಿಸಿದ್ದಾರೆ.

ಇಸ್ಕಾನ್ ಧಾರ್ಮಿಕ ಸಂಘಟನೆ. ಅದು ಬಿಸಿಯೂಟ ನೀಡುವುದಕ್ಕೋಸ್ಕರವೇ ‘ಅಕ್ಷರ ಪಾತ್ರೆ’ ಎಂಬ ಅಧೀನ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಆಹಾರ ಸರಬರಾಜು ಮಾಡುತ್ತಿವೆ.

ಗುಣಮಟ್ಟದಿಂದ ಆಹಾರವನ್ನು ಕೊಡುತ್ತಿದ್ದೇವೆಂದೂ ಸಾರ್ವಜನಿಕರಿಂದ ಬೇರೆ ಬೇರೆ ದೇಶಗಳಿಂದ ಅದರಲ್ಲೂ ಪ್ರಮುಖವಾಗಿ ಯುನೈಟೆಡ್ ಕಿಂಗ್‌ಡಮ್, ಅಮೇರಿಕಾ ಮುಂತಾದ ದೇಶಗಳಿಂದ ದೇಣಿಗೆ ಪಡೆಯುತ್ತಿದೆ.

ಆದರೆ ಈ ನಿರ್ಬಂಧಗಳು ಯಾವುವು ಇಸ್ಕಾನ್ ಸಂಸ್ಥೆಗೆ ಅನ್ವಯಿಸುವುದಿಲ್ಲ. ಅದು ಮೂಲಭೂತವಾಗಿ ಧಾರ್ಮಿಕ ಸಂಸ್ಥೆ, ಬೆಳ್ಳುಳ್ಳಿ, ಈರುಳ್ಳಿರಹಿತ ಆಹಾರ ಸರಬರಾಜು, ದೇಣಿಗೆ ಸಂಗ್ರಹ.

ಸದನ ಸಮಿತಿ ಎನ್‌ಎಸ್‌ಎನ್‌ಎಸ್‌ಪಿಎ ಮಾರ್ಗದರ್ಶಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ.

[illegible] ಪತ್ರ ಹಾಗೂ ಲಿಖಿತ ರೂಪದ [illegible] ಲೆಕ್ಕಕ್ಕೆ ಪರಿಗಣಿಸಿ[illegible].

ಈ ಯೋಜನೆಯ ಅನುಷ್ಠಾನದಲ್ಲಿ ಸರ್ಕಾರ[illegible] ನೇರವಾಗಿ ಚಿತ್ರದುರ್ಗ, ಶಿವಮೊಗ್ಗ, ಮಂಡ[illegible] ಕೊಡಗು, ಚಿಕ್ಕಮಗಳೂರು, ಗದಗ್, ಬೀದರ್ ಕೊಪ್ಪಳ, ರಾಯಚೂರು, ತುಮಕೂರು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಬಿಸಿಯೂಟವನ್ನು ಶಾಲೆಗಳಲ್ಲಿ ಅಡುಗೆ ಮಾಡಿ ಬಡಿಸುತ್ತಾರೆ.

ಬೆಂಗಳೂರು ನಗರ, ದಾವಣಗೆರೆ, ಬೆಂಗಳೂರು ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು ಚಾಮರಾಜನಗರ, ಹಾಸನ, ದಕ್ಷಿಣಕನ್ನಡ, ಉಡುಪಿ ಧಾರವಾಡ, ಉ.ಕನ್ನಡ, ಹಾವೇರಿ, ಬೆಳಗಾಂ ಬಾಗಲಕೋಟೆ, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ ಜಿಲ್ಲೆಗಳಲ್ಲಿ 100 ಸ್ವಯಂ ಸೇವಾ ಸಂಘಟನೆಗಳು ಬಿಸಿಯೂಟದಲ್ಲಿ ತೊಡಗಿಸಿಕೊಂಡಿವೆ. ಈ ಸಂಘಟನೆಗಳಲ್ಲಿ ಹೆಚ್ಚು ಬಲಾಢ್ಯವಾದದ್ದು ಮತ್ತು ಹೆಚ್ಚು ಶಾಲೆಗಳಿಗೆ ಆಹಾರ ಸರಬರಾಜು ಮಾಡುತ್ತಿರುವುದು “ಇಸ್ಕಾನ್ ಅಕ್ಷರ ಪಾತ್ರೆ ಫೌಂಡೇಷನ್” ಈ ಸಂಸ್ಥೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಮಕ್ಕಳಿಗೆ ಊಟ ನೀಡುತ್ತಿದೆ.

ಈ ಸಂಸ್ಥೆಗಳಿಗೆ ಬಿಸಿಯೂಟ ಯೋಜನೆ ಗುತ್ತಿಗೆ ನೀಡಿರುವುದರಿಂದ ಈ ಯೋಜನೆಯ ಮಹಾತ್ವಾಕಾಂಕ್ಷೆಯನ್ನು ಗಾಳಿಗ ತೂರಲಾಗಿದೆ. ಸಮಾನ ಮನೋಭಾವನೆ ಬೆಳೆಸಲು ಧಕ್ಕೆ ತಂದಿದೆ. ದಲಿತ, ಹಿಂದುಳಿದ ವರ್ಗದ ಮಹಿಳೆಯರು ಅಡುಗೆ ಮಾಡಿ, ಎಲ್ಲಾ ವರ್ಗದ ಮಕ್ಕಳು ಊಟ ಮಾಡುತ್ತಿದ್ದರು. ಇದು ಒಂದು ಸಾಮಾಜಿಕ ಪರಿವರ್ತನೆಯ ಪ್ರೇರಕ ಕ್ರಮವೂ ಆಗಿತ್ತು. ಆದರೆ ಈಗ ಅಕ್ಷಯಪಾತ್ರ, ಅದಮ್ಯಚೈತನ್ಯ ಅಂತ ಮೇಲ್ವರ್ಗದ, ಪುರೋಹಿತಶಾಹಿ ಮನೋಭಾವನೆಗಳನ್ನು ಹೊಂದಿರುವ ಸಂಸ್ಥೆಗಳ ಮಧ್ಯಪ್ರವೇಶದಿಂದಾಗಿ ಸಾಮಾಜಿಕ ಉದ್ದೇಶಕ್ಕೆ ಧಕ್ಕೆ ಬಂದಿದೆ.

ಪುರೋಹಿತಶಾಹಿ ನೀತಿಯನ್ನು ಹೇರುವ ರಹಸ್ಯ ಅಜೆಂಡಾ ಇಟ್ಟುಕೊಂಡಿರುವ ರಾಜ್ಯದ ಬಿಜೆಪಿ ಸದಸ್ಯರ ನೇತೃತ್ವ ಜಂಟೀ ಸದನ ಸಮಿತಿ ನಿರೀಕ್ಷಿತವಾದ ತೀರ್ಮಾನವನ್ನು ಕೊಟ್ಟಿದೆ.

.ಭಿನ್ನ ಅಭಿಪ್ರಾಯ


ಈ ಸಮಿತಿ ವಿವಿಧ ಸಂಘಟನೆಗಳಿಂದ ಕೊಟ್ಟಿರುವ ಯಾವುದೇ ಮನವಿ ಪತ್ರಗಳನ್ನು ಮತ್ತು ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಜಂಟೀ ಸದನ ಸಮಿತಿಯಲ್ಲಿ ಎಲ್ಲಾ ಸದಸ್ಯರ ಸಂಪೂರ್ಣ ಒಪ್ಪಿಗೆಯನ್ನು ಪಡೆಯದೇ ಏಕಮುಖವಾದ ತೀರ್ಮಾನವನ್ನು ಕೊಟ್ಟಿದೆ.

ವಿಧಾನಸಭೆಯಲ್ಲಿ [illegible]

ಜೆ.ಪಿ.ಶ್ರೀರಾಮನೆಲ್ಲಿ, [illegible]

ಹೆಗಡೆ, [illegible]

ಮಠಗಳ ಮಡಿಲಿಗೆ ಸರ್ಕಾರಿ ಆಸ್ಪತ್ರೆಗಳೆಂಬ ಘೋಷಣೆ



ಬಿಜೆಪಿ ದರ್ಬಾರ್

ರಾಜ್ಯ ಬಿಜೆಪಿ ಸರ್ಕಾರದ ಮತ್ತೊಂದು ಅಮೋಘ ಘೋಷಣೆ ಹೊರಬಿದ್ದಿದೆ. ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳನ್ನು ಮಠಗಳ ಮಾನ್ಯಗಳ ಮಡಿಲಿಗೆ ಹಾಕುವುದಾಗಿ ರಾಜ್ಯ ಘನ ಮುಖ್ಯ ಮಂತ್ರಿ ಡಾ| ಬಿ.ಎಸ್. ಯಡಿಯೂರಪ್ಪ ನವರು ಉದ್ಘೋಷಿಸಿದ್ದಾರೆ. ಸರ್ಕಾರ ಎಷ್ಟೇ ಪ್ರಯತ್ನ ಪಡುತ್ತಿದ್ದರೂ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳು ಜನರಿಗೆ ಸರಿಯಾಗಿ ತಲುಪುತ್ತಿಲ್ಲ. ಆದ್ದರಿಂದ ಅವುಗಳನ್ನು ಮಠ ಮಾನ್ಯಗಳಿಗೆ ನೀಡಲಾಗುವುದು ಎಂದು ನಮ್ಮ ಮು.ಮ. ಅವರು ಹೇಳಿದ್ದಾರೆ.

ಭಲೆ ! ಭೇಷ್ !! ಅಂದರೆ ಸರ್ಕಾರಿ ಆಸ್ಪತ್ರೆಗಳನ್ನು ನಮ್ಮ ಕೈಯಲ್ಲಿ ಸರಿಯಾಗಿ ನಿರ್ವಹಿಸುವ ಯೋಗ್ಯತೆ ಇಲ್ಲ ಎಂದು ರಾಜ್ಯ ಬಿಜೆಪಿ ಸರ್ಕಾರ ಬಹಿರಂಗವಾಗಿ ಒಪ್ಪಿಕೊಂಡಿದೆ. ಶೈಕ್ಷಣಿಕ ಸೇವೆಯ ಹೆಸರಿನಲ್ಲಿ ಸರ್ಕಾರದಿಂದ ಅನುದಾನ, ಸಹಾಯಧನ ಪಡೆದುಕೊಂಡು ನಮ್ಮ ರಾಜ್ಯದ ಹಲವಾರು ಜಾತಿ ಮಠಗಳು ತಮ್ಮ ಜಾತಿಯ ಜನಗಳು ಹಾಗೂ ಅನ್ಯ ಜಾತಿಯ ಜನರಿಗೆ ಸಲ್ಲಿಸುತ್ತಿರುವ 'ಸೇವೆ'ಯ ಸ್ವರೂಪ ನಮ್ಮ ನಾಡಿನ ಜನರಿಗೆ ಗೊತ್ತಿಲ್ಲದೇ ಇರುವಂಥದ್ದೇನು ಅಲ್ಲ.

ಇದೀಗ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್, ಬಜರಂಗದಳ ಮುಂತಾದ ಸಂಘ ಪರಿವಾರದ ಅಂಗ ಸಂಘಟನೆಗಳ ಕೋಮುವಾದಿ ವಿಚಾರಗಳನ್ನು ಹರಡುವ ಹಾಗೂ ಸನಾತನ ವೈದಿಕ ಜಾತಿವಾದಿ ವ್ಯವಸ್ಥೆಯನ್ನು ಕೊಂಡಾಡುವ, ಅದರ ರಕ್ಷಣೆಗೆ ಶ್ರಮಿಸುತ್ತಿರುವ ಮಠಗಳಿಗೆ ಕೋಟಿ ಕೋಟಿ ರೂಪಾಯಿಗಳ ಧಾರಾಳ ಅನುದಾನ, ಸಹಾಯಧನಗಳು ಹರಿದು ಹೋಗುವಂತಾಗಿದೆ. ಇನ್ನು ಇದೀಗ ಸರ್ಕಾರಿ ಆಸ್ಪತ್ರೆಗಳನ್ನೇ ಮಠಗಳ ಮಡಿಲಿಗೆ ಹಾಕಲು ಬಿಜೆಪಿ ಸರ್ಕಾರ ಹೊರಟಿದೆ.

ಸರ್ಕಾರಿ ಆಸ್ಪತ್ರೆಗಳಾದ ಮೇಲೆ ಮುಂದಿನ ಸರದಿ ಯಾವುದರದು ? ನಮ್ಮ ರಾಜ್ಯದ ಕಾರ್ಖಾನೆಗಳು, ವಿದ್ಯುತ್ ಸ್ಥಾವರಗಳ ನಿರ್ವಹಣೆ, ಅಣೆಕಟ್ಟೆಗಳ ನಿರ್ವಹಣೆ ಆಮೇಲೆ ವಿಧಾನ ಸೌಧದ ನಿರ್ವಹಣೆ(ಇದು ಅನಧಿಕೃತವಾಗಿ ಹಲವಾರು ಬಾರಿ ನಡೆಯುತ್ತಲೇ ಇರುತ್ತದೆ. ಈಗ ಅಧಿಕೃತವಾಗಿ..) ಯನ್ನು ಇವೇ ಮಠ ಮಾನ್ಯಗಳಿಗೆ ವಹಿಸಿ ಕೊಟ್ಟು ಮಂತ್ರಿ ಮಹೋದಯರು ರೆಸಾರ್ಟ್ ರಾಜಕಾರಣ ಮಾಡುತ್ತಾ, ರಾಜ್ಯದ ಕ್ಷೇಮಾಭಿವೃದ್ಧಿಗಾಗಿ ಹೋಮ ಹವನಾದಿಗಳನ್ನು ಮಾಡುತ್ತಾ, ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಅನಗತ್ಯ ಅಡೆತಡೆಗಳನ್ನು ನಿರ್ಮಿಸುತ್ತಿರುವ ವಿರೋಧ ಪಕ್ಷಗಳ ಮುಖಂಡರಿಗೆ ಮಾಟ, ಮಂತ್ರಗಳ ಮೂಲಕ ತಕ್ಕ ಪಾಠ ಕಲಿಸುತ್ತಾ ಹಾಯಾಗಿರಬಹುದಲ್ಲವೇ ?

ಸರ್ಕಾರಿ ಆಸ್ಪತ್ರೆಗಳನ್ನು ನಡೆಸುವ ಯೋಗ್ಯತೆ ಇಲ್ಲದೆ ಹೋದರೆ ಈ ಸರ್ಕಾರದ ಚುಕ್ಕಾಣಿ ಹಿಡಿದವರು ರಾಜಿನಾಮೆ ಬಿಸಾಡಿ ಮನೆಗೆ ಯಾಕೆ ಹೋಗುವುದಿಲ್ಲ ? ಅಂತ ನೀವು ಈ ಸರ್ಕಾರಕ್ಕೆ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರ ನೀಡುವ ಜವಾಬ್ದಾರಿಯನ್ನು ಇವೇ ಮಠಗಳಿಗೆ ವಹಿಸಬಹುದು ಹಾಗೂ ಆ ಉತ್ತರ ನೀಡುವುದಕ್ಕೆ ವೆಚ್ಚವಾಗಿ ಇವೇ ಮಠ ಮಾನ್ಯಗಳಿಗೆ ಇನ್ನೂ ಒಂದಷ್ಟು ಸರ್ಕಾರಿ ಅನುದಾನವನ್ನು ಬಿಜೆಪಿ ಸರ್ಕಾರ ಘೋಷಿಸಿ ಬಿಡಬಹುದು. ಹುಷಾರಾಗಿರಿ.

ಬಾಲಂಗೋಚಿ :

ಇತ್ತ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಸರ್ಕಾರಿ ಆಸ್ಪತ್ರೆಗಳನ್ನು ಮಠಗಳಿಗೆ ವಹಿಸಿಕೊಡುವ ಘೋಷಣೆ ಮಾಡುತ್ತಿರುವ ಹೊತ್ತಿಗೆ ಅತ್ತ ತುಮಕೂರಿನ ಸಿದ್ದಗಂಗಾ ಮಠದಿಂದ ಒಂದು ಸುದ್ದಿ ಬಂದಿದೆ. ಮಠದ ಹಾಸ್ಟೆಲಿನಲ್ಲಿರುವ ನೂರಾರು ವಿದ್ಯಾರ್ಥಿಗಳಿಗೆ 'ಕಜ್ಜಿ' ರೋಗದ ಸೋಂಕು ತಗುಲಿದ್ದು ವಿದ್ಯಾರ್ಥಿಗಳು ಪರೀಕ್ಷೆಗಳು ಸಮೀಪಿಸಿರುವ ಈ ಹೊತ್ತಿನಲ್ಲಿ ಓದಿನ ಕಡೆಗೆ ಗಂಭೀರವಾಗಿ ಗಮನಕೊಡುವುದಕ್ಕಾಗದೇ ಮೈಕೈ ಪರಚಿಕೊಳ್ಳುತ್ತಾ ಪರಿತಪಿಸಬೇಕಾಗಿದೆ ಬಂದಿದೆಯಂತೆ. ಆಸ್ಪತ್ರೆಗಳನ್ನು ಇನ್ನು ಮಠಗಳಿಗೆ ವಹಿಸಿಲ್ಲದೇ ಇರುವುದರಿಂದ ಇದಕ್ಕೆ ಸರ್ಕಾರಿ ಆಸ್ಪತ್ರೆ ಕಾರಣ ಅಂತ ಮಾತ್ರ ಯಾರೂ ಹೇಳುವಂತಿಲ್ಲ. ಅಲ್ಲವೇ ?

ಬದುಕುವ ಕಲೆ ಕುರಿತು ಪುಗಸಟ್ಟೆಯಲ್ಲದ ಉಪದೇಶ

ಯೋಗಾಭ್ಯಾಸ ಮಾಡುವುದು ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಮಾಂಸ ತಿನ್ನುವುದು ಆರೋಗ್ಯಕ್ಕೆ ತುಂಬಾ ಕೆಟ್ಟದ್ದು. ಇವೆರಡು ನಮ್ಮ ಸಮಾಜದಲ್ಲಿ ವ್ಯಾಪಕವಾಗಿ ಹರಡಲಾಗುತ್ತಿರುವ ಜನಪ್ರಿಯ ಮೂಢನಂಬಿಕೆಗಳು. ವೈಜ್ಞಾನಿಕ ಆಧಾರ, ಅಧ್ಯಯನಗಳ ಸಮರ್ಥನೆ ಇಲ್ಲದಿದ್ದರೂ ಇದೇ ಪರಮ ವಿಜ್ಞಾನ ಎಂಬಂತೆ ಈ ಕುರಿತು ಪ್ರಚಾರ ಮಾಡುವವರಿಗೇನೂ ಕೊರತೆಯಿಲ್ಲ.

ಈ ಇಂಥ ಉಪದೇಶ (ಪುಗಸಟ್ಟೆ ಉಪದೇಶ ಅಲ್ಲ)ವನ್ನು ರಾಜ್ಯದ ಪದವಿ ಕಾಲೇಜುಗಳಲ್ಲಿ ಮಾಡಲಾಗುತ್ತಿದೆ. ಬಡವರು, ಕೂಲಿಕಾರರು, ಕಾರ್ಮಿಕರು, ಶ್ರಮಿಕರು ಕಟ್ಟಿದ ತೆರಿಗೆ ಹಣದಿಂದ ತುಂಬಿಕೊಂಡ ಖಜಾನೆಯಿಂದ ಈ ಉಪದೇಶ ನೀಡುವ ಸಂಸ್ಥೆಗೆ ತಲಾ ವಿದ್ಯಾರ್ಥಿ 600 ರೂಪಾಯಿಯಂತೆ ವೆಚ್ಚ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಇಂಥ 'ಪುಗಸಟ್ಟೆ ಉಪದೇಶ ನೀಡಿ ಹಣವನ್ನು ಬಳಿದುಕೊಳ್ಳುತ್ತಿರುವ ಕಾರ್ಯಕ್ರಮದ ಹೆಸರು ಮಾನವಂತೆ ಅಂತ.

ಉಪದೇಶ ನೀಡುವುದು WAYE ಎಂಬ ಸಂಸ್ಥೆ. WAYE ಎಂಬುದರ ಅರ್ಥ world alliance for youth empowerment. ಇದು 'ಗುರೂಜಿ ರವಿಶಂಕರ'ರ 'ಆರ್ಟ್ಸ್ ಆಫ್ ಲಿವಿಂಗ್' ಸಂಸ್ಥೆಯ ಅಂಗಸಂಸ್ಥೆಯೆಂಬುದು ಈ ಸಂಸ್ಥೆಯ ಜಾಡು ಹಿಡಿದು ಹುಡುಕಾಡಿದವರಿಗೆ ಸಿಕ್ಕಿರುವ ಮಾಹಿತಿ (ಪ್ರಜಾವಾಣಿ ವಾಚಕರ ವಾಣಿ ಪತ್ರ ಮಾರ್ಚ್ 9, 2011)

ಸುಡು ಸುಡುವ ಬೆಲೆ ಏರಿಕೆಯ ನಡುವೆ ಬೇಯುತ್ತಿರುವ ದುಡಿಯುವ ಜನರು, ಕೂಲಿಕಾರರು 10 ರೂಪಾಯಿ ಕನಿಷ್ಠ ಕೂಲಿ ಹೆಚ್ಚಿಸಿಕೊಳ್ಳಬೇಕಾದರೆ ಏನೆಲ್ಲಾ ಸಂಘರ್ಷ ಮಾಡಬೇಕಾಗಿ ಬರುತ್ತದೆ. ಈ ಕೂಲಿಕಾರ ಶ್ರಮಿಕರಿಗೆ ಹೀಗೆಯೇ ಸುಲಭವಾಗಿ 'ಬದುಕುವ' ಯಾವುದಾದರೂ 'ಕಲೆ'ಯನ್ನು 'ಮಾನವತೆಯೋ' ಮಣ್ಣೋ ಯಾವುದೋ ಹೆಸರಿನಲ್ಲಿ ಹೇಳಿಕೊಡಬಾರದೇ ನಮ್ಮ ಗುರುವರ್ಯರು.

ಬಿ.ವೈ.'ರಾಘವೇಂದ್ರ' ರ ಪ್ರೇರಣೆಗೆ ಬರೀ 27.18 ಕೋಟಿ ಕಾಣಿಕೆ !!

ನಮ್ಮ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಗ ಬಿಜೆಪಿ ಸಂಸದ ಬಿ.ವೈ.ರಾಘವೇಂದ್ರಪ್ಪ ಅವರು 'ಸಾಮಾಜಿಕ ಶೈಕ್ಷಣಿಕ ಟ್ರಸ್ಟ್'ಒಂದನ್ನು ಸ್ಥಾಪಿಸಿದ್ದಾರೆ. ಅದರ ಪೂರ್ಣ ಹೆಸರು 'ಪ್ರೇರಣಾ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್' ಅಂತ. ಈ ಟ್ರಸ್ಟ್ ಯಾರ್ಯಾರಿಗೆ ಏನೇನು ರೀತಿಯ 'ಪ್ರೇರಣೆ' ನೀಡಿದೆಯೋ ಗೊತ್ತಿಲ್ಲ. ಆದರೆ ಈ ಸಂಸ್ಥೆಯ ಖಜಾನೆಯಂತೂ ಭರ್ಜರಿಯಾಗಿಯೇ ಭರ್ತಿಯಾಗುತ್ತಿದೆ. ರಾಜ್ಯದ ಹತ್ತಾರು ಕಂಪನಿಗಳು, ಸ್ಪಥೆಗಳು ಈ 'ಶೈಕ್ಷಣಿಕ ಟ್ರಸ್ಟ್ ಕೋಟ್ಯಾಂತರ ರೂಪಾಯಿ ದೇಣಿಗೆ ನೀಡಿವೆ. ಈ ರೀತಿ ದೇಣಿಗೆ ಸಂದದ್ದರ ಒಟ್ಟು ಮೊತ್ತ 27.18 ಕೋಟಿ ರೂ.ಗಳು ಅದೂ ಕೇವಲ ಎರಡು ವರ್ಷಗಳ ಅವಧಿಯಲ್ಲಿ.

ಜೆ.ಎಸ್.ಡಬ್ಲ್ಯು ಸ್ಟೀಲ್ಸ್ ಎಂಬ ಸಂಸ್ಥೆ ಸರ್ಕಾರಕ್ಕೆ ಕೊಡಬೇಕಿರುವ 118 ಕೋಟಿ ರೂಪಾಯಿ. ವಸೂಲಿಗೆ ಸರ್ಕಾರ ಕ್ರಮ ವಹಿಸಿಲ್ಲ. ಈ ಸಂಸ್ಥೆ ಪ್ರೇರಣೆಗೆ ದೊಡ್ಡ ಕೊಡುಗೆ ನೀಡಿದೆ. ಹೀಗೆ ಒಟ್ಟು ಪ್ರಕರಣದಲ್ಲಿ ಇಂತಹ ಹತ್ತಾರು ಕತೆಗಳು ಬಿಚ್ಚಿಕೊಳ್ಳುತ್ತಿವೆ. ಈ ಸಂಬಂಧ ಜೆಡಿಎಸ್ ಮುಖಂಡ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ದೆಹಲಿಯಲ್ಲಿ ಎಡಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಮಾಧ್ಯಮಗಳಿಗೆ ಮಾಹಿತಿ ಬಿಡುಗಡೆ ಮಾಡಿದ್ದಾರೆ. ತಳ್ಳಿಹಾಕುವಂತಹ ಆರೋಪವಲ್ಲ. ಹಾಗಾಗಿ ಬಿಜೆಪಿ ಹೈಕಮಾಂಡ್ ದಿಢೀರೆಂದು ಯಡಿಯೂರಪ್ಪ ಅವರನ್ನು ದೆಹಲಿಗೆ ಕರೆಸಿಕೊಂಡು ವಿವರ ಕೇಳಿದೆ ಎಂದು ಸುದ್ದಿ. ಎಡಪಕ್ಷಗಳು ಈ ವಿಚಾರವನ್ನು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪಿಸುವುದಾಗಿ ಹೇಳಿವೆ.

ಇಸ್ಕಾನ್ ಭ್ರಷ್ಟಾಚಾರ....

ಪುಟ 11 ರಿಂದ

ವಾದಗಳನ್ನು ಮಂಡಿಸಿ, ಚರ್ಚೆಗಳನ್ನು ಮಾಡಿದ ನಂತರ, ವಿಧಾನಸಭೆಯ ಹೊರಗಡೆ ಬಿಸಿಯೂಟ ನೌಕರರ ಸಂಘಟನೆಗಳ ನಿರಂತರ ಚಳುವಳಿ ಹಾಗೂ ಚಿಂತಕರು ಹಿರಿಯ ಸಾಹಿತಿಗಳ ಒತ್ತಾಯದಿಂದ ಆದ ಜಂಟೀ ಸದನ ಸಮಿತಿ ತನ್ನ ಘನತೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ.

ಲಿಖಿತ ರೂಪದಲ್ಲಿ ಹಣ ಸಂಗ್ರಹ ಮಾಡಬಾರದು ಎಂಬ ಶಿಕ್ಷಣ ಇಲಾಖೆಯ ಸುತ್ತೋಲೆಯನ್ನು ಧಿಕ್ಕರಿಸಿದ್ದರೂ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಬಹುಶಃ ಒತ್ತಡಕ್ಕೆ ಮಣಿದು "ಗುಣಮಟ್ಟದ ಆಹಾರವನ್ನು ಕೊಡಲು ದೇಣಿಗೆ ಸಂಗ್ರಹಿಸುವುದು ತಪ್ಪಲ್ಲ", ಎಂದು ನೀಡಿದ ಒಂದೇ ವಾಕ್ಯದ ಅಲಿಖಿತ ಹೇಳಿಕೆಯ ಆಧಾರದಲ್ಲಿ ಜಂಟೀ ಸದನ ಸಮಿತಿ "ಇಸ್ಕಾನ್" ಸಂಸ್ಥೆಗೆ ಶುದ್ಧ ಹಸ್ತ" ದ ಬಿರುದನ್ನು ನೀಡಿದೆ. ಅದೊಂದು ಸಂಸ್ಥೆ ಆಗಿದ್ದರಿಂದ ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುವುದು ತಪ್ಪಲ್ಲ ಎಂದಿದೆ. ತನಗೆ ಬೇಕಾದ ವಿಷಯಗಳಿಗೆ ಧಾರ್ಮಿಕ ಸಂಸ್ಥೆ ಆಸ್ತಿ ವ್ಯವಹಾರ, ವಿಚಾರ ಬಂದಾಗ ಕೇವಲ ಸಂಸ್ಥೆ ಎಂಬ ದ್ವಿಗುಣವಾದ ಹೇಳಿಕೆಗಳಲ್ಲಿ ಜಂಟೀ ಸಮಿತಿಯನ್ನು ಪ್ರಾಮಾಣಿಕತೆಯನ್ನು ಅನುಮಾನ ಪಡುವಂತಾಗಿದೆ. ಈ ಸಮಿತಿಯ ಇಂತಹ ನಿರ್ಣಯದಿಂದ ಇನ್ನು ಹೆಚ್ಚು ಶಾಲೆಗಳಿಗೆ ಅಡುಗೆ ಮಾಡುವ ಗುತ್ತಿಗೆಯನ್ನು ಇವರಿಗೆ ಕೊಟ್ಟರೆ ಇನ್ನೂ ಸಾವಿರಾರು ಮಹಿಳೆಯರು ಕೆಲಸ ಕಳೆದುಕೊಳ್ಳುವ ಅಪಾಯವಿದೆ.

ಫೆಬ್ರವರಿ 3 ಜಿಲ್ಲಾ ಪಂಚಾಯ್ತಿ ಮುತ್ತಿಗೆ

ಇಂತಹ ತೀರ್ಪನ್ನು ವಿರೋಧಿಸಿ, ಬಿಸಿಯೂಟ ನೌಕರಿಗೆ ಸೇವಾ ನಿಯಮಾವಳಿಗಳನ್ನು ಜಾರಿಗೆ ತರಬೇಕು, ಕೇಂದ್ರಸರ್ಕಾರ ಒಂದು ಕಡೆ 600 ರೂ. ಸಂಬಳ ಹೆಚ್ಚು ಮಾಡಿ 26 ರಿಂದ 70 ವಿದ್ಯಾರ್ಥಿಗಳಿಗೆ ಇಬ್ಬರು ಅಡುಗೆಯವರ ಬದಲಿಗೆ 26 ರಿಂದ 100 ವಿದ್ಯಾರ್ಥಿಗಳಿಗೆ ಇಬ್ಬರು ಅಡುಗೆಯವರು ಎಂದು ತೀರ್ಮಾನ ಮಾಡಿದ್ದರಿಂದ ನೂರಾರು ಬಿಸಿಯೂಟ ನೌಕರರು ಕೆಲಸ ಕಳೆದುಕೊಳ್ಳುತ್ತಿದ್ದು, ಈ ನೀತಿಯನ್ನು ಕೈಬಿಡಬೇಕೆಂದೂ ಒತ್ತಾಯಿಸಿ ಫೆಬ್ರವರಿ 3ರಂದು ಜಿಲ್ಲಾ ಪಂಚಾಯ್ತಿಗಳ ಮುಂದೆ ಬೃಹತ್ ಪ್ರತಿಭಟನೆಯನ್ನು ಮಾಡಲಾಯಿತು.

ಚಿತ್ರದುರ್ಗ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ, ಗುಲ್ಬರ್ಗಾ, ರಾಯಚೂರು, ಕೋಲಾರ, ಮಂಡ್ಯ, ಕೊಪ್ಪಳ, ಬಳ್ಳಾರಿ, ಉ.ಕನ್ನಡ, ದಕ್ಷಿಣಕನ್ನಡ, ಉಡುಪಿ, ತುಮಕೂರು ಇನ್ನು ಮುಂತಾದ ಜಿಲ್ಲೆಗಳಲ್ಲಿ ತೀವ್ರವಾದ ಪ್ರತಿಭಟನೆ ನಡೆದಿದೆ. ಮಂಡ್ಯದಲ್ಲಿ ಪೊಲೀಸರಿಗೆ ನೌಕರರಿಗೆ ತೀವ್ರವಾದ ವಾಗ್ವಾದ, ತಳ್ಳಾಟ ನಡೆದು ಮಹಿಳಾ ನೌಕರರ ಮೇಲೆ ಪೊಲೀಸರು ದಾಳಿ ನಡೆಸಿದ್ದಾರೆ. ಇದರಲ್ಲಿ ಇಬ್ಬರು ಸಂಗಾತಿಗಳಿಗೆ ತೀವ್ರ ಪೆಟ್ಟಾಗಿ ಪ್ರಜ್ಞೆತಪ್ಪಿ ಆಸ್ಪತ್ರೆಗೆ ಸೇರುವಂತಾಯ್ತು. ಇನ್ನು ಹಲವು ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯ್ತಿ ಕಚೇರಿ ಗೇಟ್‌ಗಳನ್ನು ದಾಟಿ ಒಳನುಗ್ಗಲು ಪ್ರಯತ್ನಿಸಿದ್ದಾರೆ.

ಈ ಹೋರಾಟದ ಫಲವಾಗಿ ರಾಜ್ಯದ ಶಿಕ್ಷಣ ಮಂತ್ರಿಗಳು ಮಾತುಕತೆಗೆ ಆಹ್ವಾನಿಸುವುದಾಗಿ ತಿಳಿಸಿದ್ದಾರೆ. ಇನ್ನು ಮಾತುಕತೆಗೆ ದಿನಾಂಕ ನಿಗದಿಪಡಿಸುವುದನ್ನು ನೋಡಲಾಗುತ್ತಿದೆ

ಸಿವಿಸಿ ನೇಮಕ ರದ್ದು : ಸರಕಾರವನ್ನು ಬಯಲಿಗೆಳೆದ ತೀರ್ಪು

ಮಾರ್ಚ್ 3ರಂದು ದೇಶದ ಸರ್ವೋಚ್ಚ ನ್ಯಾಯಾಲಯ ಯುಪಿಎ-2 ಸರಕಾರಕ್ಕೆ ಚಾಟಿಯೇಟು ಕೊಟ್ಟಿದೆ, ದೇಶದ ಮುಖ್ಯ ಜಾಗೃತ ಆಯುಕ್ತ(ಸಿವಿಸಿ)ರಾಗಿ ಪಿ.ಜೆ.ಜೊಸೆಫ್‌ರವರ ನೇಮಕವನ್ನು ರದ್ದು ಮಾಡಿದೆ. ಅವರು ಇನ್ನೂ ಇತ್ಯರ್ಥವಾಗದಿರುವ ಕೇರಳ ಪಾಮೊಲಿನ್ ಆಮದು ಭ್ರಷ್ಟಾಚಾರ ಕೇಸಿನಲ್ಲಿ ಆರೋಪಿ ನಂ.8 ಆಗಿರುವುದರಿಂದ ಅವರು ಈ ಹುದ್ದೆಗೆ ಅನರ್ಹರು, ಈ ಹುದ್ದೆಗೆ ನೇಮಕವಾಗುವವರ ಚಾರಿತ್ರ್ಯ ದೋಷರಹಿತವಾಗಿರಬೇಕು ಎಂದು ತೀರ್ಪು ಹೇಳಿದೆ. ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಇರುವ ಉನ್ನತಾಧಿಕಾರದ ಸಮಿತಿ ಇವರ ನೇಮಕವನ್ನು ಮಾಡಿತ್ತು. ಈ ನೇಮಕದ ಬಗ್ಗೆ ವಿರೋಧ ಪಕ್ಷದ ನಾಯಕರು ಅಸಮ್ಮತಿ ದಾಖಲಿಸಿದ್ದರು. ಹೀಗೆ ಇದು ಯುಪಿಎ-2 ಸರಕಾರ ಮತ್ತು ಪ್ರಧಾನ ಮಂತ್ರಿಗಳನ್ನು ಬಯಲಿಗೆಳೆದಿರುವ ತೀರ್ಪು. ಒಂದು ರೀತಿಯಲ್ಲಿ ಈ ನೇಮಕ ಯುಪಿಎ-2 ಸರಕಾರ 2ಜಿ ತರಂಗಾಂತರ ಹಂಚಿಕೆ ಹಗರಣದಲ್ಲಿ ವಹಿಸಿರುವ ನಿಲುವಿನ ಭಾಗವೂ ಆಗಿತ್ತು. ಥಾಮಸ್ ಅವರು ಸಿವಿಸಿ ಆಗಿ ನೇಮಕಗೊಳ್ಳುವ ಮೊದಲು ಈಗ 2ಜಿ 'ಖ್ಯಾತಿ' ಗಳಿಸಿರುವ ಎ. ರಾಜ ಅವರಿಗೆ ದೂರಸಂಪರ್ಕ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿದ್ದವರು.

ಪ್ರಧಾನ ಮಂತ್ರಿಗಳು ಈ ನೇಮಕದ ಬಗ್ಗೆ ತನ್ನ ಸಂಪೂರ್ಣ ಜವಾಬ್ದಾರಿಯನ್ನು ಒಪ್ಪಿಕೊಂಡಿರುವುದಾಗಿ ಹೇಳಿದ್ದಾರೆ. ಇದು ಅವರ ಉದಾತ್ತತೆಯನ್ನು ತೋರಿಸಿದೆ ಎಂದು ಕಾಂಗ್ರೆಸ್ ಈ ಚಾಟಿಯೇಟಿನ ನಡುವೆಯೂ ಬೆನ್ನು ತಟ್ಟಿಕೊಳ್ಳುವ ಪ್ರಯತ್ನ ನಡೆಸಿದೆ. ಸುಪ್ರಿಂ ಕೋರ್ಟ್ ನೇಮಕವನ್ನು ರದ್ದು ಮಾಡಿದ ಮೇಲೆ ಸಂಪೂರ್ಣ ಜವಾಬಾರಿಯನ್ನು ಒಪ್ಪಿಕೊಳ್ಳುವುದರ ಅರ್ಥವೇನೋ ಅವರಿಗೇ ಗೊತ್ತು. ಸಂಸತ್ತಿನಲ್ಲಿ ಈ ಬಗ್ಗೆ ಪ್ರಶ್ನಿಸಿದಾಗ ಪ್ರಧಾನಿಗಳು ಇನ್ನು ಸ್ವಲ್ಪ ಮುಂದೆ ಹೋಗಿ 'ತೀರ್ಮಾನದಲ್ಲಿ ತಪ್ಪಾಗಿದೆ' ಎಂದು ಹೇಳಿದ್ದೂ ಹೊಸತೇನನ್ನೂ ಹೇಳಿದಂತಾಗಿಲ್ಲ ಎಂದಾಗ ವಿರೋಧ ಪಕ್ಷದ ಮುಖಂಡರು ಹೇಳುವ ವರೆಗೆ ತನಗೆ ಪಾಮೊಲಿನ ಆಮದು ಭ್ರಷ್ಟಾಚಾರ ಮೊಕದ್ದಮೆಯಲ್ಲಿ ಅವರ ಮೇಲೆ ಆಪಾದನೆಯಿದ್ದುದು ತಿಳಿದೇ ಇರಲಿಲ್ಲ ಎಂದರು. ಇದರಲ್ಲೂ ಹೊಸದೇನೂ ಇಲ್ಲ; ಏಕೆಂದರೆ ವಿಚಾರಣೆಯ ವೇಳೆಗೆ ಸರಕಾರದ ವಕೀಲರೂ ಇದನ್ನೇ ಹೇಳಿದ್ದರು. ಇದು ಪ್ರಧಾನ ಮಂತ್ರಿಗಳನ್ನು ಬಚಾವ್ ಮಾಡುವ ಪ್ರಯತ್ನ ಎಂದೇ ಆಗ ಕಂಡಿತ್ತು. ಸರಿ, ಅದು ಗೊತ್ತಾದ ಮೇಲಾದರೂ ಆ ಬಗ್ಗೆ ತಲೆಕೆಡಿಸಿಕೊಳ್ಳದೆ ಇಂತಹ 'ತಪ್ಪು ತೀರ್ಮಾನಕ್ಕೆ ಬರಲು' ಕಾರಣವೇನು ಎಂಬ ಪ್ರಶ್ನೆಗೆ ಪ್ರಧಾನಿ ಬಳಿ ಉತ್ತರವಿದ್ದಂತಿಲ್ಲ.

ಉದ್ದಿಮೆ ರಂಗದ ಒಡಿಯುಷ್ಟು ಮಹಾಕುಳಗಳಿಗೆ 2001ರ ಬೆಲೆಗಳಲ್ಲಿ 2008ರಲ್ಲಿ ತರಂಗಾಂತರ ನೀಡಿ ಸರಕಾರದ ಬೊಕ್ಕಸಕ್ಕೆ 1.76ಲಕ್ಷ ಕೋಟಿ ರೂ. ನಷ್ಟ ಉಂಟು ಮಾಡಿರುವುದನ್ನು ಹಸಿದ ಜನಕೋಟಿಗೆ ತುಸು ಆಹಾರ ಕೊಡಲು ನೀಡುವ ಅಲ್ಪ ಸಬ್ಸಿಡಿಯೊಂದಿಗೆ ಹೋಲಿಸುವ ವ್ಯಕ್ತಿಯ ಬಳಿ ಇದಕ್ಕೆ ಇರಬಹುದಾದ ಉತ್ತರವಾದರೂ ಏನು ಎಂದು ಪ್ರಜಾಪ್ರಭುತ್ವವಾದಿಗಳು ಊಹಿಸಿಕೊಳ್ಳಬಹುದು. 9ಶೇ. 'ಬೆಳವಣಿಗೆ' ಬೇಕಾದರೆ 'ತುಸು' ಭ್ರಷ್ಟಾಚಾರವನ್ನು ಸಹಿಸಿಕೊಳ್ಳಬೇಕಪ್ಪ! ಅದಕ್ಕೆ ಅನುಗುಣವಾದ ಮುಖ್ಯಸ್ಥರೂ ಬೇಕು ತಾನೇ! ಇಲ್ಲವೇ ಎಂದಿನಂತೆ 'ಸಮ್ಮಿಶ್ರರಂಗ ಧರ್ಮ', ಅಂದರೆ ಆಗಲೂ ಪಟ್ಟಭದ್ರರ ಒತ್ತಡವೇ, ರಾಡಿಯ ಟೇಪುಗಳಲ್ಲಿ ಕೇಳಿದಂತೆ!

★

ಕಪ್ಪು ಹಣ: ಸುಪ್ರಿಂ ಕೋರ್ಟಿನಿಂದ ಮತ್ತಷ್ಟು ತರಾಟೆ

ಈ ದೇಶದಲ್ಲಿ ಇದೇನಪ್ಪಾ ನಡೆಯುತ್ತಿದೆ? ಕಪ್ಪು ಹಣ ಹೊರತೆಗೆಯಲು ಸರಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲವೇ?- ಅದೇ ಮಾರ್ಚ್ 3ರಂದು ಇನ್ನೊಬ್ಬ ಸುಪ್ರಿಂ ಕೋರ್ಟ್ ನ್ಯಾಯಾಧೀಶರ ಉದ್ಗಾರ. ಹಸನ್ ಅಲಿ ಖಾನ್ ಎಂಬ ಪುಣೆಯ ಕುದುರೆ ಫಾರ್ಮಿನ ಮಾಲಕ ಸ್ವಿಸ್ ಬ್ಯಾಂಕಿನಲ್ಲಿ 800ಕೋಟಿ ಡಾಲರ್ ಕಳ್ಳಹಣವನ್ನು ಇಟ್ಟಿರುವ ಬಗ್ಗೆ, 40,000 ಕೋಟಿ ರೂ. ಆದಾಯ ತೆರಿಗೆ ಬಾಕಿ(ಈಗ ಅದಕ್ಕೆ ದಂಡ ಸೇರಿ 62,000ಕೋಟಿ ರೂ. ಆಗಿದೆಯಂತೆ) ಪಾವತಿಸದ ಬಗ್ಗೆ ಕ್ರಮಕೈಗೊಳ್ಳುವಲ್ಲಿ ಯುಪಿಎ-2 ಸರಕಾರದ ವಿಫಲತೆಯನ್ನು ಕೇಳಿ ಬಂದ ಉದ್ಗಾರ ಇದು.

ಕಪ್ಪು ಹಣದ ಪ್ರಶ್ನೆಯನ್ನು ಕೇವಲ ಆದಾಯ ತೆರಿಗೆ ಪ್ರಶ್ನೆಯಾಗಿಯಷ್ಟೇ ನೋಡಬೇಡಿ ಎಂದು ಸುಪ್ರಿಂ ಕೋರ್ಟ್ ಹೇಳುತ್ತಿದ್ದರೂ ಯುಪಿಎ-2 ಸರಕಾರ ಅದರ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಈ ಹಸನ್ ಅಲಿ ಕೇಸಿನಲ್ಲೂ ಮತ್ತೆ ಮಾರ್ಚ್ 8ರಂದು ಸುಪ್ರಿಂ ಕೋರ್ಟ್ ಆತನ ಮೇಲೆ ಕಟ್ಟುನಿಟ್ಟಾದ ಕ್ರಿಮಿನಲ್ ಕಾನೂನುಗಳ ಅಡಿಯಲ್ಲಿ ಕ್ರಮ ಏಕೆ ಕೈಗೊಳ್ಳುತ್ತಿಲ್ಲ, ಭ್ರಷ್ಟಾಚಾರ ತಡೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲು ಏಕಾಗುತ್ತಿಲ್ಲ ಎಂದು ಪ್ರಶ್ನಿಸಿದೆ. ಆತನದ್ದು ಫೋರ್ಜರಿ ಮಾಡಿದ ಪಾಸ್‌ಪೋರ್ಟ್ ಎನ್ನಲಾಗುತ್ತಿದೆ. ಈ ಬಗ್ಗೆ ತನಿಖೆ ಮುಗಿಸಲು ನಿಮಗೆ ಇನ್ನೆಷ್ಟು ವರ್ಷ ಬೇಕು, ಏಕೆ ಅದನ್ನು ಸಿಬಿಐಗೆ ಒಪ್ಪಿಸಬಾರದು?- ಇವು ಸುಪ್ರಿಂ ಕೋರ್ಟಿನ ಇನ್ನಷ್ಟು ಪ್ರಶ್ನೆಗಳು.



ಕೃಪೆ : ದಿ ಹಿಂದೂ


ಸುಪ್ರಿಂ ಕೋರ್ಟ್ ಹೇಳಿದ್ದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ ಎಂದಷ್ಟೇ ಯುಪಿಎ-2 ಹಣಕಾಸು ಮಂತ್ರಿಗಳು ಹೇಳಲು ಸಾಧ್ಯವಾಗಿರುವುದು. ಅವರ ಇತ್ತೀಚಿನ ಬಜೆಟ್ ಕೂಡ ಯುಪಿಎ-2 ಸರಕಾರಕ್ಕೆ ನಿಜವಾಗಿಯೂ ಕಪ್ಪು ಹಣವನ್ನು ಹೊರ ತೆಗೆಯುವ ಇಚ್ಛೆಯೇ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ಬಜೆಟಿನಲ್ಲಿ ಈ ಪ್ರಶ್ನೆಯ ಪ್ರಸ್ತಾಪವಿದ್ದರೂ ಅದನ್ನು ಎದುರಿಸುವ ನಿರ್ದಿಷ್ಟ ಕ್ರಮಗಳ ಪ್ರಸ್ತಾಪವೇ ಇಲ್ಲ. ಮಾರಿಶಸ್‌ನೊಂದಿಗೆ ಮಾಡಿಕೊಂಡಿರುವ ಡಿಟಿಎಎ(ಎರಡೂ ದೇಶಗಳಲ್ಲಿ ತೆರಿಗೆ ಹಾಕದಿರುವ ಒಪ್ಪಂದ)ದಿಂದಾಗಿ ಅದು ಬಹುರಾಷ್ಟ್ರೀಯ ಕಂಪೆನಿಗಳಿಗೆ, ಭಾರತೀಯ ಕಾರ್ಪೊರೇಟ್ ವಲಯಕ್ಕೂ ತೆರಿಗೆ ವಂಚನೆಯ ಅತಿ ದೊಡ್ಡ ಮಾರ್ಗವಾಗಿದೆ; ದೇಶದೊಳಕ್ಕೆ ಬರುವ ವಿದೇಶಿ ನೇರ ಹೂಡಿಕೆಯಲ್ಲಿ ಶೇ.42 ಮಾರಿಶಸ್ ಮಾರ್ಗವಾಗಿಯೇ ಬರುತ್ತಿದೆ. ಆದರೂ ಸರಕಾರ ಬೇರೆ ದೇಶಗಳೊಂದಿಗೂ ಇಂತಹುದೇ ಒಪ್ಪಂದ ಮಾಡಿಕೊಳ್ಳುತ್ತಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಈ ವರ್ಷದ ಬಜೆಟ್ ಕುರಿತ ವಿಮರ್ಶೆಯಲ್ಲಿ ಈಗಾಗಲೇ ಗಮನ ಸೆಳೆದಿದೆ.

★

ಯುಪಿಎ-2 ಜಟಾಪಟಿ: ಜನಗಳ ಪ್ರಶ್ನೆಗಳ ಮೇಲಲ್ಲ

ಐದು ರಾಜ್ಯಗಳಲ್ಲಿ ಉಪಚುನಾವಣೆಗಳ ಘೋಷಣೆಯಾಗುತ್ತಿದ್ದಂತೆ ಯುಪಿಎ-2ರೊಳಗೆ ಸೀಟು ಹಂಚಿಕೆಯ ವಿಷಯದಲ್ಲಿ ಜಟಾಪಟಿ ಆರಂಭವಾಗಿದೆ. ತಮಿಳುನಾಡಿನಲ್ಲಿ ಇನ್ನೇನು ಯುಪಿಎ ಕುಸಿದು ಬಿದ್ದಿದೆ ಎಂಬ ಹಂತ ತಲುಪಿತ್ತು. ಕಳೆ ಬಾರಿ 48 ಸ್ಥಾನಗಳಿಗೆ ಸ್ಪರ್ಧಿಸಿದ್ದ ಕಾಂಗ್ರೆಸ್ ಈ ಬಾರಿ 63 ಸೀಟುಗಳಿಗೆ, ಅದು ಕೂಡ ತನ್ನ ಆಯ್ಕೆಯ 63ಕ್ಕೆ ಪಟ್ಟು ಹಿಡಿದದ್ದು ಕಾಂಗ್ರೆಸ್ ಪಕ್ಷ ತಮ್ಮನ್ನು ಯುಪಿಎ ಯಿಂದ ಹೊರದಬ್ಬುವ ಪ್ರಯತ್ನ ಎಂದ ಡಿಎಂಕೆ ಯುಪಿಎ-2 ಸರಕಾರದಲ್ಲಿದ್ದ ತಮ್ಮ ಮಂತ್ರಿಗಳು ರಾಜೀನಾಮೆ ನೀಡಿ 'ಹೊರಗಿನಿಂದ ಬೆಂಬಲಿಸುವ' ಬೆದರಿಕೆ ಹಾಕಿತು. ಡಿಎಂಕೆ ತಾನು ಯುಪಿಎ-2 ರಲ್ಲಿ ಮೂರನೇ

ಪುಟ 15 ಕ್ಕೆ



ಯುಪಿಎ ಸರಕಾರದ 'ಕಾರ್ಪೊರೇಟ್ ಸಮಾಜವಾದ'
ಕಾರ್ಪೊರೇಟ್ ತೆರಿಗೆ ವಿನಾಯ್ತಿ=ವಿದೇಶಿ ಬ್ಯಾಂಕುಗಳತ್ತ ಕಪ್ಪು ಹಣ

ಪ್ರತಿದಿನ ಯುಪಿಎ-2 ಸರಕಾರ ಸಂಗ್ರಹಿಸಬೇಕಾದ 240ಕೋಟಿ ರೂ. ಕಾರ್ಪೊರೇಟ್ ಆದಾಯ ತೆರಿಗೆಗಳನ್ನು ಬಿಟ್ಟುಕೊಡುತ್ತಿದೆ ಎಂಬುದು ಬಜೆಟಿನಲ್ಲಿ ಪ್ರಕಟಿಸಿದ ಅಂಕಿ-ಅಂಶಗಳಿಂದ ಲೆಕ್ಕ ಹಾಕಿದಾಗ ಕಾಣುವ ಸಂಗತಿ. ವಿಚಿತ್ರವೆಂದರೆ, ಪ್ರತಿದಿನ ಸರಿ ಸುಮಾರು ಇಷ್ಟೇ ಹಣ ಕಳ್ಳತನದಿಂದ ವಿದೇಶಿ ಬ್ಯಾಂಕುಗಳಿಗೆ ಹರಿದು ಹೋಗುತ್ತಿದೆ ಎಂದು ವಾಶಿಂಗ್ಟನ್ನಿನ ಗ್ಲೋಬಲ್ ಫಿನಾನ್ಶಿಯಲ್ ಇಂಟೆಗ್ರಿಟಿ(ಜಾಗತಿಕ ಹಣಕಾಸು ಸಮಗ್ರತೆ) ಸಂಸ್ಥೆ ಲೆಕ್ಕ ಹಾಕಿದೆ ಎನ್ನುತ್ತಾರೆ ಪ್ರಸಿದ್ಧ ಪತ್ರಕರ್ತ ಪಿ. ಸಾಯಿನಾಥ್. ಇದನ್ನು ಕಾರ್ಪೊರೇಟ್ ಸಮಾಜವಾದ ಎನ್ನುವ ಅವರು 2ಜಿ ಹಗರಣ ಅದರ ಲಂಪಟತನದ ಪ್ರತೀಕ ಎಂದು ವರ್ಣಿಸುತ್ತಾರೆ.

ಕಳೆದ ಆರು ವರ್ಷಗಳಲ್ಲಿ ಯುಪಿಎ(1 ಮತ್ತು 2) ಸರಕಾರ ಕೇವಲ ಕಾರ್ಪೊರೇಟ್ ತೆರಿಗೆ ಬಾಬ್ತಿನಲ್ಲೇ 3,74,937 ಕೋಟಿ ರೂ.ಗಳನ್ನು ಬಿಟ್ಟು ಕೊಟ್ಟಿದೆ. ಇದು 2ಜಿ ಹಗರಣದಲ್ಲಿ ಅದು ಮಾಡಿಕೊಂಡ ನಷ್ಟದ ದುಪ್ಪಟ್ಟು. ಕಳೆದ ಆರು ವರ್ಷಗಳಲ್ಲಿ ಈ ರೀತಿ ಸರಕಾರ ತನ್ನ ಬೊಕ್ಕಸದಿಂದ ದೇಶದ ಬಂಡವಾಳಶಾಹಿಗಳಿಗೆ ನೇರವಾಗಿ ಕೊಡಮಾಡಿದ ಇಂತಹ ಹಣದಲ್ಲಿ 155 ಶೇ. ಹೆಚ್ಚಳವಾಗಿದೆ. ಇನ್ನು ಅಬಕಾರಿ ತೆರಿಗೆ ಮತ್ತು ಸೀಮಾಸುಂಕಗಳಲ್ಲಿ ಇದೇ ವಿಭಾಗಗಳಿಗೆ ಕೊಡಮಾಡಿದ ಹಣದ ಮೊತ್ತ 17,50,086(=7,49,623- 10,00,463) ಕೋಟಿ ರೂ. ಈ ಎಲ್ಲಾ ಬಾಬ್ತುಗಳಲ್ಲಿ ದೇಶದ ಅತಿ ಶ್ರೀಮಂತ ವಿಭಾಗಗಳಿಗೆ ದೇಶದ ಬೊಕ್ಕಸದಿಂದ ದಕ್ಕಿದ ಮೊತ್ತ ಕಳೆದ ಆರು ವರ್ಷಗಳಲ್ಲಿ ದ್ವಿಗುಣಗೊಂಡಿದೆ. ಯುಪಿಎ ಸರಕಾರದ ಕಳೆದ ಆರು ವರ್ಷಗಳಲ್ಲಿ ಈ ಅತಿ ಶ್ರೀಮಂತರಿಗಾಗಿ ಬಿಟ್ಟುಕೊಟ್ಟ ಮೊತ್ತಗಳ(ಕೋಟಿ ರೂ.ಗಳಲ್ಲಿ) ಒಂದು ಚಿತ್ರವನ್ನು ಸಾಯಿನಾಥ್ ಅವರು ಕಳೆದ ಆರು ಬಜೆಟುಗಳಿಂದ ಕಲೆ ಹಾಕಿರುವ ಈ ಕೋಷ್ಟಕ ಕೊಡುತ್ತದೆ:

ವರ್ಷ	ಕಾರ್ಪೊರೇಟ್ ಆದಾಯತೆರಿಗೆ	ಅಬಕಾರಿಸುಂಕ	ಸೀಮಾಸುಂಕ	ಒಟ್ಟು
2005-06	34,618	66,760	1,27,730	2,29,108
2006-07	50,075	99,690	1,23,682	2,73,447
2007-08	62,199	87,468	1,53,593	3,03,260
2008-09	66,901	1,28,293	2,25,752	4,20,946
2009-10	7,28,881	1,69,121	1,95,288	4,37,290
2010-11	88,263	1,98,291	1,74,418	4,60,972
ಆರು ವರ್ಷಗಳಲ್ಲಿ ಬಿಟ್ಟುಕೊಟ್ಟ ಒಟ್ಟು ರೆವಿನ್ಯೂ	3,74,937	7,49,623	10,00463	21,25,023
2005-06ಕ್ಕಿಂತ 2010-11ರಲ್ಲಿ ಶೇ. ಹೆಚ್ಚಳ	155.0	197.0	36.6	101.2


ಜನಶಕ್ತಿ ಕನ್ನಡ ವಾರಪತ್ರಿಕೆ

ಮಹಿಳಾ ವಿಮೋಚನೆಗೆ ದಾರಿ ಯಾವುದು?

ಪುಟ 2 ರಿಂದ

ಕಡಿಮೆ ಇರಲಿಲ್ಲ.

ಮಹಿಳೆಯರ ಮೇಲೆ ಅಧಿಪತ್ಯ ಸಾಧಿಸಬೇಕು ಮತ್ತು ನಿಯಂತ್ರಿಸಬೇಕೆಂಬ ಪುರುಷರ ಒತ್ತಾಸೆಯೇ



ಮಹಿಳೆಯರ ತುಳಿತಕ್ಕೆ ಕಾರಣವೆಂದು ಗುರುತಿಸುವ ವಾದವನ್ನು ಸ್ತ್ರೀವಾದಿಗಳು ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಮಹಿಳೆಯರ ಎಲ್ಲಾ ರೀತಿಯ ತುಳಿತಗಳನ್ನು ವರ್ಗಾತೀತವಾಗಿ ಎಲ್ಲಾ ಮಹಿಳೆಯರು ಒಂದಾಗುವ ಮೂಲಕ ಕೊನೆಗಾಣಿಸಬಹುದಂತೆ. ಅಂದರೆ ಮಹಿಳಾ ಕಾರ್ಮಿಕರು ಮತ್ತು ಮಹಿಳಾ ಮಾಲೀಕರು, ಮಹಿಳಾ ಕೃಷಿ ಕೂಲಿಕಾರರು ಮತ್ತು ಮಹಿಳಾ ಭೂ ಮಾಲೀಕರು ಎಲ್ಲಾ ಪುರುಷರ ವಿರುದ್ಧ-ಪುರುಷ ಕಾರ್ಮಿಕರು ಮತ್ತು ಪುರುಷ ಮಾಲೀಕರು ಹಾಗೂ ಪುರುಷ ಕೂಲಿಕಾರರು ಮತ್ತು ಪುರುಷ ಭೂ ಮಾಲೀಕರ ವಿರುದ್ಧ ಒಂದಾಗಬೇಕಾಗುತ್ತದೆ.

ಈ ವಾದವು ದೋಷಪೂರಿತವಾಗಿದೆ. ಏಕೆಂದರೆ ಮಹಿಳಾ ಕಾರ್ಮಿಕರ ಮತ್ತು ಮಹಿಳಾ ಮಾಲೀಕರ ಹಿತಾಸಕ್ತಿಗಳು ಒಂದಾಗಿರಲು ಸಾಧ್ಯವಿಲ್ಲ. ಅಂತೆಯೇ ಅಸಂಘಟಿತ ವಲಯದಲ್ಲಿನ ವಿಶಾಲ ಬಹುಸಂಖ್ಯಾತ ಮಹಿಳಾ ಕಾರ್ಮಿಕರ ಹಾಗೂ ಬೃಹತ್ ಸಂಸ್ಥೆಗಳ ಆಡಳಿತದಲ್ಲಿರುವ ಮಹಿಳೆಯರ ಹಿತಾಸಕ್ತಿಗಳು ಒಂದೇ ಆಗಿರಲು ಅಥವಾ ಸಮಾನವಾಗಿರಲು ಸಾಧ್ಯವಿಲ್ಲ.

ಐಕ್ಯ ಚಳುವಳಿಯಿಂದ ಉತ್ತಮ ಪರಿಸ್ಥಿತಿ

ಮಹಿಳಾ ಕಾರ್ಮಿಕರು ಉತ್ತಮ ಪರಿಸ್ಥಿತಿಗಾಗಿ ಪುರುಷ ಕಾರ್ಮಿಕರೊಂದಿಗೆ ಸೇರಿ ಹೋರಾಟ ನಡೆಸಿದ ಸಂದರ್ಭದಲ್ಲಿ ಆಳುವ ವರ್ಗಕ್ಕೆ ಸೇರಿದ ಮಹಿಳೆಯರು ಆಳುವ ವರ್ಗದ ಪುರುಷರೊಂದಿಗೆ ಜೊತೆಗೂಡಿ ಮಹಿಳಾ ಕಾರ್ಮಿಕರ ಮೇಲೆ ಬರ್ಭರ ದಾಳಿ ನಡೆಸಿರುವ ಅಸಂಖ್ಯಾತ ಉದಾಹರಣೆಗಳನ್ನು ಇತಿಹಾಸದಲ್ಲಿ ಕಾಣಬಹುದಾಗಿದೆ. "ಶೋಷಿತರ ಮತ್ತು ಶೋಷಕರ, ದಮನಿತರ ಮತ್ತು ದಮನಿಸುವವರ ನಡುವೆ ಸಮಾನತೆ ಇಲ್ಲ, ಇರಲು ಸಾಧ್ಯವೂ ಇಲ್ಲ. ಎಲ್ಲಿಯವರೆಗೆ ಮಹಿಳೆಯರು ಪುರುಷರ ಕಾನೂನಾತ್ಮಕ ಸೌಲಭ್ಯಗಳಿಂದಾಗಿ ಅಂಗವೈಕಲ್ಯ ರಾಗಿರುತ್ತಾರೋ ಅಲ್ಲಿಯವರೆಗೂ ಕಾರ್ಮಿಕನಿಗೆ ಬಂಡವಾಳದ ಕಪಿಮುಷ್ಟಿಯಿಂದ ನಿಜವಾದ ಸ್ವಾತಂತ್ರ್ಯವಿಲ್ಲ, ಇರಲೂ ಸಾಧ್ಯವಿಲ್ಲ. ಅಲ್ಲಿಯವರೆಗೆ ಬಂಡವಾಳಶಾಹಿ, ಭೂ ಒಡೆಯ ಮತ್ತು ವ್ಯಾಪಾರಿಯಿಂದ ದುಡಿಯುವ ರೈತನಿಗೆ ಸ್ವಾತಂತ್ರ್ಯವಿಲ್ಲ" ಎಂದು ಕಾರ್ಮಿಕ ವರ್ಗದ ಅತ್ಯುನ್ನತ ಶಿಕ್ಷಕರಾದ ಲೆನಿನ್ ಹೇಳಿದ್ದಾರೆ.

ಆಸ್ತಿ ಹಕ್ಕುಗಳ ಬೆಳವಣಿಗೆ ಮತ್ತು ಸಂಪತ್ತಿನ ಹೆಚ್ಚಳದಿಂದಾಗಿಯೇ ಪುರುಷನು ಕುಟುಂಬದಲ್ಲಿ ಮಹಿಳೆಗಿಂತ ಹೆಚ್ಚು ಪ್ರಮುಖ ಸ್ಥಾನ ಪಡೆದನು ಎಂಬುದನ್ನು ವಿವಿಧ ಸಮಾಜಗಳಲ್ಲಿನ ಬದಲಾವಣೆಗಳಲ್ಲಿ ಮಹಿಳೆಯರ ಪಾತ್ರವನ್ನು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿದ ಆಧಾರದ ಮೇಲೆ ಏಂಗಲ್ಸ್ ಸಾಬೀತುಪಡಿಸಿದ್ದಾರೆ.

ಆಸ್ತಿ ಮತ್ತು ಉತ್ತರಾಧಿಕಾರ ಹಕ್ಕುಗಳ ಪರಿಣಾಮವಾಗಿ ಮಹಿಳೆಯರು ಸಮಾನತೆಯನ್ನು ಕಳೆದುಕೊಂಡು ದಮನದ ಬಲಿಪಶುಗಳಾದರೂ ಎಂಬುದನ್ನು ಏಂಗೆಲ್ಸ್ ತಮ್ಮ ಪ್ರಖ್ಯಾತ ಪುಸ್ತಕವಾದ "ಕುಟುಂಬದ ಉಗಮ-ಖಾಸಗೀ ಆಸ್ತಿ ಮತ್ತು ಪ್ರಭುತ್ವ"ದಲ್ಲಿ ವಿವರಿಸಿದ್ದಾರೆ. ಮಹಿಳೆಯ ಗುಲಾಮಗಿರಿಯ ಐತಿಹಾಸಿಕವಾಗಿ ಖಾಸಗೀ ಆಸ್ತಿ ಸಂಬಂಧಗಳ ಬೆಳವಣಿಗೆಯ ಪರಂಪರೆಯಾಗಿದೆ.

ಈಗಲೂ ಸಹಾ ಮುಂದುವರೆದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾಗದದ ಮೇಲಿನ ಸಮಾನತೆಯ ಘೋಷಣೆಗಳ ನಡುವೆಯೂ ಮಹಿಳೆಯರ ಅಸಮಾನತೆ ಮುಂದುವರೆದಿರಲು ಇದುವೇ ಮೂಲಭೂತ ಕಾರಣವಾಗಿದೆ. "ಬಂಡವಾಳಶಾಹಿಯು ಔಪಚಾರಿಕ ಸಮಾನತೆಯೊಂದಿಗೆ ಆರ್ಥಿಕ ಮತ್ತು ಅದರ ಪರಿಣಾಮದಿಂದಾಗುವ ಸಾಮಾಜಿಕ ಅಸಮಾನತೆಯನ್ನು ಜೋಡಿಸುತ್ತದೆ...." ಎಂದು 1920ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನದಂದು ಲೆನಿನ್ ಬರೆದಿದ್ದಾರೆ.

ಔಪಚಾರಿಕ ಸಮಾನತೆಯಲ್ಲಿಯೂ ಸಹಾ (ಕಾನೂನಿನ ಮುಂದೆ ಸಮಾನರು ಎಂಬುವಿದರಲ್ಲಿಯೂ ಹೊಟ್ಟೆ ತುಂಬಿದ ಮತ್ತು ಹಸಿದ ಮನುಷ್ಯರ ನಡುವಿನ, ಆಸ್ತಿವಂತ ಹಾಗೂ ಆಸ್ತಿಹೀನ ಮನುಷ್ಯ ನಡುವಿನ ಸಮಾನತೆ ವಿಚಾರದಲ್ಲಿ) ಬಂಡವಾಳಶಾಹಿಯು ದೃಢ ವಾಗಿರುವುದಿಲ್ಲ. ಮಹಿಳೆಯರು ಮತ್ತು ಪುರುಷರ ನಡುವಿನ ಅಸಮಾನತೆಯೇ ಇದಕ್ಕೊಂದು ಉತ್ತಮ ಉದಾಹರಣೆ. ಸಮಾಜವಾದಿ ಸ್ಥಾಪನೆಯಾದ ಸೋವಿಯತ್ ರಷ್ಯಾದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನಗಳನ್ನು ಕೇವಲ ಕಾಗದದ ಮೇಲೆ ಮಾತ್ರ ನೀಡದೆ ಪ್ರಾಯೋಗಿಕವಾಗಿಯೂ ಸಹ ನಾಗರೀಕ ಸಮಾಜದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ನೀಡಲಾಗಿತ್ತು. ರಷ್ಯಾ ಮತ್ತು ಪೂರ್ವ ಯೂರೋಪಿನ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ಆದ ಹಿನ್ನೆಡೆಯಿಂದಾಗಿ ಆಯಾಯ ದೇಶಗಳಲ್ಲಿನ ಮಹಿಳೆಯರು ಮತ್ತೆ ತಮ್ಮ ಸ್ಥಾನಮಾನವನ್ನು ಕಳೆದುಕೊಂಡಿದ್ದಾರೆ. ಐಎಂಎಫ್, ವಿಶ್ವಬ್ಯಾಂಕ್ ಮತ್ತು ಡಬ್ಲ್ಯೂಟಿಓ ಹೇರಿರುವ ಜಾಗತೀಕರಣದ ನವ ಉದಾರವಾದಿ ನೀತಿಗಳು ಕಾರ್ಮಿಕವರ್ಗದ ಮೇಲೆ ಅಪಾರ ಹೊರೆಯನ್ನು ಹೊರಿಸಿವೆ. ಈ ನೀತಿಗಳಿಂದಾಗಿ ಹೆಚ್ಚು ಆಭಾದಿತರಾಗಿರುವವರು ದುಡಿಯುವ ಮಹಿಳೆಯರು. ಕಷ್ಟಪಟ್ಟು ಗಳಿಸಿದ ಕಾರ್ಮಿಕವರ್ಗದ ಹಕ್ಕುಗಳಾದ 8 ಗಂಟೆಗಳ ಕೆಲಸ, ಕನಿಷ್ಟ ವೇತನ, ಸಾಮಾಜಿಕ ಭದ್ರತಾ ಸೌಲಭ್ಯಗಳು, ಸೇವಾ ಭದ್ರತೆ ಮುಂತಾದವುಗಳೆಲ್ಲಾದರ ಮೇಲೂ ನಿರಂತರ ದಾಳಿ ನಡೆದಿದೆ. ಅಂತೆಯೇ ದುಡಿಯುವ ಮಹಿಳೆಯರು ಕಷ್ಟಪಟ್ಟು ಗಳಿಸಿದ ಹಕ್ಕುಗಳಾದ ಹೆರಿಗೆ ಸೌಲಭ್ಯ, ಶಿಶುಪಾಲನಾ ಕೇಂದ್ರದ ವ್ಯವಸ್ಥೆ, ಸಮಾನ ವೇತನ ಮುಂತಾದವುಗಳು ಸಹಾ ದಾಳಿಗೆ ಒಳಪಟ್ಟಿವೆ.

ದಾರಿ ಯಾವುದು?

ಬಂಡವಾಳಶಾಹಿ ರಾಷ್ಟ್ರಗಳ ಮಾಲೀಕರು ಕಾರ್ಮಿಕರಿಗೆ ಕೆಲವು ಸೌಲಭ್ಯಗಳನ್ನು ನೀಡುವಂತೆ ಮಾಡಿದ್ದ ಬಲಿಷ್ಟ ಸಮಾಜವಾದಿ ಬಣವು ಇಂದು ಇಲ್ಲದಿರುವ ಕಾರಣ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಮಾಲೀಕರು ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸಿದ್ದಾರೆ. ರಾಷ್ಟ್ರಗಳ ಒಳಗೆ ಮತ್ತು ನಡುವೆ ಅಸಮಾನತೆಯೂ ಹೆಚ್ಚುತ್ತಿದೆ. ಅಸಮಾನತೆಯನ್ನು ಮುಂದುವರೆಸುವ ಜಾಗತೀಕರಣದ ನವಉದಾರವಾದಿ ನೀತಿಗಳು ಜಾರಿಯಲ್ಲಿ ಇರುವವರೆಗೆ ಮಹಿಳಾ ಸಮಾನತೆಯನ್ನು ಸಾಧಿಸಲು ಸಾಧ್ಯವಿಲ್ಲ. ಶೋಷಣೆ ಮತ್ತು ಅಸಮಾನತೆಗಳು ಅಂತರ್ಗತವಾಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಸೋಲಿಸುವವರೆಗೆ ಮಹಿಳೆಯರ ನಿಜವಾದ ಸಮಾನತೆ ಸಾಧ್ಯವಿಲ್ಲ. ಅಂತರಾಷ್ಟ್ರೀಯ ಮಹಿಳಾ ದಿನದ 101ನೇ ವಾರ್ಷಿಕೋತ್ಸವವನ್ನು ಆಚರಿಸುವಾಗ ಕಾರ್ಮಿಕ ವರ್ಗದ ಐಕ್ಯತೆಯನ್ನು ಬಲಪಡಿಸಲು ಪಣತೊಡೋಣ. ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡ ಸಮಸ್ತ ಕಾರ್ಮಿಕರ ಐಕ್ಯತೆ ಸಾಧಿಸಿ ಮಹಿಳೆಯರ ನಿಜವಾದ ವಿಮೋಚನೆಗೆ ದಾರಿ ಮಾಡಿಕೊಡಲು ಶೋಷಕ ವ್ಯವಸ್ಥೆಯನ್ನು ಸೋಲಿಸಲು ಹೋರಾಡಲು ಕಟಿಬದ್ಧರಾಗೋಣ.

ಅನು: **ಕೆ.ಎನ್.ಉಮೇಶ್**



ನಿಕೃಷ್ಟ ಕೆಲಸದ ಪರಿಸ್ಥಿತಿ ಹಾಗೂ ಸೌಲಭ್ಯಗಳ ವಿರುದ್ಧ ಜೀವನ ಭದ್ರತೆಗಾಗಿ ಆಗ್ರಹಿಸಿ ಬೆಂಗಳೂರಿನಲ್ಲಿ ಸಿಐಟಿಯು ನೇತೃತ್ವದಲ್ಲಿ ನಡೆದ ಆಶಾ ಕಾರ್ಯಕರ್ತೆಯರ ಬೃಹತ್ ಪ್ರತಿಭಟನೆ. ವರದಿ ನಿರೀಕ್ಷಿಸಿ.

ಜನಶಕ್ತಿ ನೂತನ ಕಾರ್ಯಾಲಯ ನಿಧಿ ಮನವಿ



'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ನೂತನ ಕಾರ್ಯಾಲಯವನ್ನು ಸರ್ವ ಸಜ್ಜುಗೊಳಿಸುವ ಸಂದರ್ಭದಲ್ಲಿ ಉದಾರ ಕೊಡುಗೆಗೆ ಈ ಮೂಲಕ ಮಾಡಲಾದ ಮನವಿಗೆ 'ಜನಶಕ್ತಿ'ಯ ಓದುಗ ಬಳಗದಿಂದ ಸ್ಪಂದನೆ ಆರಂಭವಾಗಿದೆ.

ನಿಧಿಗೆ ಕಾಣಿಕೆ ನೀಡುವ ಸಂಗಾತಿಗಳ ಹೆಸರು ಮತ್ತು ವಿವರವನ್ನು ಕೃತಜ್ಞತೆಗಳೊಂದಿಗೆ ಇಲ್ಲಿ ಪ್ರಕಟಿಸಲಾಗುತ್ತದೆ. ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕಾರ್ಯಾಲಯವನ್ನು ವ್ಯವಸ್ಥಿತವಾಗಿ ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ಸ್ಪಂದನೆ ದೊರೆಯುತ್ತದೆಂದು ನಿರೀಕ್ಷಿಸುತ್ತೇವೆ.

ಸೂಚನೆಗಳು : ತಾವು ತಮ್ಮ ತಮ್ಮ ಊರುಗಳಿಂದಲೇ ನೇರವಾಗಿ ಜನಶಕ್ತಿಯ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಬಹುದು. ಖಾತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಗಮನಿಸುವುದು.

ಜನಶಕ್ತಿ ಕನ್ನಡ ವಾರ ಪತ್ರಿಕೆ - **ಅಕೌಂಟ್ ನಂ. 64020446625**
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಂಪಂಗಿರಾಮನಗರ ಶಾಖೆ, ಬೆಂಗಳೂರು-560027
ಬ್ಯಾಂಕ್ ಖಾತೆಗೆ ಹಣ ತುಂಬಿದಲ್ಲಿ, ಅಥವಾ ಕಛೇರಿಗೆ ಡಿ.ಡಿ. ಅಥವಾ ಎಂ.ಓ. ಕಳಿಸಿದಲ್ಲಿ ತಪ್ಪದೇ ಈ ಕೆಳಕಂಡ ದೂರವಾಣಿ ನಂಬರುಗಳಿಗೆ ಫೋನ್ ಮಾಡಿ ತಿಳಿಸುವುದು.
ಆರ್. ರಾಮಕೃಷ್ಣ - 9448505789 ಎಚ್.ಎಂ.ನಾಗರಾಜ್ - 9482220931

ಜನಶಕ್ತಿ ನೂತನ ಕಾರ್ಯಾಲಯದ ಸಂಪರ್ಕ ವಿಳಾಸ.
'ಜನಶಕ್ತಿ ಕನ್ನಡ ವಾರಪತ್ರಿಕೆ' ಕಛೇರಿ. ಇ.ಎಂ.ಎಸ್. ಭವನ, ನಂ.37/ಎ, 8 ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಸಮೀಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560086.

- ಸಂ.

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿಶ್ವಕನ್ನಡ ಸಮ್ಮೇಳನವೋ...

ಪುಟ 3 ರಿಂದ

ವಿಜ್ಞಾನಿಗಳು, ತಂತ್ರಜ್ಞರು, ವೈದ್ಯರು, ಕೃಷಿಕರು, ಕಾರ್ಮಿಕರು ಹೀಗೆ ನೂರಾರು ಗಣ್ಯರು ಕರ್ನಾಟಕದ ಕೀರ್ತಿಯನ್ನು ವಿಶ್ವದಂಚಿಗೆ, ಕೊಂಡೊಯ್ದು ಕೊಡುಗೆ ನೀಡಿದವರಿಗೆ ಬರವಿಲ್ಲ. ಆದರೆ ಕರ್ನಾಟಕದ ನೆಲ, ಜಲ, ಸೌಲಭ್ಯಗಳನ್ನೇ ಆಧಾರವಾಗಿಟ್ಟುಕೊಂಡು ಬೌದ್ಧಿಕ, ದೈಹಿಕ ಶ್ರಮದ ವ್ಯಾಪಾರ ನಡೆಸಿ ಲಾಭ ಗಿಟ್ಟಿಸುವ ನಾರಾಯಣ ಮೂರ್ತಿಯವರನ್ನೇ ಆಯ್ಕೆ ಮಾಡಿರುವುದರ ಔಚಿತ್ಯವೇನು?

ಅವರು ಮೇಲ್ಜಾತಿ ಮೇಲ್ವರ್ಗದ ಹಿನ್ನೆಲೆ ಇರುವವರು ಇದಕ್ಕೂ ಮುಖ್ಯವಾಗಿ ಉದ್ಯಮಿಗಳು. ಇಂತಹ ಉದ್ಯಮಿಗಳನ್ನು ಓಲೈಸುವ ಸಲುವಾಗಿಯೇ ಬಂಡವಾಳ ಸ್ನೇಹಿ ಬಿಜೆಪಿ ಸರ್ಕಾರ ಅವರನ್ನೇ ಆರಿಸಿದೆ. ಅಂತಹ ಆಕ್ಷೇಪಗಳು ಬಂದಾಗ ಓಟಿನ ಆಶೆಯಲ್ಲಾದರೂ ಒಬ್ಬ ಸಾಮಾನ್ಯ ಕೃಷಿಕನನ್ನೋ, ಕೂಲಿಕಾರ ಶ್ರಮಜೀವಿಯನ್ನೋ, ಮಹಿಳೆಯನ್ನೋ ಆರಿಸಿದ್ದರೆ ಕನಿಷ್ಟ ನಿಕೃಷ್ಟ ಸ್ಥಿತಿಯಲ್ಲಿರುವವರಿಗೆ ಒಂದು ಗುರುತು ಸಿಕ್ಕಂತಾಗುತ್ತಿತ್ತು. ಆದರೆ ಇಂತಹ ಆಯ್ಕೆಗೆ ಕೇವಲ ಸರ್ಕಾರ ಅಥವಾ ಬಿಜೆಪಿಯ ವಿರೋಧ ಮಾತ್ರವಲ್ಲ. ಮೂಲಭೂತವಾಗಿ ಆರ್.ಎಸ್.ಎಸ್.ನ ಕಡುವಿರೋಧವಿದೆ. ನಾಡು ಕಟ್ಟುವವರು ಉದ್ಯಮಿಗಳೇ ಅಥವಾ ಶ್ರಮಿಕರೇ ವೆಂಬುವಲ್ಲಿ ತಾತ್ವಿಕ ಘರ್ಷಣೆಗಳಿವೆ. ಚಾತುರ್ವರ್ಣ್ಯದ ಹಿರಿಮೆಯನ್ನೇ ಎತ್ತಿ ಹಿಡಿಯುವ ಬೌದ್ಧಿಕತೆಯೇ ಪರಮೋಚ್ಚ, ಶ್ರಮ ನಿಕೃಷ್ಟವೆಂದೆಲ್ಲಾ ಆರ್‌ಎಸ್‌ಎಸ್ ಪ್ರತಿಪಾದಿಸುತ್ತದೆ. ಶ್ರಮವನ್ನು, ಶ್ರಮಿಕರನ್ನು ಗುರುತಿಸುವುದಿಲ್ಲ. ಬದಲಾಗಿ ದುಡಿತದ ಪರಿಣಾಮದ ಫಲಾನುಭವಿಗಳಾದ ಉದ್ಯಮಿಗಳನ್ನೇ ಆಧರಿಸುವಲ್ಲಿ ಅದರ ಮೇಲ್ವರ್ಗದ, ಮೇಲ್ಜಾತಿಯ, ಅಸಮಾನತೆಯ ಶೋಷಕ ವ್ಯವಸ್ಥೆಯ ಸಮರ್ಥನೆಯಿದೆ. ಆದ್ದರಿಂದಲೇ ಯಾವುದೇ ಭಿನ್ನ ಅಭಿಪ್ರಾಯವನ್ನೂ ಕನಿಷ್ಟ ಪರಿಗಣಿಸದೇ ಬುಲ್ಡೋಜ್ ಹೊಡೆಯುವಲ್ಲಿ 'ಸಂಘ'ದ್ದೇ ಮೇಲುಗೈ.

ಮೂರ್ತಿಯವರೇ ಯಾಕೆ?

ನಾರಾಯಣ ಮೂರ್ತಿಯವರು ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಯಶಸ್ವಿ ಉದ್ಯಮಿಗಳಾಗಿರಬಹುದು. ಆದರೆ ನಾಡು, ನುಡಿಗೆ ಕನ್ನಡ ಸಂಸ್ಕೃತಿಗೆ ಅವರ ಕೊಡುಗೆ ಅತ್ಯಂತ ಸೀಮಿತ. ಅಷ್ಟಿಷ್ಟು ಕಾಳಜಿ ತೋರಿಸಿದ್ದರೆ ಅದೂ ಲಾಭೋದ್ಯಮವಾದಾಗ ಮಾತ್ರ. ಕನ್ನಡಿಗರಿಗೆ ಅಲ್ಲಿ ಉದ್ಯೋಗದಲ್ಲಿ ಪ್ರಾಧ್ಯಾನ್ಯತೆಯಿಲ್ಲ. ಕನ್ನಡ ಭಾಷೆಗೆ ಬೇಕಿರುವ ತಂತ್ರಾಂಶವನ್ನು ರೂಪಿಸಲು ಅವರು ಎಂದೂ ಕಾಳಜಿ ತೋರಿದವರೇ ಅಲ್ಲ. ಭಾಷಾ ಪ್ರಶ್ನೆಬಂದರೆ ಇಂಗ್ಲಿಷ್ ಆರಾಧಕರು, ಅದನ್ನೇ ಶಿಕ್ಷಣದ ಮಾಧ್ಯಮವಾಗಬೇಕೆಂದು ಹಠ ಹಿಡಿದು ವಾಧಿಸಿದವರು. ಸಮಗ್ರ ಕರ್ನಾಟಕದ ಸಾಧನೆಗಳನ್ನು ಭರ್ಜರಿಯಾಗಿ ಬಳಸಿಕೊಂಡು ಜಗತ್ತಿನ ಇತರೆ ದೇಶಗಳಿಗೆ ಬಂಡವಾಳ ಹಾಯಿಸುವ ಉತ್ಕಟೇಚ್ಛೆ ಹೊಂದಿರುವ ಮೂರ್ತಿಯವರು, ಬೆಂಗಳೂರು ರಾಜಧಾನಿಯನ್ನೇ ಕರ್ನಾಟಕದಿಂದ ಬೇರ್ಪಡಿಸಿ ಕೇಂದ್ರಾಡಳಿತ ಪ್ರದೇಶವನ್ನಾಗಿಸಬೇಕೆಂದೇ ವಾದಿಸಿದವರು. ಈ ನಿಲುವು ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಅಂತಃಸತ್ವಕ್ಕೆ ಕೊಡಲಿಯೇಟು ನೀಡಲಿದೆ. ಹರಿದು ಹಂಚಿ ಹೋಗಿದ್ದ ಒಂದು ಭಾಷಿಕರು ಒಂದೇ ಆಡಳಿತದಡಿಯಲ್ಲಿ ಒಂದುಗೂಡಬೇಕು ಎಂಬ ತ್ಯಾಗ, ಬಲಿದಾನಗಳ ಹೋರಾಟಕ್ಕೆ ಮಸಿ ಬಳಿಯುವಂತಹದ್ದು, ಈ ವಾದವೂ ಸಹ ಸಣ್ಣ ರಾಜ್ಯಗಳಾಗಿ ರಾಜ್ಯಗಳನ್ನು ಒಡೆಯಲು ಬಯಸುವ ಬಿಜೆಪಿಗೆ ಪ್ರಿಯವಾಗಿದೆ. ಮೇಲಾಗಿ ರಾಷ್ಟ್ರಗೀತೆ ಹಾಡಲು ನಿರಾಕರಿಸಿದವರು, ಇದನ್ನಾಡಿದರೆ ವಿದೇಶಿ ವಿದ್ಯಾರ್ಥಿಗಳಿಗೆ ಮುಜುಗರವಾಗುವುದು ಎಂಬ ಬಂಡವಾಳ ಹೂಡಿಕೆ ಲಾಭದ ಸಂವೇದನೆಯಿಂದ ಸಮಾಜಾಯಿಷಿ ನೀಡಿದವರು. ಇಷ್ಟು ಅರ್ಹತೆ ಇರುವವರು ಕನ್ನಡ ಸಮ್ಮೇಳನವನ್ನು ಹೇಗೆ ಉದ್ಘಾಟಿಸುವುದು? ಇದು ಏನು ಸಂಕೇತವನ್ನು ನೀಡಲಿದೆ? ಮೂರ್ತಿಯಂತಹ ಉದ್ಯಮಿಗಳು ವಿಶ್ವ ಕನ್ನಡ ಸಮ್ಮೇಳನಗಳಂತ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಉದ್ಘಾಟಿಸಲಿ, ಆದರೆ ವಿಶ್ವ ಬಂಡವಾಳ ಹೂಡಿಕೆದಾರರಿಗೂ ವಿಶ್ವ ಕನ್ನಡ ಸಮ್ಮೇಳನಕ್ಕೂ ವ್ಯತ್ಯಾಸವನ್ನೇ ಕಾಣದ ಬಿಜೆಪಿ-ಸಂಘ ಪರಿವಾರ ಆರಿಸಿರುವುದು ಬಂಡವಾಳದ ಆರಾಧಕರೇ ಹೊರತು ಸಂಸ್ಕೃತಿ, ನುಡಿ ಸಂರಕ್ಷಕರಲ್ಲ.

ಇಂತಹ ಮೂರ್ತಿಯನ್ನು ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅಪ್ಪಿಕೊಂಡು ಪ್ರೀತಿಸುವುದರಲ್ಲಿ ಅವರದ್ದೇ ಕಾರಣಗಳಿವೆ. ಮೂರ್ತಿ ಸಂಘ ಪರಿವಾರಿ. ಅವರ ಧರ್ಮಪತ್ನಿ ಸುಧಾಮೂರ್ತಿಯವರು ಅದಕ್ಕೆ ಸಾಥಿ. ಅವರು ಸಾಹಿತ್ಯ ಬರೆಯಬಹುದು. ಅವರ ಕನ್ನಡ ಸೇವೆಯೆಂದರೆ ಆರ್‌ಎಸ್‌ಎಸ್ ರಾಷ್ಟ್ರೋತ್ಥಾನ ಪ್ರಕಾಶನದ ಪುಸ್ತಕಗಳನ್ನು ವೈಚಾರಿಕ ಸಾಹಿತ್ಯ ಹಂಚಿಕೆಯನ್ನು ಜ್ಞಾನ ಹಂಚಿಕೆ ಕಾರ್ಯಕ್ರಮದಡಿ ಹಂಚುತ್ತಿದ್ದಾರೆ. ಫ್ಯಾಸಿಸ್ಟ್ ವಿಚಾರಧಾರೆಯ ಪುಸ್ತಕಗಳನ್ನು ಎಳೆಯ ಮನಸ್ಸುಗಳಿಗೆ ವಿಷಪ್ರಾಷನ ಮಾಡಿಸಲು ಹರಡುವುದೇ ಪುಣ್ಯ ಕಾರ್ಯವೆಂದು ಬಗೆದವರು.

ನಾವು ಆಶಾವಾದಿಗಳು

ಕ್ಷಮಿಸಿ, ಒಂದು ಸಮ್ಮೇಳನದ, ಒಬ್ಬ ಉದ್ಘಾಟಕರ ಬಗ್ಗೆ ಇಷ್ಟೊಂದು ವಾದಿಸುವುದು ಅತೀ ಎನ್ನಿಸಬಹುದು. ಆದರೆ ಇದು ಮೂರ್ತಿ ಅಥವಾ ಕೀರ್ತಿ ಹೆಸರಿನ ಪ್ರಶ್ನೆಯಲ್ಲ. ಒಂದು ಮೌಲ್ಯ, ಒಂದು ಸಂಸ್ಕೃತಿ, ನಾಡು ಉಳಿವಿನ ಬೆಳವಣಿಗೆಗಳ ಸಂಕೇತದ ಪ್ರಶ್ನೆ. ಆದ್ದರಿಂದ ಆಳುವವರನ್ನು ಪ್ರಶ್ನಿಸಲೇಬೇಕಾಗುತ್ತದೆ. ಇಷ್ಟೆಲ್ಲಾ ನಡುವೆ ಅಪಾರ ನಿರೀಕ್ಷೆಯನ್ನಿಟ್ಟುಕೊಂಡಿರುವ ಕೋಟ್ಯಾಂತರ ಕನ್ನಡಿಗರ ಆಶಯಗಳಿಗೆ, ಹಿತಗಳಿಗೆ ಈ ಸಮ್ಮೇಳನ ಹೇಗೆ ಎಷ್ಟು ಇಂಬು ನೀಡಲಿದೆಯೆಂಬ ಕುತೂಹಲ ಎಲ್ಲರಲ್ಲಿ! ಐಶ್ವರ್ಯ ರೈ ರಂಥ ಸ್ಟಾರ್ ಅತಿಥಿಗಳ ಎದುರಿನಲ್ಲಿ ನಾಡಿಗೆ ಏನು ಕಾದಿದೆ ನೋಡೋಣ.

ಶೇ. 33 ಮೀಸಲಾತಿ : ಅದೇ 'ಸರ್ವಸಮ್ಮತಿ'ಯ ನೆಪ

ರಾಜ್ಯಸಭೆ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33 ಶೇ. ಮೀಸಲಾತಿಯ ಮಸೂದೆಯನ್ನು ಅಂಗೀಕರಿಸಿ ಮಾರ್ಚ್ 9ಕ್ಕೆ ಒಂದು ವರ್ಷವಾಯಿತು. ಯುಪಿಎ-2 ಸರಕಾರದ ಆಧಿಕಾರಾವಧಿ ಆರಂಭವಾದಾಗ ರಾಷ್ಟ್ರಪತಿಗಳ ಭಾಷಣದಲ್ಲಿ ಈ ಮಸೂದೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಲಾಗಿತ್ತು. ಆದರೆ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವ ಸಂದರ್ಭದಲ್ಲಾದರೂ ಭಾರತದ ಲೋಕಸಭೆ ಅದನ್ನು ಅಂಗೀಕರಿಸಬಹುದು ಎಂಬ ನಿರೀಕ್ಷೆ ಮತ್ತೆ ಹುಸಿಯಾಗಿದೆ. ಮಹಿಳಾ ಸಂಘಟನೆಗಳು ಈ ಬಗ್ಗೆ ಲೋಕಸಭಾದ್ಯಕ್ಷರಿಗೆ ಮನವಿ ಸಲ್ಲಿಸಿದ್ದರೂ ಯುಪಿಎ-2 ಸರಕಾರ ಈ ಕುರಿತು ಮುತುವರ್ಜಿ ವಹಿಸಿದಂತೆ ಕಾಣಲಿಲ್ಲ. ಮತ್ತೆ ಲೋಕಸಭೆಯಲ್ಲಿ ಇದರಲ್ಲಿ ಒಳಮೀಸಲಾತಿಯ ಬಗ್ಗೆ 'ಸರ್ವಸಮ್ಮತಿ' ಏರ್ಪಡಬೇಕೆಂಬ ಮಾತು ಕೇಳಬಂತು.

ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ವಿಷಯದಲ್ಲಿ ಭಾರತ ವಿಶ್ವದಲ್ಲಿ 98ನೇ ಸ್ಥಾನದಲ್ಲಿದ್ದು, ನೆರೆಯ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ನೇಪಾಳಕ್ಕಿಂತಲೂ ಕೆಳಗಿದೆ ಎಂದು ಅಂತರ ಸಂಸದೀಯ ಸಂಘ(ಐಪಿಯು) ಪ್ರಕಟಿಸಿದ ಅಂಕಿ-ಅಂಶಗಳು ತಿಳಿಸುತ್ತಿವೆ. ಭಾರತದಲ್ಲಿ 545 ಲೋಕಸಭಾ ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ ಕೇವಲ 59(10.8 ಶೇ.) ಮತ್ತು ರಾಜ್ಯಸಭೆಯಲ್ಲಿ 242ರಲ್ಲಿ 25 (10.3ಶೇ.). ಪಾಕಿಸ್ತಾನ ಕೆಳ ಸದನದಲ್ಲಿ 22.2 ಶೇ. ಮಹಿಳೆಯರನ್ನು ಮತ್ತು ಮೇಲಣ ಸದನದಲ್ಲಿ 17 ಶೇ. ಹೊಂದಿದ್ದು 51ನೇ ಸ್ಥಾನದಲ್ಲಿದೆ. ನೇಪಾಳ ಸಂಸತ್ತಿನಲ್ಲಿ ಆಗಲೇ 33.3 ಶೇ. ಪ್ರಾತಿನಿಧ್ಯ ಹೊಂದಿದ್ದು ವಿಶ್ವದಲ್ಲಿ 18ನೇ ಸ್ಥಾನದಲ್ಲಿದೆ. ಬಾಂಗ್ಲಾದೇಶ 18.6 ಶೇ. ಮಹಿಳಾ ಪ್ರಾತಿನಿಧ್ಯ ಹೊಂದಿದ್ದು 65ನೇ ಸ್ಥಾನದಲ್ಲಿದೆ; ಚೀಣಾ ಕೂಡ 21.3 ಶೇ. ಮಹಿಳಾ ಪ್ರಾತಿನಿಧ್ಯ ಸಾಧಿಸಿದ್ದು, 55ನೇ ಸ್ಥಾನದಲ್ಲಿದೆ.

ಕೆಳಸದನದಲ್ಲಿ 56? ಮತ್ತು ಮೇಲಣ ಸದನದಲ್ಲಿ ಶೇ.34 ಮಹಿಳಾ ಪ್ರಾತಿನಿಧ್ಯ ಪಡೆದಿರುವ ರ್‍ವಾಂಡ ಮೊದಲ ಸ್ಥಾನದಲ್ಲಿದ್ದರೆ, 45 ಶೇ. ಮಹಿಳಾ ಪ್ರಾತಿನಿಧ್ಯ ಹೊಂದಿರುವ ಸ್ವೀಡನ್ 2ನೇ ಸ್ಥಾನದಲ್ಲಿ, 44.5? ಹೊಂದಿರುವ ದಕ್ಷಿಣ ಆಫ್ರಿಕಾ 3ನೇ ಸ್ಥಾನದಲ್ಲಿ ಹಾಗೂ 43.2 ಶೇ. ಹೊಂದಿರುವ ಕ್ಯೂಬಾ 4ನೇಸ್ಥಾನದಲ್ಲಿದೆ.

ಗಮನಿಸಬೇಕಾದ ಸಂಗತಿಯೆಂದರೆ ಮಹಿಳಾ ಪ್ರಾತಿನಿಧ್ಯದಲ್ಲಿ ಅತೀ ಹಳೆಯ ಪ್ರಜಾಪ್ರಭುತ್ವವೆನಿಸಿಕೊಳ್ಳುವ ಬ್ರಿಟನಿನಲ್ಲಿ ಮತ್ತು ಅತಿ ಶ್ರೀಮಂತ, ಬಲಿಷ್ಟ ಪ್ರಜಾಪ್ರಭುತ್ವ ಎನಿಸಿಕೊಂಡಿರುವ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸ್ಥಾನ ಅನುಕ್ರಮವಾಗಿ 62 ಮತ್ತು 72. ಕೊಲ್ಲಿ ಪ್ರದೇಶದಲ್ಲಿ ಅದರ ಪರಮ ಮಿತ್ರರಾಗಿರುವ ಸೌದಿ ಅರೇಬಿಯ, ಕತಾರ್ ಮತ್ತು ಓಮನ್ ಶೂನ್ಯ ಮಹಿಳಾ ಪ್ರಾತಿನಿಧ್ಯದ 12 ದೇಶಗಳಲ್ಲಿ ಸೇರಿವೆ.

ಯುಪಿಎ ದರ್ಬಾರ್ : ಸಿವಿಸಿ ನೇಮಕ ರದ್ದು

ಪುಟ 13 ರಿಂದ

ಅತಿ ದೊಡ್ಡ ಪಕ್ಷ ಎಂಬ ಸಂಗತಿಯನ್ನು ಕಾಂಗ್ರೆಸ್ ವಿರುದ್ಧ ಬಳಸಲು ಪ್ರಯತ್ನಿಸಿದರೆ, 2ಜಿ ಹಗರಣದಲ್ಲಿ ಡಿಎಂಕೆ ಪಾತ್ರವನ್ನು ಅದರ ವಿರುದ್ಧ ಬಳಸಿಕೊಳ್ಳಲು, ಆಮೂಲಕ ಬಹಳ ವರ್ಷಗಳ ನಂತರ ತಮಿಳುನಾಡಿನಲ್ಲಿ ಸರಕಾರದಲ್ಲಿ ಭಾಗವಹಿಸುವ ಅವಕಾಶ ಗಿಟ್ಟಿಸಲು ಕಾಂಗ್ರೆಸ್ ಪ್ರಯತ್ನಿಸಿತು, ಇದರ ಪರಿಣಾಮವೇ ಈ ಹಗ್ಗ- ಜಗ್ಗಾಟ ಎನ್ನಲಾಗುತ್ತಿದೆ.

ಸದ್ಯಕ್ಕೆ ಯುಪಿಎ-2 ಬಿಕ್ಕಟ್ಟು ಶಮನವಾದಂತಿದೆ, ಆದರೆ ಇದರ ಹಿಂದೆ ಏನಿದೆ, ಈ ಜಗ್ಗಾಟ ನಿಲುಗಡೆ ತಾತ್ಕಾಲಿಕವೇ, ಸಿಬಿಐ ಎ.ರಾಜ ಅವರ ಮೇಲೆ ಚಾರ್ಜಶೀಟ್ ಹಾಕಿ ಆತ ಕನಿಷ್ಟ ಒಂದು ವರ್ಷ ಜೈಲಿನಲ್ಲಿರುವಂತಾಗುವ, ಡಿಎಂಕೆ ಮುಖ್ಯಸ್ಥರ ಮತ್ರಿ ಕನ್ನಿಮೋಳಿಯ ವಿಚಾರಣೆ ನಡೆಸುವ ಸಂಭವವಿದ್ದು ಮುಂದೇನಾಗಬಹುದು ಎಂಬ ಬಗ್ಗೆ ಊಹಾಪೋಹಗಳು ನಡೆದಿವೆ.

ತಮಿಳುನಾಡಿನ ಪ್ರಭಾವ ಪಶ್ಚಿಮ ಬಂಗಾಲದಲ್ಲಿಯೂ ಕಾಣುತ್ತಿದೆ. ಅಲ್ಲಿ ಈಗ ವಿಧಾನಸಭೆಯಲ್ಲಿ ಕೇವಲ 19 ಸ್ಥಾನಗಳನ್ನು ಪಡೆದಿರುವ ಕಾಂಗ್ರೆಸ್ 98 ಸ್ಥಾನಗಳನ್ನು ತೃಣಮೂಲದಿಂದ ಕೇಳುತ್ತಿದೆ. ಡಿಎಂಕೆ ಬೆದರಿಕೆಯ ಹಿನ್ನೆಲೆಯಲ್ಲಿ, ಅದಕ್ಕಿಂತ ಒಂದು ಹೆಚ್ಚು ಲೋಕಸಭಾ ಸದಸ್ಯರನ್ನು ಹೊಂದಿ ಯುಪಿಎ-2 ರಲ್ಲಿ 2ನೇ ಸ್ಥಾನದಲ್ಲಿರುವ ತೃಣಮೂಲ ಕಾಂಗ್ರೆಸ್ 40-45 ಸ್ಥಾನಗಳಿಗಿಂತ ಹೆಚ್ಚು ಕೊಡುವುದಿಲ್ಲ ಎಂದಿತ್ತು. ಈಗ ಡಿಎಂಕೆ ಬೆದರಿಕೆಯ ನಂತರವೂ 63 ಸೀಟುಗಳನ್ನು ಪಡೆದಿರುವುದು ತಮಗೆ ಸಿಕ್ಕಿರುವ ಜಯ ಎಂದು ಭಾವಿಸಿರುವ ಕಾಂಗ್ರೆಸ್ ಪಶ್ಚಿಮ ಬಂಗಾಲದಲ್ಲಿಯೂ ಬಲವಾದ ಚೌಕಾಸಿಗಿಳಿಯಲಿದೆ ಎಂದು ನಿರೀಕ್ಷಿಸಲಾಗುತ್ತಿದೆ.


ಕೇರಳದಲ್ಲಿ ಕೇಂದ್ರದ ಯುಪಿಎ ದಂತೆ ಯುಡಿಎಫ್ ನಲ್ಲಿ ನೇತೃತ್ವದ ಪಕ್ಷವಾಗಿದ್ದರೂ ಕೂಟ ಕಾಂಗ್ರೆಸ್ ಇದೇ ಜಟಾಪಟಿಗಿಳಿಯಬೇಕಾಗಿದೆ. ಆದರೆ ಈ ಯಾವ ಜಟಾಪಟಿಯೂ ಸೈದ್ಧಾಂತಿಕವಲ್ಲ, ಕೇವಲ ಅಧಿಕಾರ ಹಂಚಿಕೆಗಾಗಿ ಎಂಬುದು ಯುಪಿಎ-2 ರ ಸ್ವರೂಪಕ್ಕೆ ಹಿಡಿದ ಕೈಗನ್ನಡಿ.

ರಾಜಕೀಯ ಸ್ವಾಮಿ

ರಾಜಕಾರಣಿ ಆಗಿ ಮಠದೊಳಗ ಸ್ವಾಮಿ
ಅಲೆಯುತಿಹ ಬಲ್ಲಿರಾ ಊರೂರು ದೋಮಿ
ಮಠ ಗುಡಿಯ ಚಾತುರ್ವರ್ಣ ಎಂದೆಂಬ ಮಾರಿ
ಊರೊಳಗೆ ನುಗ್ಗಿಸಲು ಪೂರ್ವ ತಯಾರಿ

- ವಿಡಂಬಾರಿ

JANASHAKTHI KANNADA VARA PATRIKE MARCH 20, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO



ಹಿಂದುತ್ವ ಮುಂದೊಡ್ಡುವ ಸಾಂಸ್ಕೃತಿಕ ಸವಾಲುಗಳಿಗೆ ಉತ್ತರ ನೀಡುವ 'ಗೋರಾ'

'ಗೋರಾ' ಮತ್ತು 'ಟಾಗೋರ್-ಗಾಂಧಿ' ವಿಚಾರಸಂಕಿರಣಗಳು

ರವೀಂದ್ರನಾಥ ಟ್ಯಾಗೋರರ 150ನೇ ಜನ್ಮವರ್ಷಾಚರಣೆಯ ಅಂಗವಾಗಿ 'ಸಮುದಾಯ' ಸಂಘಟನೆಯು ಸಾಹಿತ್ಯ ಅಕಾಡೆಮಿ, ಪ್ರಜಾವಾಣಿ ಪತ್ರಿಕೆ ಸೇರಿದಂತೆ ವಿವಧ ಸಂಸ್ಥೆಗಳ ಸಹಯೋಗದಲ್ಲಿ ಫೆಬ್ರವರಿ 13-16, 2011 ರ ನಡುವೆಬೆಂಗಳೂರಿನಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಘಟಿಸಿತ್ತು. ಫೆಬ್ರವರಿ 13 ರಂದು ನಡೆದ 'ಟ್ಯಾಗೋರ್ ಮತ್ತು ಗಾಂಧಿ' ವಿಚಾರಸಂಕಿರಣದ ಹಾಗೂ 16 ರಂದು ನಡೆದ ರವೀಂದ್ರರ 'ಗೋರಾ' ಕಾದಂಬರಿ ಕುರಿತ ವಿಚಾರಸಂಕಿರಣದ ವರದಿ ಇದು.

ಟಾಗೋರ್-150 ಸಮುದಾಯ ರಾಷ್ಟ್ರೀಯ ಉತ್ಸವದ ಭಾಗವಾಗಿ ಎರಡು ಮಹತ್ವದ ರಾಷ್ಟ್ರೀಯ ವಿಚಾರ ಸಂಕಿರಣಗಳು ಜರುಗಿದವು. ಒಂದು ಟಾಗೋರ್ ಅವರ ಪ್ರಸಿದ್ಧ ಕಾದಂಬರಿ 'ಗೋರಾ' ಬಗ್ಗೆ. ಇನ್ನೊಂದು ಭಾರತದ ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಪ್ರಸಿದ್ಧವಾದ ಗಾಂಧೀ-ಟಾಗೋರ್ ಸಂವಾದದ ಬಗ್ಗೆ. ಈ ವಿಚಾರ ಸಂಕಿರಣಗಳು ಇನ್ನೂ ಪ್ರಸ್ತುತವಾದ ಟಾಗೋರ್ ಅವರ ಕೃತಿ-ಚಿಂತನೆಗಳ ಎರಡು ಆಯಾಮಗಳ ಬಗ್ಗೆ ಮಂಥನ ನಡೆಸಿತು.

'ಗೋರಾ' ಟಾಗೋರ್ ಬಂಗಾಳ ವಿಭಜನೆಯ ವಿರುದ್ಧ ನಡೆದ ಸ್ವರಾಜ್ ಚಳುವಳಿಯ ಹಿನ್ನೆಲೆಯಲ್ಲಿ ಬರೆದು 1907 ರಲ್ಲಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಅವರ ಮಹತ್ವದ ಕಾದಂಬರಿಗಳಲ್ಲಿ ಒಂದು. ರಾಷ್ಟ್ರೀಯ ಚಳುವಳಿಯಲ್ಲಿ ಎರಡು ಧಾರೆಗಳ ನಡುವೆ ಆಗ ನಡೆಯುತ್ತಿದ್ದ ಸಂಘರ್ಷ ಅದರ ಮೂಲವಸ್ತು. ಭಾರತದ 'ಭವ್ಯ ಪರಂಪರೆಯ ಪುನರುತ್ಥಾನದ' ಮೇಲೆ ಆಧಾರಿತ ರಾಷ್ಟ್ರೀಯತೆಯದು ಒಂದು ಧಾರೆ. ಪ್ರಜಾಪ್ರಭುತ್ವ ಮತ್ತಿತರ ಆಧುನಿಕ ಉದಾರವಾದಿ ಮೌಲ್ಯಗಳ ಮೇಲೆ ಆಧಾರಿತ ಆಧುನಿಕ ಧಾರೆ ಇನ್ನೊಂದು. ಕಾದಂಬರಿಯ ನಾಯಕ ಗೋರಾ ಮೊದಲ ಧಾರೆಯ ಪ್ರತಿಪಾದಕ. ಆದರೆ ಆತ ನಿಜವಾದ ಭಾರತವನ್ನು ಅನ್ವೇಷಿಸುತ್ತಾ ಹೋದ ಹಾಗೆ ಎರಡನೇ ಧಾರೆಯತ್ತ ಒಲಿಯುವ ಸಂಕೀರ್ಣ ಕಥೆ ಅಲ್ಲಿದೆ. 'ಆನಂದ ಮಠ' ಕಾದಂಬರಿಯ ಮೂಲಕ ಮೊದಲ ಧಾರೆಯತ್ತ ವಾಲಿದ ಬಂಕಿಮಚಂದ್ರ ಚಟರ್ಜಿಯವರಿಗೆ ಟಾಗೋರರ ಉತ್ತರ 'ಗೋರಾ' ಎನ್ನುವವರೂ ಇದ್ದಾರೆ. ಬಂಗಾಳ ವಿಭಜನೆಯ ಬೆನ್ನಲ್ಲಿ ಕೋಮು ಗಲಭೆಗಳೂ ನಡೆದಿದ್ದು, ಗೋರಾ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದಾಗ ಹಲವು ರೀತಿಯ ತೀವ್ರ ವಾದ-ವಿವಾದಗಳಿಗೆ ಕಾರಣವಾಗಿತ್ತಂತೆ.

'ಚಿಮೂ ಗೋರಾ ಓದಬೇಕು'

ಆಕ್ರಮಣಕಾರಿ ಹಿಂದುತ್ವ ಪುನಃ ಬಲಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಗೋರಾದ ಬಗ್ಗೆ ವಿಚಾರ ಸಂಕಿರಣ ಅತ್ಯಂತ ಸಮಯೋಚಿತವಾಗಿದೆ. 'ಗೋರಾ' ಆಧುನಿಕ ಭಾರತದ ನಾಗರಿಕತೆಯ ಆಕ್ರಮಣಕಾರಿ ಹಾಕುವ ಕಾದಂಬರಿ. ಆಕ್ರಾಮಕ ಹಿಂದುತ್ವ ಮುಂದೊಡ್ಡುವ ಸಾಂಸ್ಕೃತಿಕ ವಾದಗಳಿಗೆ ಗೋರಾ ಸಮರ್ಥವಾಗಿ ಉತ್ತರಿಸುತ್ತದೆ. ಇದಕ್ಕಾಗಿ ನಾವೆಲ್ಲರೂ ಗೋರಾವನ್ನು ಓದಬೇಕು. ಚಿದಾನಂದ ಮೂರ್ತಿಯವರಂತೂ ಈ ಕಾದಂಬರಿಯನ್ನು ಅಗತ್ಯವಾಗಿ ಓದಬೇಕು ಎಂದು ಅಧ್ಯಕ್ಷೀಯ ಭಾಷಣ ಮಾಡುತ್ತಾ ಡಾ. ಯು.ಆರ್. ಅನಂತಮೂರ್ತಿಯವರು ಮಾರ್ಮಿಕವಾಗಿ ಹೇಳಿದರು. ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಡಾ. ಎಂ.ವಿ.ವಸು ಗೋರಾ ಕಾದಂಬರಿಯನ್ನು ಒಂದು ಚಾರಿತ್ರಿಕ ಆಕರವಾಗಿ ನೋಡುತ್ತಾ, ಆರಂಭದ ದಿನಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯ ವಿಕಾಸವಾದ ಬಗೆ ಮತ್ತು ಎರಡು ಧಾರೆಗಳ ತಾಕಲಾಟವನ್ನು ಅದು ದಾಖಲಿಸುವ ಬಗೆಗೆ ಮಾತನಾಡಿದರು.



ಟ್ಯಾಗೋರ್ 150 ರ ಸಂದರ್ಭದಲ್ಲಿ ಎಂ.ಎಸ್.ಸತ್ಯುರವರು ನಿರ್ದೇಶಿಸಿದ 'ಸಮುದಾಯ' ತಂಡ ಅಭಿನಯಿಸಿದ 'ರಾಜ ರಾಣಿ ಮಂತ್ರಿ ತಂತ್ರಿ' ನಾಟಕದ ಒಂದು ದೃಶ್ಯ.

ಪ್ರೊ.ಕೆ.ಪಿ.ವಾಸುದೇವನ್ ಅವರು ಗೋರಾವನ್ನು ಒಂದು ಸಾಹಿತ್ಯ ಕೃತಿಯಾಗಿ ನೋಡಿ ಅದರ ವಸ್ತು ಮತ್ತು ತಂತ್ರಗಳನ್ನು ವಿವರವಾಗಿ ವಿಶ್ಲೇಷಿಸಿದರು. ಅದರ ಹಲವು ಆಯಾಮಗಳ ಅನಾವರಣ ಮಾಡಿದರು. ಕಾದಂಬರಿಯಿಂದ ಹಲವು ಉದಾಹರಣೆಗಳ ಮೂಲಕ ಅದರ ಕಲಾತ್ಮಕತೆ ಮತ್ತು ಸಶಕ್ತ ಕತೆಗಾರಿಕೆಯನ್ನು ವಿವರಿಸಿದರು. ಜನವಾದಿ ಮಹಿಳಾ ಸಮಿತಿಯ ಉಪಾಧ್ಯಕ್ಷೆ ಕೆ.ನೀಲಾ ಅವರು ಗೋರಾ ಕಾದಂಬರಿಯಲ್ಲಿ ಮಹಿಳಾ ಸಂವೇದನೆ ಬಗ್ಗೆ ಒತ್ತು ನೀಡಿ ಮಾತನಾಡಿದರು. ಗೋರಾ ತಾಯಿ, ಗೆಳತಿ ಮುಂತಾದ ಕಾದಂಬರಿಯಲ್ಲಿ ಬರುವ ಮಹಿಳಾ ಪಾತ್ರಗಳನ್ನು ವಿಶ್ಲೇಷಿಸಿದರು. ಆ ನಂತರ ಕಾದಂಬರಿ ಬಗ್ಗೆ ಮುಕ್ತ ಸಂವಾದ ನಡೆಯಿತು. ಡಾ. ಮೀನಾಕ್ಷಿ ಬಾಳಿ ವಿಚಾರ ಸಂಕಿರಣದ ನಿರೂಪಣೆ ಮಾಡಿದರು.

'ಸ್ಥಳೀಯ ಆಧುನಿಕತೆ'ಯ ಎರಡು ಮಾದರಿಗಳು

ಗಾಂಧಿ-ಟಾಗೋರ್ ಸಂವಾದ-ವಿವಾದ ರಾಷ್ಟ್ರೀಯ ಚಳುವಳಿಯ ಸಂಕಥನದ ಭಾಗವಾಗಿ ನಡೆದ ಹಲವು ಮಹತ್ವದ ಸಂವಾದಗಳಲ್ಲಿ ಒಂದು. ಪರಸ್ಪರ ಗೌರವ ಮತ್ತು ಹಲವು ಸಮಾನ ಉದ್ದೇಶಗಳು ಇರುವಾಗಲೇ ಅವರ ನಡುವೆ ಇದ್ದ ಹಲವು ಭಿನ್ನಾಭಿಪ್ರಾಯಗಳ ಬಗ್ಗೆ ಯಾವುದೇ ಮುಚ್ಚುಮರೆಯಿಲ್ಲದೆ ಸಾರ್ವಜನಿಕವಾಗಿ ನಡೆಸಿದ ಮುಕ್ತ ಸಂವಾದ ಈಗಲೂ ಅಧ್ಯಯನ ಯೋಗ್ಯ. ಅದರ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಜಾಧವಪುರ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕಿ ಮತ್ತು ಪಶ್ಚಿಮ ಬಂಗಾಳ ಮಹಿಳಾ ಆಯೋಗದ ಅಧ್ಯಕ್ಷೆ ಪ್ರೊ. ಮಾಲಿನಿ ಭಟ್ಟಾಚಾರ್ಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಬಸವರಾಜ ಕಲ್ಗುಡಿ ವಿವರವಾದ ಪ್ರಬಂಧಗಳನ್ನು ಮಂಡಿಸಿದರು.

ಮಾಲಿನಿ ಅವರು ಅಸಹಕಾರ ಮತ್ತು ಸ್ವರಾಜ್ ಪರಿಕಲ್ಪನೆಗಳ ಬಗೆಗಿನ ಸಂವಾದದ ಮೊದಲ ಭಾಗದ ಬಗ್ಗೆ, ಅದರಲ್ಲೂ ಟಾಗೋರ್ ಅವರ ವಾದಗಳ ಬಗ್ಗೆ ಹೆಚ್ಚು ಬೆಳಕು ಬೀರಿದರು. ಪ್ರೊ.ಸಬ್ಯಸಾಚಿ ಭಟ್ಟಾಚಾರ್ಯ ಅವರು ಸಂಪಾದಿಸಿದ 'ಮಹಾತ್ಮಾ ಮತ್ತು ಕವಿವರ್ಯ' ಪುಸ್ತಕದಲ್ಲಿ ಪ್ರಕಟವಾದ ಇಬ್ಬರ ನೇರ ಪತ್ರಗಳು ಸಂವಾದ ರೂಪದ ಲೇಖನಗಳನ್ನು ಮೀರಿ, ಟಾಗೋರರ ಇತರ ಹಲವು ಲೇಖನ ಮತ್ತು ಸಾಹಿತ್ಯ ಕೃತಿಗಳಲ್ಲಿ (ಮುಖ್ಯವಾಗಿ ಕಥೆ ಕಾದಂಬರಿ ನಾಟಕಗಳಲ್ಲಿ - 'ಗೋರಾ', 'ಘರೇ ಬೈರೆ' ಇತ್ಯಾದಿ) ಈ ಬಗ್ಗೆ ಅವರ ವಿಶ್ಲೇಷಣೆ ಯನ್ನು ಗಮನಕ್ಕೆ ತೆಗೆದುಕೊಂಡರು. ಗಾಂಧೀಜಿ ಅವರು ಯುರೋಪಿಯನ್ ನಾಗರಿಕತೆ-ಸಂಸ್ಕೃತಿಗಳನ್ನು ತಿರಸ್ಕರಿಸಿ ಭಾರತೀಯ ಸಾಂಪ್ರದಾಯಿಕ ವಿಚಾರಗಳ ಆಧಾರದ ಮೇಲೆ ತಮ್ಮ ರಾಜಕೀಯ ರೂಪಿಸಿದರು. ಟಾಗೋರ್ ಯುರೋಪಿಯನ್ ನಾಗರಿಕತೆ- ಸಂಸ್ಕೃತಿಗಳ ಜತೆ ಕೊಡು-ಕೊಳ್ಳು ಸಂಬಂಧದ ಬಗ್ಗೆ ಹೆಚ್ಚು ಉದಾರವಾಗಿದ್ದ ಆಧುನಿಕತಾವಾದಿ. ರಾಜಕೀಯ ಚಿಂತನೆಗಳಿಂದ ದೂರವಿದ್ದ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದ ಕವಿ ಎಂದು ಬಿಂಬಿಸುವ ಸರಳೀಕೃತ ಅಭಿಪ್ರಾಯವನ್ನು ಮಾಲಿನಿ ಒಪ್ಪುವುದಿಲ್ಲ. ಟಾಗೋರರ ಕೃತಿಗಳಲ್ಲಿ ರಾಜಕೀಯ ಚಿಂತನೆಗಳ ಚರ್ಚೆ ಹಾಸು ಹೊಕ್ಕಾಗಿರುವುದನ್ನು ಅವರು ಎತ್ತಿ ತೋರಿಸಿದರು.

ಗಾಂಧೀಜಿ ವಿಚಾರಗಳ ಪ್ರಮುಖ ತಂತುಗಳು ಆಧುನಿಕವಾಗಿದ್ದವು. 'ಆಧುನಿಕ ಮೌಲ್ಯಗಳನ್ನು ಸಾಂಪ್ರದಾಯಿಕ ಉಡಿಗೆಯಲ್ಲಿ ಸಶಕ್ತವಾಗಿ ಮುಂದಿಟ್ಟ, ಭಾರತೀಯ ಸಂಸ್ಕೃತಿಯ ಪೂರ್ಣವಾಗಿ ಅಚಾರಿತ್ರಿಕ ಆದರೆ ಅತ್ಯಂತ ಸೃಜನಾತ್ಮಕ ಮರು-ಓದು ಮಾಡಿದ' ಆಧುನಿಕತಾವಾದಿ ಎಂಬ ಪ್ರೊ. ಇರ್ಫಾನ್ ಹಬೀಬ್ ಅವರ ತಿಳುವಳಿಕೆಯನ್ನು ಮಾಲಿನಿ ಒಪ್ಪುತ್ತಾರೆ. ಇಬ್ಬರೂ ಎರಡೂ (ಯುರೋಪಿಯನ್ ಮತ್ತು ಭಾರತೀಯ) ನಾಗರಿಕತೆ ಮತ್ತು ಸಂಸ್ಕೃತಿಗಳಿಂದ ಉತ್ತಮ ಅಂಶಗಳನ್ನು ಆಯ್ದು ಈ ನೆಲದಲ್ಲಿ ಬೇರು ಬಿಡಬಹುದಾದ ಸ್ಥಳೀಯ ಆಧುನಿಕತೆಯನ್ನು ಕಟ್ಟಲು ಪ್ರಯತ್ನಿಸುತ್ತಿದ್ದರು. ಇಬ್ಬರೂ ಎರಡರಲ್ಲೂ ಇದ್ದ ನಕಾರಾತ್ಮಕ ಅಂಶಗಳನ್ನು ತೊಡೆಯುವ ಸುಧಾರಣೆಗಳ ಪರವಾಗಿದ್ದವರು.

ಆಧ್ಯಾತ್ಮಿಕ ಮತ್ತು ಅನುಭಾವಿ ಪಂಥಗಳ ನಡುವಣ ಸಂವಾದ

ದೇಶದ ಬಹುಸಂಖ್ಯಾತ ಜನರ ಸಮಸ್ಯೆಗಳನ್ನು ಅರಿಯದ ಇಂಗ್ಲಿಷ್ ಶಿಕ್ಷಣ ಪಡೆದ ಮಧ್ಯಮ ಮತ್ತು ಪ್ರತಿಷ್ಠಿತ ಶ್ರೀಮಂತ ವರ್ಗ ತನ್ನ ರಾಜಕೀಯ ಅಭಿಪ್ರಾಯಗಳನ್ನು ಅವರ ಮೇಲೆ ಹೇರುತ್ತಿದೆ. ಅಸಹಕಾರ ಮತ್ತು ಸ್ವರಾಜ್ ಚಳುವಳಿಯಲ್ಲಿ ಈ ಹೇರಿಕೆಯ ಹಲವು ಅಂಶಗಳನ್ನು ಟಾಗೋರ್ ವಿರೋಧಿಸಿದರು. ಶಿಕ್ಷಣ ಮತ್ತು ಬಟ್ಟೆ

ಪುಟ 6 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar. BANGALORE-560027, Karnataka on behalf of / owned by COMMUNIST PARTY OF
INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at
BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH